॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀ ಗುರುಭ್ಯೋ ನಮಃ

ಅಥ ದ್ವಾದಶೋಧ್ಯಾಯಃ

೧೨ನೇ ಅಧ್ಯಾಯವು

ಬಭೂವ ಗಂಧರ್ವಮುನಿಸ್ತು ದೇವಕಃ ಸ ಆಸ ಸೇವಾರ್ಥಮಥಾssಹುಕಾದ್ಧರೇಃ ॥
ಸ ಉಗ್ರಸೇನಾವರ ಜಸ್ತಥೈವ ನಾಮಾಸ್ಯ ತಸ್ಮಾದಜನಿಸ್ಮ ದೇವಕೀ ॥ ೧ ॥

ಶ್ರೀಮನ್ಮಧ್ವಾಚಾರ್ಯರು ಈವರೆಗೆ ಶ್ರೀ ಕೃಷ್ಣನ ಪಿತೃವಂಶವನ್ನು ಸಂಕ್ಷೇಪದಿಂದ ನಿರೂಪಿಸಿ ಮಾತೃವಂಶವನ್ನು ಹೇಳಂತ್ತಾರೆ.

(ಪೂರ್ವಂ=ಹಿಂದೆ) ಯಃ=ಯಾವ ದೇವಕಃ=ದೇವಕನೆಂಬ ಗಂಧರ್ವಮುನಿಃ=ಗಂಧರ್ವಋಷಿಯು ಬಭೂವ=ಇದ್ದನೋ ಸಃ=ಆ ದೇವಕನು ಹರೇಃ = ಪರಮಾತ್ಮನ ಸೇವಾರ್ಥಂ=ಸೇವೆ ಮಾಡುವುದಕ್ಕೋಸ್ಕರ ಆಹುಕಾತ್=ಉಗ್ರಸೇನನ ತಂದೆಯಾದ ಆಹುಕನೆಂಬ ಯಾದವನ ದೆಸೆಯಿಂದ ಆಸ=ಹುಟ್ಟಿದನು. ಸಃ=ಆ ದೇವಕನಂ ಉಗ್ರಸೇನಾವರಜಃ=ಉಗ್ರಸೇನನ ತಮ್ಮನಂ ಆಸ್ಯ=ಇವನ ನಾಮಾ=ಹೆಸರಂ ತಥೈವ=ಹಿಂದಿನ ಜನ್ಮದಲ್ಲಿ ಹೇಗೋ ಹಾಗೆಯೇ ದೇವಕನೆಂಬುದಾಗಿ ಇದ್ದಿತು. ತಸ್ಮಾತ್=ಆ ದೇವಕನ ದೆಸೆಯಿಂದ ದೇವಕೀ=ಕೃಷ್ಣನ ತಾಯಿಯಾದ ದೇವಕಿಯು ಅಜನಿಸ್ಮ=ಹುಟ್ಟಿದಳು. ॥ ೧ ॥

ಅನ್ಯಾಶ್ಚ ಯಾಃ ಕಾಶ್ಯಪಸ್ಯೈ ಭಾರ್ಯಾ ಜ್ಯೈಷ್ಠ್ಯಂತು ತಾವಾಹುಕ ಆತ್ಮ ಪುತ್ರ್ಯಮ್ ।
ಚಕಾರ ತಸ್ಮಾದ್ಧಿ ಪಿತೃಷ್ವಸಾ ಸಾ ಸ್ವಸಾಚ ಕಂಸಸ್ಯ ಬಭೂವ ದೇವಕೀ ॥ ೨ ॥

ಕಾಶ್ಯಪಸ್ಯ=ಕಾಶ್ಯಪನಿಗೆ ಅನ್ಯಾಶ್ಚ = ದೇವಕಿಯಿಂದ ಇತರರಾದ ಯಾಃ=ಯಾವ ಭಾರ್ಯಾಃ=ಆರು ಮಂದಿ ಹೆಂಡಂದಿರು ಸಂತಿ =ಇದ್ದಾರೋ ತಾಶ್ಚ=ಅವರೂ ಕೂಡ ದೇವಕನಿಂದ ಹುಟ್ಟಿದರು. ಆ ಹುಕಃ=ದೇವಕನ ತಂದೆಯಾದ ಆಹುಕನಂ ಜ್ಯೇಷ್ಠಂ=ಜ್ಯೇಷ್ಠಳಾದ ತಾಂ=ಆ ದೇವಕಿಯನ್ನು ಹಿ=ಯಾವ ಕಾರಣದಿಂದ ಆತ್ಮಪುತ್ರ್ಯಂ=ತನ್ನ ಮಗನ ಮಗಳನ್ನು ತನ್ನ ಮಗಳನ್ನಾಗಿ ಚಕಾರ=ಮಾಡಿಕೊಂಡು ರಕ್ಷಿಸಿದನೋ ತಸ್ಮಾತ್ ಆ ಕಾರಣದಿಂದ ಕಂಸಸ್ಯ=ಕಂಸನಿಗೆ ದೇವಕೀ = ದೇವಕಿಯು ಪಿತೃಷ್ವಸಾ=ತನ್ನ ತಂದೆಯಾದ ಉಗ್ರಸೇನನಿಗೆ ತಂದೆಯಾದ ಆಹುಕನಂ ದೇವಕಿಯನ್ನು ತನ್ನ ಮಗಳನ್ನಾಗಿ ಸ್ವೀಕರಿಸಿದ ಕಾರಣ ಸೋದರತ್ತೆಯು ಸ್ವಸಾಚ=ತನ್ನ ತಂದೆಯಾದ ಉಗ್ರಸೇನನ ತಮ್ಮನಾದ ಚಿಕ್ಕತಂದೆಯಾದ ದೇವಕನ ಮಗಳಾದ್ದರಿಂದ ತಂಗಿಯೂ ಕೂಡ ಬಭೂವ=ಆದಳು. ॥ ೨ ॥

ಸೈವಾದಿತಿರ್ವಸು ದೇವಸ್ಯ ದತ್ತಾ ತಸ್ಯಾ ರಥಂ ವಾಂಗಲಂ ಕಂಸ ಏವ ।
ಸಂಯಾಪಯಾವಾಸ ತದಾ ಹಿ ವಾಯುರ್ಜಗಾದ ವಾಕ್ಯಂ ಗಗನಸ್ಥಿತೋಽಮುಂ ॥ ೩ ॥

ಸೈವಾದಿತಿಃ=ಆ ಅದಿತಿಯೇ ವಸು ದೇವಸ್ಯ=ವಸುದೇವನಿಗೆ ದತ್ತಾ=ಕನ್ಯಾದಾನರೂಪದಿಂದ ದತ್ತಾ=ಕೊಡಲ್ಪಟ್ಟಳು ಕಂಸಏವ=ಕಂಸನೇ ತಸ್ಯಾಃ=ಆ ದೇವಕಿಯ ವಾಂಗಲಂ = ಗೃಹಸ್ಥವೇಶೋತ್ಸವ ರೂಪ ಮಂಗಲ ಸಂಬಂಧಿಯಾದ

ರಥಂ=ರಥವನ್ನು ಸಂಯೂಪಯಾಮಾಸ=ವರನ ಮನೆಯಂನ್ನು ಕುರಿತು ನಡೆಸಿದನು. ತದಾ=ಆ ಗೃಹ ಪ್ರವೇಶೋತ್ಸವ ಸಮಯದಲ್ಲಿ ಗಗನಸ್ಥಿತಃ=ಆಕಾಶದಲ್ಲಿರುವ ವಾಯುಃ=ಪ್ರಾಣದೇವರು ಅವಂಂ=ಈ ಕಂಸನನ್ನು ಕುರಿತು ಜಗಾದ=ಹೇಳಿದರು ॥ ೪ ॥

ವಿನಾಪರಾಧಂ ನತತೋಗರೀಯಸೋ ನವೈತುಲೋವಧ್ಯತಾಮೇತಿ ವಿಷ್ಣೋಃ ।
ಲೋಕಸ್ಯಧರ್ಮಾನನುವರ್ತತೋsತಃ ಪಿತ್ರೋರ್ವಿರೋಧಾರ್ಥಮುವಾಚವಾಯುಃ ॥ ೪ ॥

ಮಾತುಲಃ=ಸೋದರ ಮಾವನು ವಧ್ಯತಾಂ=ಕೊಲ್ಲುವಿಕೆಯಂನ್ನು ನೈತಿ=ಹೊಂದುವುದಿಲ್ಲ ಎಂಬುದಾಗಿ ಲೋಕದ ಧರ್ಮವು ಅಸ್ತಿ=ಇದೆ ಅತಃ=ಈ ಕಾರಣದಿಂದ ಲೋಕಧರ್ಮಾನ್=ಲೋಕದ ಧರ್ಮಗಳನ್ನು ಅನುವರ್ತತಃ=ಅನುಸರಿಸುವ ವಿಷ್ಣೋಃ=ಕೃಷ್ಣನಿಗೂ ಕೂಡ ಮಾತುಲಃ=ಕಂಸನು ತತಃ=ಆ ಮಾವನಾದ ಕಂಸನ ದೆಸೆಯಿಂದ ಗರೀಯಸಃ=ಶ್ರೇಷ್ಠನಾದ ವಸುದೇವನ ಅಪರಾಧಂ ವಿನಾ=ಅಪರಾಧವನ್ನು ಹೊರತು ವಧ್ಯತಾಂನೈತಿ=ಕೊಲ್ಲಲುಂ ಯೋಗ್ಯನಾಗುವುದಿಲ್ಲ. ಅತಃ=ಆದ್ದರಿಂದ ಪಿತ್ರೋಃ=ಕೃಷ್ಣನ ತಂದೆ ತಾಯಿಗಳಾದ ವಸುದೇವ ದೇವಕಿಯರ ವಿಷಯಂದಲ್ಲಿ ವಿರೋಧಾರ್ಥಂ=ಕಂಸನಿಗೆ ವಿರೋಧವನ್ನುಂಟು ಮಾಡುವುದಕ್ಕೋಸ್ಕರ ವಾಯುಃ=ವಾಯುದೇವರು ಉವಾಚ=ಹೇಳಿದರು.

ಮೃತ್ಯೋಸ್ತವಾಸ್ಯಾ ಭವಿತಾsಷ್ಟಮಸ್ತತೋ ಮೂಢೇತಿ ಚೋಕ್ತೋಜಗೃಹೇಕೃಪಾಣಂ ।
ಪುತ್ರಾನ್ ಸಮರ್ಪ್ಯಾಸ್ಯ ಚ ಶೂರಸೂನುರ್ವಿಮೋಚ್ಯ ತಾಂ ತತ್ಸ ಹಿತೋ ಗೃಹಂ ಯಯೌ ॥ ೫ ॥

ಹೇ ಮೂಢ=ಎಲೋ ಮೂರ್ಖನೇ ಅಸ್ಯಾಃ=ಈ ದೇವಕಿಯ ಅಷ್ಟಮಃ ಸುತಃ=ಎಂಟನೆಯ ಮಗನು ತವ=ನಿನ್ನ ಮೃತ್ಯೋಃ=ಮರಣಕನು ಭವಿತಾ=ಆಗುವನು ಇತಿ=ಈ ರೀತಿಯಾಗಿ ಉಕ್ತಃ=ವಾಯುದೇವರಿಂದ ಹೇಳಿಸಿಕೊಳ್ಳಲ್ಪಟ್ಟ ಕಂಸನು ಕೃಪಾಣಂ=ತಂಗಿಯನ್ನು ಕೊಲ್ಲುವುದಕ್ಕಾಗಿ ಖಡ್ಗವನ್ನು ಜಗೃಹೇ=ಹಿಡಿದನು. ಶೂರಸೂನುಃ=ಶೂರನ ಮಗನಾದ ವಸುದೇವನು (ಇವಳನ್ನು ಕೊಲ್ಲಬೇಡ ಇವಳ ಎಂಟನೇ ಮಗನು ನಿನ್ನ ಕೊಲ್ಲತಕ್ಕವನಷ್ಟೇ ಇವಳಲ್ಲಿ ಹುಟ್ಟುವ ಎಲ್ಲಾ ಮಕ್ಕಳನ್ನೂ ನಿನಗೆ ಕೊಡುತ್ತೇನೆಂದು ಹೇಳಿ) ಪುತ್ರಾನ್=ಮುಂದೆ ಹುಟ್ಟುವ ಮಕ್ಕಳನ್ನು ಅಸ್ಯ=ಕಂಸನಿಗೆ ಸಮರ್ಪ್ಯ=ಅರ್ಪಿಸಿ ತಾಂ=ಆ ದೇವಕಿಯನ್ನು ವಿಮೋಚ್ಯ=ಮೃತ್ಯುವಿನಿಂದ ಬಿಡಿಸಿ ತತ್ಸ ಹಿತಃ=ಆ ದೇವಕಿಯಿಂದ ಕೂಡಿಕೊಂಡು ಗೃಹಂ=ಮನೆಯನ್ನು ಕುರಿತು ಯಯೌ=ಹೋದನು. ॥ ೫ ॥

ಷಟ್ಕನ್ಯಕಾಶ್ಚಾವರಜಾ ಗೃಹೀತಾ ತೇನೈವ ತಾಭಿಶ್ಚ ಮುಮೋದ ಶೂರಜಃ ।
ಬಾಹ್ಲೀಕ ಪುತ್ರೀಚ ಪುರಾ ಗೃಹೀತಾ ಪುರಾಸ್ಯ ಭಾರ್ಯಾ ಸುರಭಿಸ್ತು ರೋಹಿಣೀ ॥ ೬ ॥

ತೇನೈವ=ಆ ವಸುದೇವನಿಂದಲೇ ಅವರಜಾಃ=ದೇವಕಿಯ ಅನಂತರ ಹುಟ್ಟಿರುವ ದೇವಕಿಯ ತಂಗಿಯಾದ ಷಟ್=ಆರು ಸಂಖ್ಯಾಕರಾದ ಕನ್ಯಕಾಃ=ದೇವಕನ ಪುತ್ರಿಯರು ಗೃಹೀತಾಃ=ಪತ್ನಿಯರಾಗಿ ಸ್ವೀಕರಿಸಲ್ಪಟ್ಟರು. ಅಸ್ಯ=ಈ ವಸುದೇವನ ಪುರಾ=ಹಿಂದಿನ ಜನ್ಮದಲ್ಲಿ ಭಾರ್ಯಾ=ಹೆಂಡತಿಯಾದ ಯಾ=ಯಾವ ಸುರಭಿಸ್ತು=ಸುರಭಿ ಎಂಬವಳೋ ಸಾ=ಆವಳು ರೋಹಿಣೀ=ರೋಹಿಣಿ ಎಂಬ ನಾಮದಿಂದ ಬಾಹ್ಲೀಕಪುತ್ರೀ=ಬಾಹ್ಲೀಕ ರಾಜನ ಮಗಳಾಗಿ ಪುರಾ=ಆರು ಕನ್ಯೆಯಂರ ವಿವಾಹದ ಪೂರ್ವದಲ್ಲಿ ದೇವಕಿಯ ವಿವಾಹಾನಂತರ ಗೃಹೀತಾ=ಹೆಂಡತಿಯಾಗಿ ಸ್ವೀಕರಿಸಲ್ಪಟ್ಟಳು. ॥ ೬ ॥

ರಾಜ್ಞಶ್ಚ ಕಾಶೀಪ್ರಭವಸ್ಯ ಕನ್ಯಕಾಂ ಸಪುತ್ರಿಕಾಪುತ್ರಕಧರ್ಮತೋsವಹತ್ ।
ಕನ್ಯಾಂ ತಥಾ ಕರವೀರೇಶ್ವರಸ್ಯ ತೇನೈವ ಧರ್ಮೇಣ ದಿತಿಂ ದನುಂ ಪುರಾ ॥ ೭ ॥

ಸಃ=ಆ ವಸುದೇವನು ಪುರಾ=ಹಿಂದಿನ ಜನ್ಮದಲ್ಲಿ ದಿತಿಂ=ದಿತಿನಾಮಕಳಾದ ಕಾಶಿಪ್ರಭವಸ್ಯ=ಕಾಶೀ ದೇಶದಲ್ಲಿ ಹುಟ್ಟಿರುವ ರಾಜ್ಞಃ=ರಾಜನ ಕನ್ಯಕಾಂ=ಮಗಳನ್ನು ಪುತ್ರಿಕಾ ಪುತ್ರಧರ್ಮತಃ=ತನ್ನ ಮಗಳಲ್ಲಿ ಹುಟ್ಟಿದ ಮಗನು ತನ್ನ ಮಗನಾಗಬೇಕು ಎಂಬುದಾಗಿ ಕನ್ಯಾಧಾನಧರ್ಮದಿಂದ ಅವಹತ್=ಮದುವೆಯಾದನು. ತಥಾ=ಹಾಗೆಯೇ ಪುರಾ=ಹಿಂದೆ ದನುಂ=ದನು ನಾಮಕಳಾದ ಕರವೀರೇಶ್ವರಸ್ಯ=ಕರವೀರ ದೇಶದ ರಾಜನ ಕನ್ಯಾ ಮಗಳನ್ನು ತೇನೈವಧರ್ಮೇಣ=ಆ ಪುತ್ರಿಕಾಪುತ್ರ ಧರ್ಮದಿಂದಲೇ ಅವಹತ್=ಮದುವೆಯಾದನು. ॥ ೭ ॥

ಯೋ ಮನ್ಯತೇ ವಿಷ್ಣುರೇವಾಹಮಿತ್ಯಸೌ ಪಾಪೋವೇನಃ ಪೌಂಡ್ರಕೋ ವಾಸುದೇವಃ ।
ಜಾತಃ ಪುನಃ ಶೂರಜಾತ್ ಕಾಶಿಜಾಯಾಂ ನಾನ್ಯೋಽಮತ್ತೋ ವಿಷ್ಣುರಸ್ತೀತಿ ವಾದೀ ॥ ೮ ॥

ಯಃ=ಯಾವ ಪಾಪಃ=ಪಾಪಿಷ್ಠನಾದ ವೇನಃ=ವೇನನು ಅಹಮೇವ=ನಾನೇ ವಿಷ್ಣುಃ=ನಾರಾಯಣನು ಇತಿ= ಎಂದು ಮನ್ಯತೇ=ತಿಳಿಯುತ್ತಾನೋ ಅಸೌ=ಈ ವೇನನು ಶೂರಜಾತ್=ಶೂರನ ಮಗನಾದ ವಸುದೇವನಿಂದ ಕಾಶಿಜಾಯಾಂ= ಕಾಶಿರಾಜನ ಮಂಗಳಲ್ಲಿ ಪೌಂಡ್ರಕೋ ವಾಸುದೇವಃ=ಪೌಂಡ್ರಕ ವಾಸುದೇವನೆಂದೂ ಜಾತಃ=ಹುಟ್ಟಿದನು. ಪುನಃ = ಸತ್ಕುಲ ದಲ್ಲಿ ಹುಟ್ಟಿದ ನಂತರವೂ ಮತ್ತಃ=ನನ್ನಿಂದ ಅನ್ಯಃ=ಬೇರೆಯಾದ ವಿಷ್ಣುಃ=ನಾರಾಯಣನು ನಾಸ್ತಿ = ಇಲ್ಲ. ನಾನೇ ವಿಷ್ಣುಃ ಇತಿ=ಎಂಬುದಾಗಿ ವಾದೀ=ಹೇಳತಕ್ಕವನು ಬಭೂವ=ಆದನು. ॥ ೭ ॥

ಧುಂಧುರ್ಹತೋ ಯೋ ಹರಿಣಾ ಮಧೋಃಸುತ ಆಸೀತ್ ಸುತಾಯಾಂ ಕರವೀರೇಶ್ವರಸ್ಯ ।
ಸೃಗಾಲನಾಮಾ ವಾಸುದೇವೋಽಥ ದೇವಕೀಮುದೂಹ್ಯ ಶಾರ್ಙ್ಗಯುಯಾವುಭೇತೇ ॥ ೯ ॥

ಹರಿಣಾ=ಕುವಲಯಾಶ್ವ ರಾಜನಲ್ಲಿ ಸನ್ನಿಹಿತನಾದ ಹರಿಯಿಂದ ಯಃ=ಯಾವ ಮಧೋಃ = ಮಧುನಾಮಕ ದೈತ್ಯನ ಸುತಃ = ಮಗನಾದ ಧುಂಧುಃ=ಧುಂಧು ಎಂಬವನು ಹತಃ=ಕೊಲ್ಲಲ್ಪಟ್ಟನೋ ಸಃ=ಅವನು ಕರವೀರೇಶ್ವರಸ್ಯ=ಕರವೀರ ರಾಜನ ಸುತಾಯಾಂ=ಮಗಳಲ್ಲಿ ವಾಸ ದೇವಃ=ವಸುದೇವನ ಮಗನಾದ್ದರಿಂದ ವಾಸುದೇವನೆಂದೂ ಸೃಗಾಲ ನಾಮಾ= ಸೃಗಾಲನೆಂದು ಹೆಸರುಳ್ಳವನು ಅಂದರೆ ಸೃಗಾಲ ವಾಸುದೇವನೆಂಬುದಾಗಿ ಆಸೀತ್=ಹುಟ್ಟಿದನು. ಅಥ=ಅವರಿಬ್ಬರು ಹುಟ್ಟಿದ ನಂತರ ಶೌರಿಃ=ವಸುದೇವನು ತೇ=ಉಭೇ=ಕಾಶಿರಾಜ ಕರವೀರೇಶ್ವರನ ಪುತ್ರಿಯರನ್ನು ನಯುಯೌ=ಹೊಂದಲಿಲ್ಲ ಅವರೊಂದಿಗೆ ರಮಣನನ್ನು ಮಾಡಲಿಲ್ಲ ॥ ೯ ॥

ತತಸ್ತು ತೌ ವೃಷ್ಣಿಶತ್ರೂ ಬಭೂವತು ಜ್ಯೇಷ್ಠೌ ಸುತೌ ಶೂರ ಸುತಸ್ಯ ನಿತ್ಯಂ ।
ಅನ್ಯಾಸು ಚ ಪ್ರಾಪ ಸುತಾನು ದಾರಾನ್ ದೇವಾವತಾರಾನ್ ವಸುದೇವೋಽಖಿಲಜ್ಞಃ ॥ ೧೦ ॥

ತತಃ=ಅನಂತರ ಶೂರ ಸುತಸ್ಯ=ವಸುದೇವನ ಜ್ಯೇಷ್ಠೌ ತೇ ಸುತೇ=ಜ್ಯೇಷ್ಠರಾದ ಆ ಪೌಂಡ್ರಕಸೃಗಾಲ ವಾಸು ದೇವರು ನಿತ್ಯಂ = ಯಾವಾಗಲೂ ವೃಷ್ಣಿಶತ್ರೂ= ಯಾದವರ ಶತ್ರುಗಳು ಬಭೂವತುಃ = ಆದರು ಅಖಿಲಜ್ಞಃ=ಸರ್ವಜ್ಞನಾದ ವಸುದೇವ ವಸುದೇವಸು ಅನ್ಯಾಸು=ಇತರ ಪತ್ನಿಯರಲ್ಲಿ ದೇವಾವತಾರಾನ್=ದೇವತೆಗಳ ಅವತಾರಭೂತರಾದ ಉದಾ ರಾನ್ = ಉತ್ತಮರಾದ ಸುತಾನ್=ಮಕ್ಕಳನ್ನು ಪ್ರಾಪ=ಹೊಂದಿದನು ॥೧೦॥

ಯೇಯೇಹಿದೇವಾಃ ಪೃಥಿವೀಂಗತಾಸ್ತೇ ಸರ್ವೇಶಿಷ್ಯಾಸ್ಸತ್ಯವತೀಸುತಸ್ಯ ॥
ವಿಷ್ಣೋರ್ಜ್ಞಾನಂಪ್ರಾಪ್ಯ ಸರ್ವೇಽಖಿಲಜ್ಞಾಸ್ತಸ್ಮಾದ್ಯಥಾಯೋಗ್ಯತಯಾ ಬಭೂವುಃ ॥ ೧೧ ॥

ಯೇಯೇಹಿದೇವಾಃ=ಯಾವ ಯಾವ ದೇವತೆಗಳು ಪೃಥಿವೀಂ ಭೂಮಿಯನ್ನು ಗತಾಃ=ಹೊಂದಿರುವರೋ ತೇಸರ್ವೇ=ಅವರೆಲ್ಲರೂ ಸತ್ಯವತೀಸುತಸ್ಯ = ಸತ್ಯವತಿಯ ಮಗನಾದವೇದವ್ಯಾಸದೇವರ ಶಿಷ್ಯಾಃ=ಶಿಷ್ಯರು ಸರ್ವೇ=ಎಲ್ಲರೂ ತಸ್ಮಾತ್ ವಿಷ್ಣೋಃ=ಆ ವೇದವ್ಯಾಸದಿಂದ ಜ್ಞಾನಂ=ಜ್ಞಾನವನ್ನು ಪ್ರಾಪ್ಯ=ಹೊಂದಿ ಯಥಾಯೋಗ್ಯತಯಾ=ತಮ್ಮ ತಮ್ಮ ಯೋಗ್ಯತೆಯ ಅನುಸಾರವಾಗಿ ಅಖಿಲಜ್ಞಾಃ=ಸರ್ವಜ್ಞರು ಬಭೂವುಃ=ಆದರು ॥ ೧೧ ॥

ಮರೀಚಿಜಾಃ ಷಣ್ಮನಯೋ ಬಭೂವು ಸ್ತೇ ದೇವಲಂಪ್ರಾಹಸನ್ಕಾರ್ಶ್ಯಹೇತೋಃ ॥
ತಚ್ಛಾಪತಃ ಕಾಲನೇಮಿಪ್ರಸೂತಾ ಅವಧ್ಯತಾರ್ಥಂ ತಪ ಏವ ಚಕ್ರುಃ ॥ ೧೨ ॥

ಮರೀಚಿಜಾಃ=ಮರೀಚಿ ಋಷಿಯ ಪುತ್ರರಾದ ಷಣ್ಮನಯಃ=ಆರು ಮುನಿಗಳು ಬಭೂವುಃ=ಇದ್ದರು ತೇ=ಆ ಮರೀಚಿ ಪುತ್ರರು ದೇವಲಂ=ದೇವಲ ಋಷಿಯನ್ನು ಕಾರ್ಶ್ಯಹೇತೋಃ=ಕಾಮಜ್ವರದಿಂದ ಶರೀರಕೃಶತ್ವ ನಿಮಿತ್ತದಿಂದ ಪ್ರಾಹಸನ್=ನಗಾಡಿದರು ತಚ್ಛಾಪತಃ=ಆ ದೇವಲರ ಶಾಪದಿಂದ ಕಾಲನೇಮಿಪ್ರಸೂತಾಸ್ಸಂತಃ=ಕಾಲನೇಮಿ ಎಂಬ ಅಸುರ

ನಿಂದ ಹುಟ್ಟಿದವರಾಗಿ ಅವಧ್ಯತಾರ್ಥ ಮೇವ=ಪರಣರಾಹಿತ್ಯವನ್ನು ಪೊಂದುವುದಕ್ಕಾಗಿಯೇ ತಪಃ=ಬ್ರಹ್ಮದೇವರನ್ನು ಕುರಿತು ತಪಸ್ಸನ್ನು ಚಕ್ರುಃ=ಮಾಡಿದರು ॥ ೧೨ ॥

ಧಾತಾಪ್ರಾದಾದ್ವರಮೇಷಾಂ ತಥೈವ ಶಶಾಪತಾನ್ ಕ್ಷ್ಮಾತಲೇಸಂಭವಧ್ವಂ ॥
ತತ್ರ ಸ್ವತಾತೋ ಭವತಾಂ ನಿಹಂತ್ಕೇತ್ಯಾತ್ಮರನ್ಯತೋವರಲಿಪ್ಸ್ಯಾನ್ ಹಿರಣ್ಯಕಃ ॥ ೧೩ ॥

ಧಾತಾ=ಬ್ರಹ್ಮನು ಏಷಾಂ=ಕಾಲನೇಮಿಯಿಂದ ಹುಟ್ಟಿರುವ ಮರೀಚಿ ಪುತ್ರರಿಗೆ ತಥೈವ=ಹೇಗೆ ಅವಧ್ಯತ್ವವು ಬಂದಿತೋ ಹಾಗೆಯೇ ವರಂ=ವರವನ್ನು ಪ್ರದಾತ್=ಕೊಟ್ಟನು ಹಿರಣ್ಯಕಃ=ಹಿರಣ್ಯಕಶಿಪುವು ಆತ್ಮಾನ್ಯತಃ=ತನ್ನಿಂದ ಬೇರೆಯಾದ ಬ್ರಹ್ಮನದೆಸೆಯಿಂದ ವರಲಿಪ್ಸ್ಯಾನ್=ವರವನ್ನು ಇಚ್ಛಿಸುವ ವರವನ್ನು ಹೊಂದಿರುವ ತಾನ್ ಕಾಲನೇಮಿ ಮಕ್ಕಳನು ಯೂಯಂ=ನೀವು ಕ್ಷ್ಮಾತಲೇ=ಭೂಪಲದಲ್ಲಿ ಸಂಭವಧ್ವಂ ಹುಟ್ಟಿರಿ ತತ್ರ=ಆ ಜನ್ಮದಲ್ಲಿ ಸ್ವತಾತಃ=ನಿಮ್ಮ ತಂದೆಯಾದ ಕಾಲನೇಮಿಯು ಭವತಾಂ=ನಿನ್ನ ಶಾಪದಿಂದ ಹುಟ್ಟಿರುವ ನಿಮಗೆ ನಿಹಂತಾ=ಕೊಲ್ಲತಕ್ಕವನು ಇತಿ=ಎಂಬುದಾಗಿ ಶಶಾಪ=ಶಾಪ ಕೊಟ್ಟನು. ॥ ೧೩ ॥

ದುರ್ಗಾತದಾತಾನ್ ಭಗವತ್ಪ್ರಚೋದಿತಾ ಪ್ರಸ್ವಾಪಯಿತ್ವಾಪ್ರಚಕರ್ಷಕಾಯಾತ್
ಕ್ರಮಾತ್ಯಮಾವೇಶಯದಾಶು ದೇವಕೀಗರ್ಭಾಶಯೇತಾನ್ನ್ಯಹನಚ್ಚಕಂಸಃ ॥ ೧೪ ॥

ತದಾ=ಹಿರಣ್ಯಕಶಿಪುವಿನ ಶಾಪದ ಸಮಯದಲ್ಲಿ ಭಗವತ್ಪ್ರಚೋದಿತಾ=ಪರಮಾತ್ಮನಿಂದ ಪ್ರೇರಿಸಲ್ಪಟ್ಟ ದುರ್ಗಾ=ದುರ್ಗಾದೇವಿಯು ತಾನ್=ಅಸುರದೇಹಗಳಲ್ಲಿರತಕ್ಕ ಕಾಲನೇಮಿಯ ಮಕ್ಕಳನ್ನು ಪ್ರಸ್ವಾಪಯಿತ್ವಾ=ಕ್ರಮದಿಂದ ಒಂದು ವರ್ಷ ಪರ್ಯಂತ ಸುಪ್ತರನ್ನಾಗಿ ಮಾಡಿಸಿ ಕಾಯಾತ್=ಜೀವಿಸಿಕೊಂಡಿರುವ ಅವರ ಶರೀರದಿಂದ ಪ್ರಚಕರ್ಷ=ಜೀವನನ್ನು ಮಾತ್ರಸೆಳೆದಳು ಕ್ರಮಾತ್=ಜ್ಯೇಷ್ಠಕ್ರಮದಿಂದ ತಾನ್=ಆ ಆರು ಜೀವರನ್ನು ದೇವಕೀಗರ್ಭಾಶಯೇ=ದೇವಕಿಯ ಗರ್ಭಕೋಶದಲ್ಲಿ ಸಮಾವೇಶಯತ್=ಪ್ರವೇಶಿಸುವಂತೆ ಮಾಡಿದಳು. ಕಂಸಃ=ಕಂಸನು ತಾನ್=ಆ ದೇವಕೀ ಪುತ್ರರನ್ನು ಆಶು=ಹುಟ್ಟಿದ ಕೂಡಲೇ ನ್ಯಹನತ್=ಕೊಂದನು ಚ=ಆಗಲೇ ದುರ್ಗಾದೇವಿಯು ಪುನಃ ಆ ಜೀವರನ್ನು ಸುಪ್ತ ಶರೀರಗಳಲ್ಲಿ ಪ್ರವೇಶಿಸಿದಳು. ॥ ೧೪ ॥

ಅವಃ— ಕೃಷ್ಣಾವತಾರದ ಮೊದಲು ಧರ್ಮರಾಜನು ಹುಟ್ಟಿರುವುದರಿಂದ ಕೃಷ್ಣನ ಕಥೆಯನ್ನು ಮಧ್ಯದಲ್ಲಿ ನಿಲ್ಲಿಸಿ ಧರ್ಮರಾಜನ ಉತ್ಪತ್ತಿಯನ್ನೂ ಮೊದಲು ಹೇಳುವುದಕ್ಕಾಗಿ ಪಾಂಡುವಿನ ಕಥೆಯನ್ನು ಆರಂಭಿಸುತ್ತಾರೆ.

ತದಾಮುನೀಂದ್ರಸಂಯುತಃ ಸದೋವಿಧಾತುರುತ್ತಮಮ್ ॥
ಸಪಾಂಡುರಾಪ್ತು ಮೈಚ್ಛತನ್ಯವಾರಯಂಶ್ಚ ತೇ ತದಾ ॥ ೧೫ ॥

ತದಾ=ದೇವಕಿಯ ಆರನೇ ಗರ್ಭಪಾತ ಸಮಯದಲ್ಲಿ ಮುನೀಂದ್ರಸಂಯುತಃ=ಮುನೀಂದ್ರರಿಂದ ಕೂಡಿಕೊಂಡು ಅವರ ಸಭೆಯಲ್ಲಿದ್ದ ಸಪಾಂಡುಃ=ಆ ಪಾಂಡುರಾಜನು ಉತ್ತಮಮ್=ಶ್ರೇಷ್ಠವಾದ ವಿಧಾತುಃ=ಬ್ರಹ್ಮನ ಸದಃ=ಸಭೆಯನ್ನು ಆಪ್ತುಂ ಹೊಂದಲು ಐಚ್ಛತ=ಇಚ್ಛಿಸಿದನು ತದಾ=ಆಗ ತೇ=ಆ ಮುನಿಗಳು ನ್ಯವಾರಯನ್=ಆ ಪಾಂಡುರಾಜನನ್ನು ಹೋಗಬೇಡವೆಂದು ತಡೆದರು. ॥ ೧೫ ॥

ಯದರ್ಥಮೇಷಜಾಯತೇ ಪುಮಾನ್ಹಿ ತಸ್ಯ ಸೋಽಕೃತೇಃ ॥
ಶುಭಾಂ ಗತಿಂ ನತುವ್ರಜೇತ್ ಧ್ರುವಂ ತತೋನ್ಯವಾರಯನ್ ॥ ೧೬ ॥

ಏಷಃಪುಮಾನ್=ಈ ಯಾವ ಪುರುಷನಾದರೂ ಯದರ್ಥಂ=ಯಾವ ಪ್ರಯೋಜನಕ್ಕಾಗಿ ಜಾಯತೇ ಹುಟ್ಟಿ ತ್ಪಾನೋ ಸಃ=ಆ ಪುರುಷನು ತಸ್ಯ=ಆ ಪ್ರಯೋಜನವನ್ನು ಅಕೃತೇಃ=ಮಾಡದಿರುವುದರಿಂದ ಶುಭಾಂ ಗತಿಂ=ಒಳ್ಳೆಗತಿಯನ್ನು ಹಿ=ಯಾವ ಕಾರಣದಿಂದ ನತುವ್ರಜೇತ್=ಹೊಂದಲಾರನೋ

ಪ್ರಧಾನದೇವತಾಜನೌ ನಿಯೋಕ್ತುಮಾತ್ಮನಃ ಪ್ರಿಯಾಂ ॥
ಬಭೂವ ಪಾಂಡುರೇಷ ತದ್ವಿನಾ ನತಸ್ಯ ಸದ್ಗತಿಃ ॥ ೧೭ ॥

ಏಷಃ ಪಾಂಡು=ಈ ಪಾಂಡುರಾಜನು ಪ್ರಧಾನದೇವತಾಜನೌ=ವಾಯು ಮೊದಲಾದ ಉತ್ತಮ ದೇವತೆಗಳ ಉತ್ಪತ್ತಿ ವಿಷಯದಲ್ಲಿ ಆತ್ಮನಃ=ತನ್ನ ಪ್ರಿಯಾಂ=ಹೆಂಡತಿಯಾದ ಕುಂತಿಯನ್ನು ನಿಯೋಕ್ತುಂ=ಆಜ್ಞಾಪಿಸುವುದಕ್ಕೋಸ್ಕರ ಬಭೂವ=ಹುಟ್ಟಿದನು ತದ್ವಿನಾ = ಕುಂತಿಗೆ ಉತ್ತಮದೇವತೆಗಳ ಉತ್ಪತ್ತಿಯಲ್ಲಿ ಆಜ್ಞಾದಾನರೂಪಕಾರ್ಯವನ್ನು ಹೊರತು ತಸ್ಯ=ಆ ಪಾಂಡುವಿಗೆ ಸದ್ಗತಿಃ=ಒಳ್ಳೆ ಗತಿಯು ನ=ಆಗಲಾರದು ತತಃ=ಆ ಕಾರಣದಿಂದ ನ್ಯವಾರಯನ್=ಮುನಿಗಳು ತಡೆದರು ॥೧೭॥

ಅತೋನ್ಯಥಾ ಸುತಾನೃತೇ ವ್ರಜಂತಿ ಸದ್ಗತಿಂನರಾಃ ॥
ಯಥೈವ ಧರ್ಮಭೂಷಣೋ ಜುಗಾಮ ಸಂಧ್ಯಕಾಸುತಃ ॥ ೧೮ ॥

ಸಂಧ್ಯಕಾಸುತಃ=ಸಂಧ್ಯಾವಳಿಯ ಮಗನಾದ ಧರ್ಮಭೂಷಣಃ=ಧರ್ಮಾಂಗದನು ಸಾಕ್ಷಾತ್ ಸಂತಾನವನ್ನೂ ಪಾಂಡು ರಾಜನಂತೆ ಸಂತಾನಕ್ಕೋಸ್ಕರ ಆಜ್ಞೆಯನ್ನು ಕೂಡ ಹೊರತು ಏಕಾದಶೀ ವ್ರತದಲ್ಲಿ ಅತ್ಯಂತ ಆದರರೂಪವಾದ ಪುಣ್ಯವನ್ನು ಮಾಡಿದ ರಿಂದ ತಂದೆ ತಾಯಿಗಳಿಂದ ಕೂಡಿಕೊಂಡ ಸಂತುಷ್ಟನಾದ ಹರಿಯಿಂದ ಆಜ್ಞಪ್ತವಾದ ವಿಮಾನದಿಂದ ಕೂಡಿಕೊಂಡು ಯಥಾ=ಹೇಗೆ ಸದ್ಗತಿಂ=ವೈಕುಂಠಗಮನರೂಪವಾದ ಗತಿಯನ್ನು ಜುಗಾಮ=ಹೊಂದಿದನೋ ತಥೈವ=ಹಾಗೆಯೇ ಅತಃ= ತನಗೆ ಸಾಕ್ಷಾತ್ ಸಂತಾನವಿಲ್ಲದಿದ್ದರೂ ಸಂತಾನಕ್ಕೋಸ್ಕರ ಹೆಂಡತಿಗೆ ಆಜ್ಞಾರೂಪವಾದ ಪುಣ್ಯವನ್ನು ಮಾಡುವುದರಿಂದ ಪಾಂಡುವಿಗೆ ಸುಗತಿ ಉಂಟಾದ ಕಾರಣದಿಂದ ಸುತಾನೃತೇ=ಸರ್ವಾತ್ಮನಾ ಮಕ್ಕಳಿಲ್ಲದಿದ್ದರೂ ಮಕ್ಕಳಿಗೋಸ್ಕರ ಆಜ್ಞಾದಾನ ರೂಪ ಪುಣ್ಯವನ್ನೂ ಹೊರತು ಅನ್ಯಥಾ=ಪ್ರಬಲ ಪುಣ್ಯಾಂತರವನ್ನು ಮಾಡುವುದರಿಂದ ನರಾಃ=ಮನುಷ್ಯರು ಸದ್ಗತಿಂ= ಉತ್ತಮ ಗತಿಯನ್ನು ವ್ರಜಂತಿ ಹೊಂದುತ್ತಾರೆ. ॥ ೧೮ ॥

ತಥಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ ॥
ವಿಚಿತ್ರವೀರ್ಯನಂದನ ಪ್ರಿಯೋದರೇಹಿ ಗರ್ಭಗಾಃ ॥ ೧೯ ॥

ತದಾ=ಆ ಸಮಯದಲ್ಲಿ ಕಲಿಃ=ಕಲಿಯು ಇಂದ್ರಜಿನ್ಮುಖಾಃ=ಇಂದ್ರಜಿತುವೇ ಪ್ರಧಾನರಾಗಿಉಳ್ಳ ರಾಕ್ಷಸಾಶ್ಚ= ರಾಕ್ಷಸರೂ ಕೂಡ ವಿಚಿತ್ರವೀರ್ಯನಂದನ ಪ್ರಿಯೋದರೆ=ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನ ಹೆಂಡತಿಯಾದ ಗಾಂಧಾರಿಯ ಹೊಟ್ಟೆಯಲ್ಲಿ ಗರ್ಭಗಾಃ=ಗರ್ಭದಲ್ಲಿರತಕ್ಕವರು ಬಭೂವುಃ=ಆದರು ॥ ೧೯॥

ತದಸ್ಯಸೋsನು ಜೋsಶೃಣೋನ್ಮುನೀಂದ್ರಭಾಷಿತಂಚ ಸಃ ॥
ವಿಚಾರ್ಯಚ ಪ್ರಿಯಾಮಿದಂ ಜಗಾದವಾಸದೇವಧೀಃ ॥೨೦ ॥

ಅಸ್ಯ=ಧೃತರಾಷ್ಟ್ರನ ಅನುಜಃ=ತಮ್ಮನಾದ ಸಃ=ಆ ಪಾಂಡುವು ತತ್=ಆ ಗಾಂಧಾರಿಯಲ್ಲಿ ಗರ್ಭಪ್ರಾಪ್ತಿಯನ್ನು ಮುನೀಂದ್ರಭಾಷಿತಂ=ಹಸ್ತಿನಾವತಿಯಿಂದ ಬಂದಿರುವ ಮುನಿ ಶ್ರೇಷ್ಠರಿಂದ ಹೇಳಲ್ಪಟ್ಟದ್ದನ್ನು ಅಶೃಣೋತ್=ಕೇಳಿದನು ವಾಸು ದೇವಧೀಃ=ಪರಮಾತ್ಮನಲ್ಲಿ ಮನಸ್ಸುಳ್ಳ ಪಾಂಡುರಾಜನು ಇದಂ=ಮುನಿಶ್ರೇಷ್ಠರಿಂದ ಹೆಂಡತಿಗೆ ಆಜ್ಞೆಯನ್ನು ಮಾಡಿ ಮಕ್ಕ ಳನ್ನು ಪಡೆಯದೇ ಸದ್ಗತಿಯಾಗುವುದಿಲ್ಲವೆಂಬ ಮಾತನ್ನು ವಿಚಾರ್ಯ=ವಿಮರ್ಶೆಮಾಡಿ ಪ್ರಿಯಾಂ=ಕುಂತಿಯನ್ನು ಕುರಿತು ಇದಂ=ಮುಂದೆ ಹೇಳತಕ್ಕ ಮಾತನ್ನು ಜಗಾದ=ಹೇಳಿದನು. ॥ ೨೦ ॥

ಯ ಏವ ಮದ್ಗುಣಾಧಿಕಸ್ತತ ಸ್ಸುತಂ ಸಮಾಪ್ನುಹಿ ॥
ಸುತಂ ವಿನಾನನೋಗತಿಂ ಶುಭಾಂವದಂತಿ ಸಾಧವಃ ॥ ೨೧ ॥

ಯಃ=ಯಾವನು ಮದ್ಗುಣಾಧಿಕಃ=ನನ್ನಿಂದ ಅಧಿಕಗುಣಗಳುಳ್ಳವನೋ ತತಏವ=ಆ ಉತ್ತಮ ಪುರುಷನಿಂದಲೇ

ಸುತಂ=ಮಗನನ್ನು ಸಮಾಪ್ನೆಹಿ=ಹೊಂದಂ ಸಾಧವಃ=ಜ್ಞಾನಿಗಳು ಸಂತಂವಿನಾ=ಮಗನನ್ನು ಹೊರತು ನಃ=ನಮಗೆ ಶಂಭಾಂ ಗತಿಂ=ಸದ್ಗತಿಯನ್ನಾ ನೆವದಂತಿ=ಹೇಳುವುದಿಲ್ಲ ॥ ೨೧ ॥

ತದಸ್ಯ ಕೃಚ್ಛ್ರತೋವಚಃ ಪೃಥಾಗೃಹೀಜ್ಜಗಾದ ಚ ॥
ಮಮಾಸ್ತಿ ದೇವವಶ್ಯದೋಮನೂತ್ತಮಃ ಸುತಾಪ್ತಿದಃ ॥ ೨೨ ॥

ಪೃಥಾ=ಕುಂತಿಯು ಅಸ್ಯ=ಈ ಪಾಂಡುವಿನ ತತ್‌ವಚಃ=ಆ ಮಾತನ್ನು ಕೃಚ್ಛ್ರತ=ಕಷ್ಟದಿಂದ ಅಗ್ರಹೀತ್ =ಸ್ವೀಕರಿಸಿದಳು ಚ=ಮತ್ತು ಮಮ=ನನಗೆ ದೇವ ವಶ್ಯದಃ=ದೇವತೆಗಳನ್ನು ವಶಮಾಡಿಕೊಳ್ಳುವ ಸುತಾಪ್ತಿದಃ=ಮಕ್ಕ ಳನ್ನು ಕೊಡತಕ್ಕ ವನೂತ್ತಮಃ=ಶ್ರೇಷ್ಠ ಮಂತ್ರವು ಅಸ್ತಿ=ಇದೆ ಎಂದು ಜಗಾದ=ಹೇಳಿದಳು ॥ ೨೨ ॥

ನತೇ ಸುರಾನೃತೇ ಸಮಃ ಸುರೇಷು ಕೇಚಿದೇವ ಚ ॥
ಅತಸ್ತ್ವಾಧಿಕಂ ಸುರಂ ಕಮಾಹ್ವಯೇತ್ವದಾಜ್ಞಯಾ ॥೨೩ ॥

ಸುರಾನೃತೇ=ದೇವತೆಗಳನ್ನು ಹೊರತು ತೇ=ನಿನಗೆ ಸಮಃ=ಸಮಾನಿಕನಂ ನ=ಇಲ್ಲ ಸುರೇಷುಚ=ದೇವತೆಗಳ ಲ್ಲಿಯೂ ಕೂಡ ಕೇಚಿದೇವ=ಕೆಲವರೇ ಸಮಾನಿಕರೂ ಉತ್ತಮರೂ ಇದ್ದಾರೆ ಅತಃ=ಆದ್ದರಿಂದ ತವಸಕಾಶಾತ್=ನಿನ್ನ ದ್ದೆಸೆಯಿಂದ ಅಧಿಕಂ=ಉತ್ತಮನಾದ ಕಂಸುರಂ=ಯಾವ ದೇವತೆಯನ್ನು ತ್ವದಾಜ್ಞಯಾ=ನಿನ್ನ ಅಪ್ಪಣೆಯಿಂದ ಆಹ್ವಯೇ =ಕರೆಯುವೆನು ಎಂದು ಹೇಳಿದಳು ॥ ೨೩ ॥

ವರಂ ಸಮಾಶ್ರಿತಾಪತಿಂ ವ್ರಜೇತ ಯಾ ತತೋಽಧಮಂ ॥
ನಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥ ೨೪ ॥

ವರಂ=ಉತ್ತಮನಾದ ಪತಿಂ=ಗಂಡನನ್ನು ಸಮಾಶ್ರಿತಾ=ಹೊಂದಿರುವ ಯಾ=ಯಾವ ಸ್ತ್ರೀಯು ತತಃ=ಆ ಉತ್ತಮ ಪತಿಯಿದೆಸೆಯಿಂದ ಅಧಮಂ=ನೀಚನನ್ನು ವ್ರಜೇತ ಹೊಂದುವಳೋ ಅಸ್ಯಾಃ=ಇವಳಿಗೆ ಕಾಚಿತ್ ನಿಷ್ಕೃತಿಃ=ದೇಹ ಹಾನಿಯನ್ನು ಬಿಟ್ಟು ಬೇರೆ ಯಾವ ಪ್ರಾಯಶ್ಚಿತ್ತವೂ ನ=ಇರುವುದಿಲ್ಲ. ಸಾ=ಅವಳು ಭರ್ತೃಲೋಕಂ=ಗಂಡನು ಹೊಂ ದುವ ಲೋಕವನ್ನು ನಋಚ್ಛತಿ ಹೊಂದುವುದಿಲ್ಲ. ॥ ೨೪ ॥

ಕೃತೇಪುರಾ ಸುರಾಸ್ತಥಾ ಸುರಾಂಗನಾಶ್ಚ ಕೇವಲಂ ॥
ನಿಮಿತ್ತತೋಽಪಿ ತಾಃ ಕ್ವಚಿನ್ನತಾನ್ವಿಹಾಯ ರೇಮಿರೇ ॥ ೨೫ ॥

ಪುರಾ=ಮೊದಲುಕೃತೇ=ಕೃತಯುಗದಲ್ಲಿ ಸುರಾಃ=ದೇವತೆಗಳು ಕೇವಲಂ=ಮುಂಖ್ಯವಾಗಿ ನಿಮಿತ್ತತೋಪಿ= ಯಾವ ಕಾರಣದಿಂದಲೂ ಕೂಡ ಕ್ವಚಿತ್=ಎಲ್ಲಿಯೂ ಕೂಡ ತಾಃ=ಆ ತಮ್ಮ ನಿಯತ ಪತ್ನಿಯರನ್ನು ವಿಹಾಯ=ಬಿಟ್ಟು ನರೇಮಿರೇ=ಅನಿಯತಸ್ತ್ರೀಯರನ್ನೂ ಕ್ರೀಡಿಸಲಿಲ್ಲ. ತಥಾ=ಹಾಗೆಯೇ ಸುರಾಂಗನಾಶ್ಚ=ದೇವತೆಗಳ ನಿಯತಸ್ತ್ರೀಯರೂ ಕೂಡ ನಿಮಿತ್ತತೋಪಿ=ಯಾವ ಕಾರಣದಿಂದಲೂ ಕ್ವಚಿತ್=ಎಲ್ಲಿಯೂ ಕೂಡ ತಾನ್=ಆ ತಮ್ಮ ನಿಯತ ಪತಿಗಳನ್ನು ವಿಹಾಯ=ಬಿಟ್ಟು ನರೇಮಿರೇ=ಅನ್ಯಪುರುಷರನ್ನು ಕ್ರೀಡಿಸಲಿಲ್ಲ. ॥ ೨೫ ॥

ಮನೋವ ಚಶ್ಯರೀರತೋಯತೋಹಿತಾಃ ಪತಿವ್ರತಾಃ ॥
ಅನಾದಿಕಾಲತೋಽಭವಂಸ್ತತಃ ಸಭರ್ತೃಕಾಃ ಸದಾ ॥ ೨೬ ॥

ತಾಃ=ಆಸುರಾಂಗನೆಯರು ಅನಾದಿಕಾಲತಃ=ಅನಾದಿಕಾಲದಿಂದ ಮನೋವಚಶ್ಯರೀರತಃ=ಮನಸ್ಸು ಮಾತು ದೇಹಗಳಿಂದ ಯತಃ=ಯಾವ ಕಾರಣದಿಂದ ಪತಿವ್ರತಾಃ=ಪತಿಧರ್ಮದಲ್ಲಿ ಆಸಕ್ತರೋ ತತಃ=ಆ ಕಾರಣದಿಂದ ಸದಾ= ಯಾವಾಗಲೂ ಸಭರ್ತೃಕಾಃ=ಪತಿಗಳಿಂದ ಕೂಡಿಕೊಂಡಿರುವವರೇ ಅಭವನ್=ಆದರು ಹಿ=ಶ್ರುತಿಗಳಲ್ಲಿ ಪ್ರಸಿದ್ಧವು ॥ ೨೬ ॥

ಸ್ವಭರ್ತೃಭಿರ್ವಿಮುಕ್ತಿಗಾಃ ಸಹೈವತಾ ಭವಂತಿಹಿ ॥
ಕೃತಾಂತಮಾಪ್ಯಚಾಪ್ಸರಃ ಸ್ತ್ರಿಯೋ ಬಭೂವುರೂರ್ಜಿತಾಃ ॥ ೨೭ ॥

ತಾಃ=ಆ ದೇವಾಂಗನೆಯರು ಸ್ವಭರ್ತೃಭಿಃ=ತಮ್ಮ ತಮ್ಮ ಗಂಡಂದಿರಿಂದ ಸಹೈವ = ಕೂಡಿಕೊಂಡೇ ವಿಮುಕ್ತಿಗಾಃ= ಪೋಕ್ಷವನ್ನು ಹೊಂದತಕ್ಕವರು ಭವಂತಿ=ಆಗುತ್ತಾರೆ. ಹಿ=ಪ್ರಸಿದ್ಧ ಹೀಗಾದರೆ ದೇವತೆಗಳಿಗೆ ಊರ್ವಶ್ಯಾದ್ಯಪ್ಸರ ಸ್ತ್ರೀಯರ ಭೋಗವು ಹೇಗೆ ಎಂಬ ಶಂಕೆಗೆ ಊರ್ವಶ್ಯಾದಿಗಳು ದೇವತಾಸ್ತ್ರೀಯರಲ್ಲ ಅಪ್ಸರ ಸ್ತ್ರೀಯರು ಎಂದು ಸಮಾಧಾನವನ್ನು ಹೇಳುತ್ತಾರೆ ಕೃತಾಂತಂ=ಕೃತಯುಗದ ಕೊನೆಯನ್ನು ಆಪ್ಯ=ಹೊಂದಿ ಅಂದರೆ ಕೃತಯುಗದ ಅನಂತರ ಊರ್ಜಿತಾಃ=ಉತ್ಕೃಷ್ಟರಾದ ಬಹುಸಂಖ್ಯಾಕರಾದ ಯಾಃ=ಯಾವ ಅಪ್ಸರಸ್ತ್ರಿಯಃ=ಅಪ್ಸರ ಸ್ತ್ರೀಯರು ಬಭೂವುಃ=ಆದರೋ

ಅನಾವೃತಾಶ್ಚ ತಾಸ್ತಥಾ ಯಥೇಷ್ಟ ಭರ್ತೃಕಾಃ ಸದಾ ॥
ಅತಸ್ತು ತಾ ನಭರ್ತೃಭಿರ್ವಿಮುಕ್ತಿಮಾಪುರುತ್ತಮಾಂ ॥ ೨೮ ॥

ತಾಃ=ಆ ಅಪ್ಸರ ಸ್ತ್ರೀಯರು ಅನಾವೃತಾಃ=ಪಾಣಿಗ್ರಹಣಧರ್ಮದಿಂದ ಸ್ವೀಕರಿಸಲ್ಪಡದವರು. ಅಥವಾ ನಾಚಿಗೆಯಿಲ್ಲದವರೋ ತಥಾ=ಹಾಗೆಯೇ ಸದಾ=ಯಾವಾಗಲೂ ಯಥೇಷ್ಟಭರ್ತೃಕಾಃ=ತಮ್ಮ ಮನಸ್ಸಿಗೆ ಇಷ್ಟರಾದ ಗಂಡಂದಿರುಳ್ಳವರೋ ಅತಃ=ಈ ಕಾರಣದಿಂದ ತಾಃ=ಆ ಅಪ್ಸರ ಸ್ತ್ರೀಯರು ಭರ್ತೃಭಿಃ ಸಹ=ನಿಯತ ಪತಿಗಳುಳ್ಳ ಶಚ್ಯಾದಿಗಳಂತೆ ಯಾವನಾದರೂ ಒಬ್ಬ ತಮ್ಮ ಗಂಡನನ್ನು ಮುಂದೆ ಮಾಡಿಕೊಂಡು ಅವನಿಂದ ಕೂಡಿಕೊಂಡು ಉತ್ತಮಾಂ ವಿಮುಕ್ತಿಂ = ಶ್ರೇಷ್ಠವಾದ ಮುಕ್ತಿಯನ್ನು ನಾಪುಃ=ಹೊಂದಲಿಲ್ಲ ಮುಂಕ್ತಿಯಲ್ಲಿಯೂ ಕೂಡ ದೇವತೆಗಳು ಜಾರರೇ ಗಂಡಂದಿರಲ್ಲ ತಾವು ಕೂಡ ಸ್ವೇಚ್ಛಾನುಸಾರವಾಗಿ ಇರತಕ್ಕವರು. ॥ ೨೮ ॥

ಅನ್ವಃ— ಹಾಗಾದರೆ ನಿಯತಾಂಗನೆಯರಾದ ತಾರಾದಿಗಳಿಗೆ ವ್ಯಭಿಚಾರವು ಕೃತಾಂತ್ಯದಲ್ಲಿ ಹೇಗೆ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ

ಸುರಸ್ತ್ರಿಯೋಽತಿಕಾರಣೈರ್ಯದಾನ್ಯಥಾಸ್ಥಿತಾಸ್ತದಾ ॥
ದುರನ್ವಯಾ ಸುದುಃಸ್ಸಹಾ ವಿಪತ್ತತೋ ಭವಿಷ್ಯತಿ ॥ ೨೯ ॥

ಯದಾ=ಯಾವಾಗ ಸುರಸ್ತ್ರಿಯಃ=ನಿಯತ ದೇವತಾ ಸ್ತ್ರಿಯರು ಅತಿ=ತಮ್ಮ ಪತಿಗಳನ್ನು ಅತಿಕ್ರಮಿಸಿ ಕಾರಣೈಃ= ಬಲವತ್ಕಾರಣಗಳಿಂದ ಅನ್ಯಥಾ=ಪರಪುರುಷ ಸಂಯೋಗದಿಂದ ಸ್ಥಿತಾಃ=ಇರುತ್ತಾರೋ ತದಾ=ಆವಾಗ ದುರನ್ವಯಾ= ದುಃಖವನ್ನುಂಟು ಮಾಡತಕ್ಕ ಸಂಬಂಧವುಳ್ಳ ಸುದುಸ್ಸಹಾ=ಸಹಿಸಲಿಕ್ಕೆ ಆಶಕ್ಯವಾದ ವಿಪತ್=ಆಪತ್ತು ತತಃ=ತಮಗೆ ಯೋಗ್ಯವಾದ ಪಾತಿವ್ರತ್ಯದ ಭಂಗದಿಂದುಂಟಾದ ಪಾಪದಿಂದ ಭವಿಷ್ಯತಿ=ಆಗುವುದು ಆದ್ದರಿಂದ ನಿಯತ ದೇವಸ್ತ್ರೀಯರಿಗೂ ಕೂಡ ತಮ್ಮ ಪತಿಗಳ ದೆಸೆಯಿಂದ ಅಧಿಕ ಪುರುಷನನ್ನು ಸ್ವೀಕರಿಸುವುದರಿಂದ ಪರಲೋಕಕ್ಕೆ ವಿರೋಧಿಯಾದ ಪಾಪವಿಲ್ಲದಿದ್ದರೂ ಕೂಡಾ ಐಹಿಕ ದುಃಖವನ್ನುಂಟು ಮಾಡುವ ಪಾಪವು ಗಂಡನಿಗೂ ಮಕ್ಕಳಿಗೂ ತಾಯಿಗೂ ಕೂಡ ಬರುತ್ತದೆ. ॥ ೨೯ ॥

ಅಯುಕ್ತಮುಕ್ತವಾಂಸ್ತತೋ ಭವಾಂಸ್ತಥಾಪಿ ತೇವಚಃ ॥
ಅಲಂಘ್ಯಮೇವ ಮೇ ತತೋ ವದಸ್ವಪುತ್ರದಂ ಸುರಂ ॥ ೩೦ ॥

ತತಃ=ಆ ಕಾರಣದಿಂದ ಭವಾನ್=ನೀವು ಅಯುಕ್ತಂ=ಯೋಗ್ಯವಲ್ಲದ ಮಾತನ್ನು ಉಕ್ತವಾನ್=ಹೇಳಿದಿರಿ ತಥಾಪಿ =ಹಾಗಾದರೂ ತೇ=ನಿಮ್ಮ ವಚಃ=ಮಾತು ಮೇ=ನನ್ನಿಂದ ಅಲಂಘ್ಯಮೇವ=ಉಲ್ಲಂಘಿಸಲಿಕ್ಕೆ ಅಶಕ್ಯವೇ ತತಃ=ಆ ಕಾರಣದಿಂದ ಪುತ್ರದಂ ಮಗನನ್ನು ಕೊಡತಕ್ಕ ಸುರಂ=ದೇವತೆಯನ್ನು ವದಸ್ವ=ಹೇಳಿರಿ ॥ ೩೦ ॥

ಇತೀರಿತೋಽಬ್ರವೀನ್ನೃಪೋನ ಧರ್ಮತೋವಿನಾಭುವಃ ॥

ಇತಿ=ಈ ರೀತಿಯಾಗಿ ಈರಿತಃ=ಹೇಳಿಸಿ ಕೊಳ್ಳಲ್ಪಟ್ಟ ನೃಪಃ=ಪಾಂಡುರಾಜನಂ ನೃಪಃ=ರಾಜನು ಧರ್ಮತಃ=
ಧರ್ಮವನ್ನು ವಿನಾ ಹೊರತು ಭುವಃ=ಭೂವಿಯನ್ನು ಅಭಿರಕ್ಷಿತಾ=ರಕ್ಷಿಸತಕ್ಕವನು ಹಿ = ಯಾವ ಕಾರಣದಿಂದ ನಭವೇತ್=
ಆಗಲಾರನೋ ತತ್=ಆ ಕಾರಣದಿಂದ ವಿಭುಂ=ಪುತ್ರದಾನದಲ್ಲಿ ಸಮರ್ಥನಾದ ತಂ=ಆ ಧರ್ಮಾತ್ಮಕ ದೇವತೆಯನ್ನು ಆಶು=
ಕೂಡಲೇ ಅಹ್ವಯ=ಕರೆ ॥ ೩೧ ॥

ಸಧರ್ಮಜ್ಞಸ್ಸುಧಾರ್ಮಿಕೋ ಭವೇದ್ಧಿ ಸೂನುರುತ್ತಮಃ ॥
ಇತೀರಿತೇ ತಯಾ ಯಮಃ ಸಮಾಹುತೋಽಗಮದ್ದ್ರುತಂ ॥ ೩೨ ॥

ಹಿ = ಯಾವ ಕಾರಣದಿಂದ ಧರ್ಮಜಃ=ಯಮನಿಂದ ಹುಟ್ಟಿರುವ ಸಃ=ಆದಾವ ಉತ್ತಮಃ ಸೂನುಃ=ಶ್ರೇಷ್ಠ
ಮಗನು ಸುಧಾರ್ಮಿಕಃ=ಅತ್ಯಂತ ಧರ್ಮನಿಷ್ಠನು ಭವೇತ್=ಆಗುವೆನು ಇತಿ=ಈ ರೀತಿಯಾಗಿ ಈರಿತೇಸತಿ=ಪಾಂಡುವಿನಿಂದ
ಹೇಳಲ್ಪಡುತ್ತಿರಲು ಗಾಂಧಾರಿಯ ಗರ್ಭಕ್ಕೆ ಒಂದು ವರ್ಷ ಆದ ಮೇಲೆ ತಯಾ = ಆ ಕುಂತಿಯಿಂದ ಬಾ ಎಂಬುದಾಗಿ ಕರೆಯ
ಲ್ಪಟ್ಟ ಯಮಃ = ಯಮನಂ ದ್ರುತಂ=ಕೂಡಲೇ ಅಗಮತ್=ಬಂದನು ॥ ೩೨ ॥

ತತಶ್ಚ ಸದ್ಯ ಏವ ಸಾ ಸುಷಾವ ಪುತ್ರಮುತ್ತಮಮ್ ।
ಯುಧಿಷ್ಠಿರಂಯಮೋಹಿಸ ಪ್ರಪೇದ ಆತ್ಮಪುತ್ರತಾಂ ॥ ೩೩ ॥

ಸಾ=ಆ ಕುಂತಿಯು ಸದ್ಯಏವ=ಕೂಡಲೇ ತತಃ=ಆ ಯಮನ ದೆಸೆಯಿಂದ ಯುಧಿಷ್ಠಿರ=ಯುಧಿಷ್ಠಿರನೆಂಬ ಉತ್ತಮ
ಪುತ್ರಂ = ಶ್ರೇಷ್ಠ ಮಗನನ್ನು ಸುಷಾವ=ಹಡೆದಳು ಸಃ=ಆ ಯುಧಿಷ್ಠಿರನು ಹಿ=ಯಾವ ಕಾರಣದಿಂದ ಯಮಃ=ಯಮನೇ
ತಸ್ಮಾತ್=ಆ ಕಾರಣದಿಂದ ಆತ್ಮಪುತ್ರತಾಂ=ತಾನೇ ಪುತ್ರತ್ವವನ್ನು ಪ್ರಪೇದೇ=ಹೊಂದಿದನು. ॥ ೩೩ ॥

ಯಮೇಸುತೇತು ಕುಂತಿತಃ ಪ್ರಜಾತವಿವ ಸೌಬಲೀ ॥
ಅದಹ್ಯತೇರ್ಷ್ಯಯಾ ಚಿರಂ ಬಭಂಜ ಗರ್ಭಮೇವ ಚ ॥ ೩೪ ॥

ಕುಂತಿತಃ=ಕುಂತಿಯಿಂದ ಯಮೇ=ಯಮ ಸ್ವರೂಪನಾದ ಸುತೇತಂ = ಮಗನಾದರೂ ಪ್ರಜಾತೇಸತಿಃ=ಹುಟ್ಟುತ್ತಿ
ರಲಂ ಸೌಬಲೀ=ಗಾಂಧಾರಿಯು ಈರ್ಷ್ಯಯಾ=ಕುಂತಿಗೆ ತನ್ನಿಂದ ಮೊದಲು ಮಗನು ಹುಟ್ಟಿದನೆಂದಂ ಮಾತ್ಸರ್ಯದಿಂದ
ಅದಹ್ಯತ=ದುಃಖಾಗ್ನಿಯಿಂದ ಸುಡುವಂತೆ ಮಾಡಿಕೊಂಡಿರಲು ಅಚಿರಂ=ಕೂಡಲೇ ಗರ್ಭವೇವ=ಗರ್ಭವನ್ನೇ ಬಭಂಜಚ=
ಗರ್ಭಪಾತವಾಗುವಂತೆ ಮುಷ್ಟಿಯಿಂದ ಮರ್ದಿಸಿದಳು ॥ ೩೪ ॥

ಸ್ವಗರ್ಭಪಾತನೇಕೃತೇ ತಯಾ ಜಗಾಮ ಕೇಶವಃ ॥
ಪರಾಶರಾತ್ಮಜೋ ನ್ಯಧಾದ್ಘಟೀಷು ತಾನ್ವಿಭಾಗಶಃ ॥ ೩೫ ॥

ತಯಾ = ಆ ಗಾಂಧಾರಿಯಿಂದ ಸ್ವಗರ್ಭಪಾತನೇ=ತನ್ನ ಗರ್ಭಪಾತವು ಕೃತೇಸತಿ=ಮಾಡಲ್ಪಡುತ್ತಿರಲು ಪರಾಶರಾ
ತ್ಮಜಃ=ಪರಾಶರ ಋಷಿಗಳ ಮಗನಾದ ಕೇಶವಃ = ಬ್ರಹ್ಮರುದ್ರಪ್ರೇರಕರಾದ ವೇದವ್ಯಾಸದೇವರು ಜಗಾಮ=ಹೋದರು
ತಾನ್=ಆ ಮಾಂಸರಾಶಿಯಲ್ಲಿರುವ ಜಂತುಗಳನ್ನು ವಿಭಾಗಶಃ=ನೂರಒಂದು ವಿಭಾಗ ಮಾಡಿ ಘಟೀಷು=ಕುಂಭಗಳಲ್ಲಿ
ನ್ಯಧಾತ್=ಇಟ್ಟರು ॥ ೩೫ ॥

ಶತಾತ್ಮನಾ ವಿಭೇದಿತಾಃ ಶತಂ ಸುಯೋಧನಾದಯಃ ॥
ಬಭೂವುರನ್ನಹಂ ತತಃ ಶತೋತ್ತರಾಚ ದುಃಶಲಾ ॥ ೩೬ ॥

ಶತಾತ್ಮನಾ=ನೂರು ಪ್ರಕಾರದಿಂದ ವಿಭೇದಿತಾಃ=ವಿಭಾಗವನ್ನು ಹೊಂದಿದ ಸುಯೋಧನಾದಯಃ=ಸುಯೋಧನನೆ
ಮೊದಲಾಗಿ ಉಳ್ಳ ಶತು =ನೂರು ಸಂಖ್ಯಾಕರು ಅನ್ನಹಂ =ಪ್ರತಿದಿನವೂ ತತಃ =ಆ ಘಟಗಳ ದೆಸೆಯಿಂದ ಬಭೂವುಃ=

ಹುಟ್ಟಿದರು. ಶತೋತ್ತರಾ= ನೂರ ಒಂದನೆಯ ಯಾವ ಮಾಂಸರಾಶಿಯೋ ಅದರಿಂದ ದುಃಶಲಾ =ದುಃಶಲೆಯೆಂಬ ಕನ್ಯೆಯು ಬಭೂವ =ಹುಟ್ಟಿದಳು. ॥ ೩೬ ॥

ಸದೇವಕಾರ್ಯಸಿದ್ಧಯೇ ರರಕ್ಷಗರ್ಭಮೀಶ್ವರಃ ॥
ಪರಾಶರಾತ್ಮಜೋ ವಿಭುರ್ವಿಚಿತ್ರವೀರ್ಯಜೋದ್ಭವಂ ॥ ೩೭ ॥

ಈಶ್ವರಃ=ಸರ್ವಸ್ವಾಮಿಯಾದ ವಿಭುಃ=ಸಮರ್ಥರಾದ ಸಃ=ಅದಾವ ಪರಾಶರಾತ್ಮಜಃ=ಪರಾಶರ ಪುತ್ರರಾದ ವೇದ ವ್ಯಾಸದೇವರು ದೇವಕಾರ್ಯಸಿದ್ಧಯೇ=ದೇವತೆಗಳ ಕಾರ್ಯಸಿದ್ಧಿಗೋಸ್ಕರ ವಿಚಿತ್ರವೀರ್ಯಜೋದ್ಭವಂ=ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನಿಂದ ಉತ್ಪತ್ತಿ ಉಳ್ಳ ಗರ್ಭಂ=ಗರ್ಭವನ್ನು ರರಕ್ಷ= ರಕ್ಷಿಸಿದರು. ॥ ೩೭ ॥

ಕಲಿಃಸುಯೋಧನೋsಜನಿ ಪ್ರಭೂತಬಾಹುವೀರ್ಯಯುಕ್ ।
ಪ್ರಧಾನವಾಯು ಸನ್ನಿಧೇರ್ಬಲಾಧಿಕತ್ವಮಸ್ಯ ತತ್ ॥ ೩೮ ॥

ಕಲಿಃ=ಕಲಿಯು ಪ್ರಭೂತಬಾಹುವೀರ್ಯಯುಕ್=ಬಹಳ ಬಾಹುಬಲದಿಂದ ಕೂಡಿದವನಾಗಿ ಸುಯೋಧನಃ= ಸುಯೋಧನನೆಂಬ ನಾಮದಿಂದ ಅಜನಿ=ಹುಟ್ಟಿದನು. ಅಸ್ಯ=ಈ ಸುಯೋಧನನಿಗೆ ಪ್ರಧಾನವಾಯುಸನ್ನಿಧೇಃ=ಮುಖ್ಯ ಪ್ರಾಣದೇವರ ಸನ್ನಿಧಾನದಿಂದ ತತ್=ಆ ಹಿಂದೆ ಹೇಳಲ್ಪಟ್ಟ ಬಲಾಧಿಕತ್ವಂ=ಅಧಿಕ ಬಲವು ॥ ೩೮ ॥

ಪುರಾಹಿ ಮೇರು ಮೂರ್ಧ್ನಿ ತ್ರಿವಿಷ್ಟಪೌಕಸಾಂ ವಚಃ ॥
ವಸುಂಧರಾತಲೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ ॥ ೩೯ ॥

ಪುರಾ = ಹಿಂದೆ ಮೇರು ಮೂರ್ಧ್ನಿ=ಮೇರುಪರ್ವತದ ಮೇಲ್ಭಾಗದಲ್ಲಿ ತ್ರಿವಿಷ್ಟ ಪೌಕಸಾಂ=ಸ್ವರ್ಗವು ಮಂದಿರವಾಗಿ ಉಳ್ಳದೇವತೆಗಳ ವಸುಂಧರಾತಲೋದ್ಭವೋನ್ಮುಖಂ= ಭೂತಲದಲ್ಲಿ ಹುಟ್ಟುವುದಕ್ಕಾಗಿ ಉದ್ಯುಕ್ತವಾದ ವಚಃ=ಮಾತು ದಿತೇಃ=ದಿತಿಯ ಸುತೈಃ=ಪುತ್ರರಾದ ದೈತ್ಯರಿಂದ ಶ್ರುತಂ =ಕೇಳಲ್ಪಟ್ಟಿತು. ॥ ೩೯ ॥

ತತಸ್ತುತೇತ್ರಿಲೋಚನಂ ತಪೋಬಲಾದತೋಷಯನ್ ॥
ವೃತಶ್ಚ ದೇವಕಂಟಕೋಹ್ಯವಧ್ಯಏವ ಸರ್ವತಃ ॥ ೪೦ ॥

ತತಃ=ಅನಂತರ ತೇ=ಆದೈತ್ಯರು ತಪೋಬಲಾತ್ =ತಪಸ್ಸಿನ ಸಾಮರ್ಥ್ಯದಿಂದ ತ್ರಿಲೋಚನಂ=ಮೂರು ಕಣ್ಣುಗಳುಳ್ಳ ರುದ್ರದೇವರನ್ನು ಅತೋಷಯನ್=ಸಂತೋಷಪಡಿಸಿದರು ದೇವಕಂಟಕಃ=ದೇವತೆಗಳಿಗೆ ಶತ್ರುವಾದ ಕಲಿಯು ಸರ್ವತಃ=ಎಲ್ಲರಿಂದಲೂ ಅವಧ್ಯಏವ=ನಾಶರಹಿತನೇಭವತು=ಆಗಲಿ ಇತಿ=ಎಂಬುದಾಗಿ ವರಃ = ವರವು ಸಂತುಷ್ಟನಾದ ಶಿವನಿಂದ ಎಲ್ಲಾ ಅಸುರರಿಂದಲೂ ವೃತಃ=ವರಿಸಲ್ಪಟ್ಟಿತು. ಕಲಿಯು ದೈತ್ಯಗಣಗಳಲ್ಲಿ ಮುಖ್ಯನಾದ್ದರಿಂದ ದೈತ್ಯರು ತಾವು ತಪಸ್ಸನ್ನು ಮಾಡಿ ಕಲಿಯ ಶ್ರೇಯಸ್ಸನ್ನೇ ಪ್ರಾರ್ಥಿಸಿದರು. ॥ ೪೦ ॥

ವರಾದುಮಾಪತೇಸ್ತತಃ ಕಲಿಃ ಸ ದೇವ ಕಂಟಕಃ ॥
ಬಭೂವ ವಜ್ರಕಾಯಯುಕ್ಸುಯೋಧನೋ ಮಹಾಬಲಃ ॥ ೪೧ ॥

ತತಃ= ಅನಂತರ ಉಮಾಪತೇಃ=ಪಾರ್ವತೀಪತಿಯಾದ ರುದ್ರದೇವರ ವರಾತ್=ವರದಿಂದ ದೇವಕಂಟಕಃ=ದೇವದ್ವೇಷಿಯಾದ ಸ ಕಲಿಃ=ಆ ಕಲಿಯು ವಜ್ರಕಾಯಯುಕ್=ವಜ್ರದಂತೆ ಕಠಿಣವಾದ ದೇಹದಿಂದ ಕೂಡಿದವನೂ ಮಹಾಬಲಃ= ಮಹತ್ತಾದ ಬಲವುಳ್ಳವನೂ ಸುಯೋಧನಃ=ಸುಯೋಧನನೆಂಬ ನಾಮವುಳ್ಳವನೂ ಬಭೂವ=ಆದನು. ॥ ೪೧ ॥

ಅವಧ್ಯಏವಸರ್ವತಃ ಸುಯೋಧನೇ ಸಮುತ್ಥಿತೇ ॥
ಘೃತಾಭಿಪೂರ್ಣಕುಂಭತಃ ಸ ಇಂದ್ರಜಿತ್ಸಮುತ್ಥಿತಃ ॥ ೪೨ ॥

ಘೃತಾರ್ಭಿಪೂರ್ಣಕುಂಭತಃ=ತುಪ್ಪದಿಂದ ಪೂರ್ಣವಾದ ಮಡಿಕೆಯ ದೆಸೆಯಿಂದ ಸರ್ವತಃ=ಎಲ್ಲರಿಂದಲೂ ಅವಧ್ಯ ಏವ=ನಾಶರಹಿತನೇ ಆದ ಸುಯೋಧನೇ=ಸುಯೋಧನನು ಸಮುಷ್ಠಿತೇಸತಿ= ಹುಟ್ಟುತ್ತಿರಲು ಸಃ=ಆ ರಾವಣನ ಮಂಗನೆಂದು ಪ್ರಸಿದ್ಧನಾದ ಇಂದ್ರಜಿತ್=ಇಂದ್ರಜಿತ್ ಎಂಬ ರಾಕ್ಷಸನು ಸಮಜಿಸ್ಥಿತಃ=ಹುಟ್ಟಿದನು. ॥ ೪೨ ॥

ಸ ದುಃಖಶಾಸನೋಽಭವತ್ತತೋಽತಿಕಾಯು ಸಂಭವಃ ॥
ಸ ವೈವಿಕರ್ಣ ಉಚ್ಯತೇ ತತಃಖರೋಽಭವದ್ಬಲೀ ॥ ೪೩ ॥

ಸಃ=ಆ ಇಂದ್ರಜಿತುವೇ ದುಃಖಿಶಾಸನಃ=ದುಃಖದಿಂದ ಶಾಸನವುಳ್ಳವನಾದ್ದರಿಂದ ದುಃಶಾಸನನಾಮಕನು ಅಭವತ್=ಆದನು ತತಃ=ಅನಂತರ ಅತಿಕಾಯಸಂಭವಃ=ಅತಿಕಾಯನ ಉತ್ಪತ್ತಿಯು ಅಭವತ್=ಆಯಿತು ಸವ್ಯೆ ಆ ಅತಿಕಾಯನೇ ವಿಕರ್ಣಃ=ವಿಕರ್ಣನೆಂದು ಉಚ್ಯತೇ=ಹೇಳಲ್ಪಡುತ್ತಾನೆ ತತಃ=ಅನಂತರ ಬಲೀ ಬಲಿಷ್ಠನಾದ ಖರಃ ಖರನೆಂಬ ರಾಕ್ಷಸನು ಅಭವತ್ ಹುಟ್ಟಿದನು. ॥ ೪೩ ॥

ಸಚಿತ್ರಸೇನನಾಮಕಸ್ತಥಾಪರೇಚರಾಕ್ಷಸಾಃ ॥
ಬಭೂವು ರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ ೪೪ ॥

ಸಃ=ಆ ಖರಾಸುರನೇ ಚಿತ್ರಸೇನನಾಮಕಃ=ಚಿತ್ರಸೇನನೆಂದು ಹೆಸರುಳ್ಳವನು. ತಥಾ=ಹಾಗೆಯೇ ಅಪರೇ=ಇತರರಾದ ರಾಕ್ಷಸಾಃ=ರಾಕ್ಷಸರು ವಿಚಿತ್ರವೀರ್ಯಜಾತ್ಮಜಾಃ=ವಿಚಿತ್ರವೀರ್ಯನ ಮಂಗನಾದ ಧೃತರಾಷ್ಟ್ರನಿಗೆ ಮಂಕ್ಕಳಾಗಿ ಉಗ್ರಪೌರುಷಾಃ=ಕ್ರೂರ ಪರಾಕ್ರಮವುಳ್ಳವರಾಗಿ ಬಭೂವುಃ=ಹುಟ್ಟಿದ ೦ ॥ ೪೪ ॥

ಸಮಸ್ತದೋಷರೂಪಿಣಃ ಶರೀರಿಣೋಹಿತೇಽಭವನ್ ॥
ಮೃಷೇತಿ ನಾಮತೋಹಿಯಾ ಬಭೂವ ದುಶ್ಶಲಾಸುರೀ ॥ ೪೫ ॥

ಕುಹೂ ಪ್ರವೇಶಸಂಯುತಾ ಯಯಾರ್ಜುನೇರ್ವಧಾಯಹಿ ।
ತಪಃ ಕೃತಂ ತ್ರಿಶೂಲಿನೇ ತತೋಹಿ ಸಾತ್ರ ಜಜ್ಞುಷೀ ॥ ೪೬ ॥

ಶರೀರಿಣಃ=ಘಟದಲ್ಲಿರುವ ಮಾಂಸಪಿಂಡದಿಂದ ಉತ್ಪನ್ನ ಶರೀರವುಳ್ಳ ತೇ=ಆ ದುರ್ಯೋಧನಾದಿಗಳು ಸಮಸ್ತ ದೋಷ ರೂಪಿಣಃ=ಅಜ್ಞಾನ ಮಿಥ್ಯಾಜ್ಞಾನಾದಿ ದೋಷಾಭಿಮಾನಿಗಳು ಅಭವನ್=ಆದರು ಮೃಷೇತಿ=ಮೂಲರೂಪದಲ್ಲಿ ಮೃಷಾ ಎಂಬುದಾಗಿ ನಾಮತಃ=ಹೆಸರಿನಿಂದ ಯಾ=ಯಾವ ಅಸುರೀ=ಅಸುರಸ್ತ್ರೀಯು ಬಭೂವ=ಇದ್ದಳೋ ಸಾ=ಅವಳು ದುಶ್ಶಲಾ ಎಂದು ಹೆಸರುಳ್ಳವಳಾದಳು ಕುಹೂ ಪ್ರವೇಶ ಸಂಯುತಾ=ನಷ್ಟಗಳಾದ ಚಂದ್ರನ ಕಲೆಗಳುಳ್ಳ ಅಮಾವಾಸ್ಯೆಗೆ ಅಭಿಮಾನಿ ದೇವತೆಯ ಆವೇಶದಿಂದ ಕೂಡಿದವಳು ಯಯಾ=ಯಾವ ಮೃಷೆಯಿಂದ ಅರ್ಜುನೇಃ=ಅರ್ಜುನನ ಮಗನಾದ ಅಭಿಮನ್ಯುವಿನ ವಧಾಯ=ನಾಶಕ್ಕೋಸ್ಕರ ತ್ರಿಶೂಲಿನೇ= ತ್ರಿಶೂಲಾಯುಧವುಳ್ಳ ರುದ್ರದೇವರಿಗೋಸ್ಕರ ತಪಃ=ತಪಸ್ಸು ಹಿ=ಯಾವ ಕಾರಣದಿಂದ ಕೃತಂ=ಮಾಡಲ್ಪಟ್ಟಿತೋ ತತಃ=ಆ ಕಾರಣದಿಂದ ಸಾ=ಆಮೃಷೆಯು ಅತ್ರ=ಧೃತರಾಷ್ಟ್ರನ ಮನೆಯಲ್ಲಿ ಜಜ್ಞುಷೀ=ಹುಟ್ಟಿದಳು. ॥ ೪೬ ॥

ಅವಃ ಅಭಿಮನ್ಯುವನ್ನು ದುಃಖಾಸನನ ಮಗನು ಕೊಂದದ್ದರಿಂದ ಇವಳು ಹೇಗೆ ಕಾರಣಳಂ ಎಂಬುದನ್ನು ವಿವರಿಸುತ್ತಾರೆ.

ತಯೋದಿತೋಹಿ ಸೈಂಧವಃ ಬಭೂವ ಕಾರಣಂ ವಧೇ ।
ಸಕಾಲಕೇಯ ದಾನವಸ್ತದರ್ಥ ಮಾಸ ಭೂತಲೇ ॥ ೪೭ ॥

ತಯಾ= ಆ ದುಃಶಲೆಯಿಂದ ಉದಿತಃ=ಹೇಳಿಸಿಕೊಳ್ಳಲ್ಪಟ್ಟ ಸೈಂಧವಃ=ಸೈಂಧವನು ವಧೇ=ಅಭಿಮನ್ಯುವಿನ ನಾಶದಲ್ಲಿ ಕಾರಣಂ ಬಭೂವ=ಕಾರಣನಾದನು. ಸಃ=ಆ ಜಯದ್ರಥನು ಕಾಲಕೇಯ ದಾನವಃ=ಕಾಲಕೇಯರೆಂಬ ಗಣದಲ್ಲಿ ಒಬ್ಬ ದಾನವನು. ಸ=ಅವನಂ ತದರ್ಥಂ=ಅಭಿಮನ್ಯುವಿನ ನಾಶಕ್ಕಾಗಿಯೇ (ಭೂತಲೇ= ಭೂಮಿಯಲ್ಲಿ ಆಸ= ಹುಟ್ಟಿದನಂ. ॥ ೪೭ ॥

ತಥಾಸ ನಿರ್ಋತಾಭಿಧೋಽನುಜಃ ಸ ನಿರ್ಋತೇರ ಭೂತ್ ।
ಸ ನಾಸಿಕಾ ಮರುದ್ಯುತೋಯುಯುತ್ಸು ನಾಮಕಃ ಕೃತೀ ॥ ೪೮ ॥

ತಥಾ= ಹಾಗೆಯೇ ನಿರ್ಋತೇಃ= ನೈಋತ್ಯ ದಿಕ್ಕಿಗೆ ಅಭಿಮಾನಿಯಾದ ನಿರ್ಋತಿ ಎಂಬ ರಾಕ್ಷಸನಿಗೆ ಯಃ= ಯಾವನು ಅನುಜಃ= ತಮ್ಮನೋ ಸಃ= ಅವನು ನಿರ್ಋತಾತಾಭಿಧಃ= ನಿರ್ಋತನೆಂದು ಹೆಸರುಳ್ಳವನು ಆಸ= ಇದ್ದನು. ಸಃ= ಆತನು ನಾಸಿಕಾಮರುದ್ಯುತಃ= ಮೂಗಿನ ಗೋಳಕಕ್ಕೆ ಅಭಿಮಾನಿಯಾದ ವಾಯುವಿನಿಂದ ಕೂಡಿದವನು, ಕೃತೀ= ಸತ್ಕರ್ಮದಲ್ಲಿ ಕುಶಲನು ಯುಯುಃತ್ಸುನಾಮಕಃ=ಯುಯುತ್ಸು ಎಂದು ಹೆಸರುಳ್ಳವನು. ॥ ೪೮ ॥

ಸಚಾಂಬಿಕೇಯದೀರ್ಯಜಃ ಸುಯೋಧನಾದ ನಂತರಃ ।
ಬಭೂವ ವೈಶ್ಯಕನ್ಯಕೋದರೋದ್ಭವೋ ಹರಿಪ್ರಿಯಃ ॥ ೪೯ ॥

ಸಃ=ಆ ಯುಯುತ್ಸುವು ಆಂಬಿಕೇಯವೀರ್ಯಜಃ=ಅಂಬಿಕಾ ಪುತ್ರನಾದ ಧೃತರಾಷ್ಟ್ರನ ರೇತಸ್ಸಿನಿಂದ ಹುಟ್ಟಿದವನೂ ಸುಯೋಧನಾತ್=ಸುಯೋಧನನ ದೆಸೆಯಿಂದ ಅನಂತರಃ=ತಮ್ಮನು ದುಃಖಾಸನನ ಅಣ್ಣನು. ವೈಶ್ಯಕನ್ಯಕೋದರೋದ್ಭವಃ= ಧೃತರಾಷ್ಟ್ರನಿಂದ ವಿವಾಹಿತಳಾದ ವೈಶ್ಯ ಕನ್ಯೆಯ ಉದರದಲ್ಲಿ ಹುಟ್ಟಿದವನು ಹರಿಪ್ರಿಯಃ=ಪರಮಾತ್ಮನ ಭಕ್ತನೂ ಬಭೂವ= ಆಗಿದ್ದನು. ॥ ೪೯ ॥

ಯುಧಿಷ್ಠಿರೇಜಾತ ಉವಾಚ ಪಾಂಡುರ್ಬಾಹ್ವೋರ್ಬಲಾಜ್ಜ್ಞಾನ ಬಲಾಚ್ಚ ಧರ್ಮಃ ।
ರಕ್ಷ್ಯೋನ್ಯಥಾ ನಾಶ ಮುಪೈತಿ ತಸ್ಮಾದ್ಬಲದ್ವಯಾಢ್ಯಂ ಜನಯಾಶು ಪುತ್ರಂ ॥ ೫೦ ॥

ಯುಧಿಷ್ಠಿರೇ=ಧರ್ಮರಾಜನು ಜಾತೇಸತಿ=ಹುಟ್ಟುತ್ತಿರಲು ಪಾಂಡುಃ=ಪಾಂಡುರಾಜನು ಉವಾಚ=ಕುಂತಿಯನ್ನು ಕುರಿತು ಹೇಳಿದನು. ಧರ್ಮಃ=ಧರ್ಮವು ಬಾಹ್ವೋಃ=ಭುಜಗಳ ಬಲಾತ್=ಸಾಮರ್ಥ್ಯದಿಂದಲೂ ಜ್ಞಾನ ಬಲಾಚ್ಚ=ಜ್ಞಾನದ ಸಾಮರ್ಥ್ಯದಿಂದಲೂ ರಕ್ಷ್ಯಃ=ರಕ್ಷಿಸಲಿಕ್ಕೆ ಯೋಗ್ಯವು ಅನ್ಯಥಾ= ಜ್ಞಾನಬಲ ಬಾಹುಬಲ ಇವೆರಡು ಇಲ್ಲವಾದರೆ ಧರ್ಮಃ = ಧರ್ಮವು ನಾಶಂ = ನಾಶವನ್ನು ಉಪೈತಿ = ಹೊಂದುತ್ತದೆ. ತಸ್ಮಾತ್ = ಆದ್ದರಿಂದ ಬಲಿದ್ವಯಾಢ್ಯಂ = ಜ್ಞಾನಬಾಹುಬಲಗಳೆರಡರಿಂದ ಸಂಪನ್ನನಾದ ಪುತ್ರಂ = ಮಗನನ್ನು ಆಶು = ಕೂಡಲೇ ಜನಯ = ಹುಟ್ಟಿಸು ॥ ೫೦ ॥

ಯಜ್ಞಾಧಿಕೋಹ್ಯಶ್ವಮೇಧೋಮನುಷ್ಯದೃಶ್ಯೇಷು ತೇಜಸ್ವ್ಯಧಿಕೋಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ ದೇವೇಷು ವಾಯುಃ ಪುರುಷೋತ್ತಮಾದೃತೇ ॥ ೫೧ ॥

ಅಶ್ವಮೇಧಃ = ಅಶ್ವಮೇಧವು ಯಜ್ಞಾಧಿಕಃ = ಯಜ್ಞಗಳಲ್ಲಿ ಶ್ರೇಷ್ಠವಾದದ್ದು ಮನುಷ್ಯದೃಶ್ಯೇಷು = ಮನುಷ್ಯರಿಗೆ ನೋಡಲಿಕ್ಕೆ ಯೋಗ್ಯಗಳಾದ ತೇಜಸ್ಸು = ಸೂರ್ಯಚಂದ್ರಾದಿ ಪ್ರಕಾಶಗಳಲ್ಲಿ ಭಾಸ್ಕರಃ = ಸೂರ್ಯನೇ ಅಧಿಕೋಹಿ= ಶ್ರೇಷ್ಠನೆಂದು ಪ್ರಸಿದ್ಧನು ವರ್ಣೇಷು = ಬ್ರಾಹ್ಮಣಕ್ಷತ್ರಿಯಾದಿ ವರ್ಣಗಳಲ್ಲಿ ವಿಪ್ರಃ = ಬ್ರಾಹ್ಮಣನು ಅಧಿಕಃ = ಉತ್ತಮನು ದೇವೇಷು = ದೇವತೆಗಳಲ್ಲಿ ವಾಯುಃ = ಪ್ರಾಣದೇವರು ಪುರುಷೋತ್ತಮಾದೃತೇ = ಶ್ರೀವಾಸುದೇವನನ್ನು ಹೊರತು ಸಕಲೈಃ = ಎಲ್ಲಾ ಗುಣೈಃ ಜ್ಞಾನಭಕ್ತ್ಯಾದಿಗುಣಗಳಿಂದ ವರಃ = ಶ್ರೇಷ್ಠರು ॥ ೫೧ ॥

ವಿಶೇಷತೋಽಪ್ಯೇಷಪಿತೈವ ಮೇ ಪ್ರಭುರ್ವ್ಯಾಸಾತ್ಮನಾ ವಿಷ್ಣುರನಂತ ಪೌರುಷಃ ।
ಅತಶ್ಚತೇಶ್ವಶ್ವರೋ ನೈವಯೋಗ್ಯೋ ದಾತುಂ ಪುತ್ರಂ ವಾಯುಮುಪೈಹಿ ತಂ ಪ್ರಭುಂ ॥ ೫೨ ॥

ಅನಂತ ಪೌರುಷಃ=ಅಪರಿಮಿತ ಪರಾಕ್ರಮಗುಳ ಪ್ರಭುಃ = ಸಮರ್ಥನಾದ ವಿಷ್ಣುಃ=ಈದಾವ ವಿಷ್ಣುಃ=ಪರಮಾತ್ಮನು ವಿಶೇಷತೋಽಪಿ=ಎನ್ನ ತಾಯಿಯಲ್ಲಿ ವೀರ್ಯಸೇಚನರೂಪ ವಿಶೇಷದಿಂದಲೂ ವ್ಯಾಸಾತ್ಮನಾ=ವ್ಯಾಸ ಸ್ವರೂಪದಿಂದ ಮೇ=ನನಗೆ ಪಿತೈವ=ತಂದೆಯೇ ಅತಶ್ಚ =ಈ ಕಾರಣದಿಂದಲೂ ತೇ=ನಿನಗೆ ಶ್ವಶುರಃ=ಮಾವನು ಪುತ್ರಂ= ಮಗನನ್ನು ದಾತುಂ=ಕೊಡಲು ನೈವಯೋಗ್ಯಃ = ಯೋಗ್ಯನಲ್ಲ ಅತಃ=ಆದ್ದರಿಂದ ಪ್ರಭುಂ = ಸಮರ್ಥನಾದ ವಾಯುಂ=ಪ್ರಾಣನನ್ನು ಉಪೈಹಿ=ಹೊಂದು ॥ ೫೨ ॥

ಇತೀರಿತೇ ಪೃಥಯಾs ಹೂತವಾಯುಸಂಸ್ಪರ್ಶಮಾತ್ರಾದ ಭವದ್ಬಲದ್ವಯೇ ।
ಸಮೋ ಜಗತ್ಯಸ್ತಿ ನಯಸ್ಯಕಶ್ಚಿತ್ ಭಕ್ತೌಚ ವಿಷ್ಣೋರ್ಭಗವದ್ವಶಃ ಸುತಃ ॥ ೫೩ ॥

ಇತಿ = ಈ ರೀತಿಯಾಗಿ ಈರಿತೇಸತಿ=ಪಾಂಡುರಾಜನಿಂದ ಹೇಳಲ್ಪಡುತ್ತಿರಲು ಪೃಥಯಾ=ಕುಂತಿಯಿಂದ ಆಹೂತವಾಯುಸಂಸ್ಪರ್ಶಮಾತ್ರಾತ್=ಮಂತ್ರದಿಂದ ಪಾರ್ಥನಾಪೂರ್ವಕವಾಗಿ ಕರೆಯಲ್ಪಟ್ಟ ಪ್ರಾಣದೇವರ ಕೇವಲ ಸ್ಪರ್ಶರೂಪವಾದ ರಮಣದಿಂದಲೇ ಯಸ್ಯ=ಯಾವ ಮುಖ್ಯಪ್ರಾಣನಿಗೆ ಜಗತಿ=ಲೋಕದಲ್ಲಿ ಬಲದ್ವಯೇ=ಜ್ಞಾನಬಲ ಬಾಹುಬಲ ಇವೆರಡರಲ್ಲಿ ಯಃಕಶ್ಚಿತ್=ಯಾವನೊಬ್ಬ ಪುರುಷನೂ ಸಮಃ = ಸಮಾನಿಕನು ನಾಸ್ತಿ=ಇಲ್ಲವೋ ವಿಷ್ಣೋಃ=ಪರಮಾತ್ಮನ ಭಕ್ತೌಚ=ಭಕ್ತಿವಿಷಯದಲ್ಲಿಯೂ ಕೂಡ ಸಮಃ=ಸದೃಶನು ನಾಸ್ತಿ=ಇಲ್ಲವೋ ಅಂತಹ ಭಗವದ್ವಶಃ=ತನ್ನ ಭಕ್ತಿಯಿಂದ ಪರಮಾತ್ಮನನ್ನು ವಶಮಾಡಿಕೊಂಡಿರುವ ಸುತಃ=ಮಗನು ಅಭವತ್=ಹುಟ್ಟಿದನು. ॥ ೫೩ ॥

ಸವಾಯುರೇವಾಭವದತ್ರ ಭೀಮು ನಾಮಾಭೃತಾವಾಃ ಸಕಲಾಹಿಯುಸ್ಮಿನ್ ।
ಸ ವಿಷ್ಣುನೇಶೇನಯುತಃ ಸದೈವನಾಮ್ನಾಸೇನೋ ಭೀಮಸೇನಸ್ತತೋಸೌ ॥ ೫೪ ॥

ಯಸ್ಮಿನ್=ಯಾರಲ್ಲಿ ಸಕಲಾಃ=ಎಲ್ಲಾ ವಾಃ=ವಿದ್ಯೆಗಳು ಹಿ=ಯಾವ ಕಾರಣದಿಂದ ಭೃತಾಃ=ಪೂರ್ಣಗಳೋ ತತಃ = ಆದ್ದರಿಂದ ಸಃವಾಯುದೇವಃ=ಆ ವಾಯುದೇವರೇ ಅತ್ರ=ಈ ಭೂಮಿಯಲ್ಲಿ (ಭೃತಾಃ ವಾಃ ಯಸ್ಮಿನ್ ಸಃ ಎಂಬ ವ್ಯುತ್ಪತ್ತಿಯಿಂದ) ಭೀಮನಾಮಾ = ಭೀಮನೆಂದು ಹೆಸರುಳ್ಳವನು ಅಭವತ್ = ಆದನು ಸ=ಆ ಭೀಮನು ಈಶೇನ=ಸ್ವಾಮಿಯಾದ ವಿಷ್ಣುನಾ=ಪರಮಾತ್ಮನಿಂದ ಸದೈವ=ಯಾವಾಗಲೂ ಯುತಃ=ಕೂಡಿರುವವನೋ ತತಃ=ಆದ್ದರಿಂದ "ಇನೇನ ಸಹಿತಃ ಸೇನಃ" ಎಂಬ ವ್ಯುತ್ಪತ್ತಿಯಿಂದ ನಾಮ್ನಾ=ಹೆಸರಿನಿಂದ ಸೇನನು ಅತಃ = ಆದ್ದರಿಂದ ಅಸೌ=ಈ ವಾಯುಪುತ್ರನು ಭೀಮಸೇನಃ=ವಿದ್ಯೆಗಳು ಪೂರ್ಣವಾಗಿರುವುದರಿಂದಲೂ ವಿಷ್ಣುವಿನಿಂದ ಯಾವಾಗಲೂ ಯುಕ್ತನಾಗಿರುವುದರಿಂದಲೂ ಭೀಮಸೇನನಾಮಕನು ॥ ೫೪ ॥

ತಜ್ಜನ್ಮವಾತ್ರೇಣಧರಾವಿದಾರಿತಾ ಶಾರ್ದೂಲಭೀತಾಜ್ಜನನೀ ಕರಾದ್ಯದಾ ।
ಪಪಾತ ಸಂಚೂರ್ಣಿತ ಏವ ಪರ್ವತಸ್ತೇನಾಖಿಲೋsಸೌ ಶತಶೃಂಗನಾಮಾ ॥ ೫೫ ॥

ತಜ್ಜನ್ಮವಾತ್ರೇಣ=ಭೀಮಸೇನನ ಉತ್ಪತ್ತಿಕ್ಷಣದಲ್ಲಿಯೇ ಧರಾ=ಭೂಮಿಯು ವಿದಾರಿತಾ=ಸೀಳಲ್ಪಟ್ಟಿತು ಶಾರ್ದೂಲಭೀತಾತ್=ಹುಲಿಯಿಂದ ಹೆದರಿದ ಜನನೀಕರಾತ್ =ತಾಯಿಯಾದ ಕುಂತಿಯ ಕೈಯಿಂದ ಯದಾ=ಯಾವಾಗ ಪಪಾತ= ಪರ್ವತದ ಮೇಲೆ ಬಿದ್ದನೋ ತದಾ=ಆಗ ಶತಶೃಂಗನಾಮಾ=ಶತಶೃಂಗವೆಂದು ಹೆಸರುಳ್ಳ ಅಸೌ = ಈ ಪರ್ವತವು ತೇನ = ಆ ಭೀಮನ ಪತನದಿಂದ ಅಖಿಲಪರ್ವತಃ = ಪರ್ವತದ ಎಲ್ಲಾ ಅವಯವಗಳು ಸಂಚೂರ್ಣಿತಃ = ಪುಡಿಯಾದವು ॥ ೫೫ ॥

ತಸ್ಮಿನ್ಪ್ರಜಾತೇರುಧಿರಂ ಪ್ರಸಸ್ರುವುರ್ಮಹಾಸುರಾ ವಾಹನಸೈನ್ಯಸಂಯುತಾಃ ।
ನೃಪಾಶ್ಚತತ್ಪಕ್ಷಭವಾಃ ಸಮುಸ್ರಾಸ್ತದಾಭೀತಾ ಅಸುರಾ ರಾಕ್ಷಸಾಶ್ಚ ॥ ೫೬ ॥

ತಸ್ಮಿನ್ = ಆ ಭೀಮ ಸೇನನು ಪ್ರಜಾತೇಸತಿ = ಹುಟ್ಟುತ್ತಿರಲು ವಾಹನ ಸೈನ್ಯ ಸಂಯುತಾಃ = ವಾಹನಗಳಿಂದಲೂ ಸೈನ್ಯಗಳಿಂದಲೂ ಕೂಡಿರುವ ಮಹಾಸುರಾಃ = ಮೂಲರೂಪದಲ್ಲಿರತಕ್ಕ ಅಸುರರೂ ತತ್ಪಕ್ಷಭವಾಃ = ಆ ಅಸುರರ ಪಕ್ಷೀಯರಾಗಿ ಭೂಮಿಯಲ್ಲಿ ಹುಟ್ಟಿರುವ ಆಸುರಾಃ = ಅಸುರ ಸ್ವರೂಪರೂ ರಾಕ್ಷಸಾಃ = ರಾಕ್ಷಸ ಸ್ವರೂಪರೂ ಆಗಿರುವ ನೃಪಾಶ್ಚ =ರಾಜರೂ ಕೂಡ ಭೀತಾಃ ಸಂತಃ = ಹೆದರಿದವರಾಗಿ ರುಧಿರಂ = ರಕ್ತವನ್ನು ಪ್ರಸಸ್ರುವುಃ = ಮುಖ ಮೂಗ್ರ ಗುದದ್ವಾರಗಳಿಂದ ಸುರಿಸಿದರು ॥ ೫೬ ॥

ಅವರ್ಧತಾತ್ರೈವ ವೃಕೋದರೋsನಲೇ ಮುದಂ ಸುರಾಣಾಮಧಿಕಂ ಪ್ರವರ್ಧಯನ್ ।
ತದೈವಶೇಷೋ ಹರಿಣೋದಿತೋsವಿಶದ್ಗರ್ಭಂ ಸುತಾಯಾ ಅಪಿದೇವಕಸ್ಯ ॥೫೭ ॥

ವೃಕೋದರಃ=ವೃಕವೆಂಬಮಹಾವಹ್ನಿಯು ಉದರದಲ್ಲಿರುವದರಿಂದ ವೃಕೋದರನೆಂದು ಹೆಸರುಳ್ಳ ಭೀಮಸೇನನು ಅತ್ರೈವ = ಈ ಬದರಿಕಾಶ್ರಮದಲ್ಲಿಯೇ ವನೇ = ವನದಲ್ಲಿ ಸಂಗಾಣಾಂ = ದೇವತೆಗಳಿಗೆ ಅಧಿಕಂ = ಹೆಚ್ಚಾಗಿ ಮುದಂ = ಸಂತೋಷವನ್ನು ಪ್ರವರ್ಧಯನ್ಸನ್=ಅಭಿವರ್ಧಿಸುವವನಾಗಿ ಅವರ್ಧತ=ಬೆಳೆದನು ತದೈವ = ಅವತಾರಕ್ಕಾಗಿ ಬ್ರಹ್ಮಾದಿಗಳು ಹರಿಯನ್ನು ಪ್ರಾರ್ಥಿಸಿವ ಸಮಯದಲ್ಲಿಯೇ ಹರಿಣೋದಿತಃ=ಅವತಾರ ಮಾಡು ಎಂಬುದಾಗಿ ಪರಮಾತ್ಮನಿಂದ ಪ್ರೇಳಿಸಿಕೊಳ್ಳಲ್ಪಟ್ಟ ಶೇಷೋಪಿ=ಶೇಷನೂ ಕೂಡ ದೇವಕಸ್ಯ=ದೇವಕನ ಸುತಾಯಾಃ=ಮಗಳಾದ ದೇವಕಿಯ ಗರ್ಭಂ= ಗರ್ಭವನ್ನು ಅವಿಶತ್=ಪ್ರವೇಶಿಸಿದನು. ॥ ೫೭ ॥

ಸತತ್ರವಾಸತ್ರಯ ಮುಷ್ಯದುರ್ಗಯಾ ಪ್ರವಾಹಿತೋರೋಹಿಣೇ ಗರ್ಭವಾಶು ।
ನಿಯುಕ್ತಯಾ ಕೇಶವೇನಾಥ ತತ್ರ ಸ್ಥಿತ್ವಾವಾಸಾನ್ಸಪ್ತಜಾತಃ ಪೃಥಿವ್ಯಾಂ ॥ ೫೮ ॥

ಸಃ=ಆ ಶೇಷನು ತತ್ರ=ಆ ದೇವಕೀಗರ್ಭದಲ್ಲಿ ತ್ರಾಸತ್ರಯಂ=ಮೂರುತಿಂಗಳು ಉಷ್ಯ=ವಾಸಮಾಡಿ ಅಥ= ಮೂರು ತಿಂಗಳ ನಂತರ ಕೇಶವೇನ ಪರಮಾತ್ಮನಿಂದ ನಿಯುಕ್ತಯಾ=ಆಜ್ಞಾಪಿಸಲ್ಪಟ್ಟ ದುರ್ಗಯಾ=ದುರ್ಗೆಯಿಂದ ರೋಹಿಣೀಗರ್ಭಂ=ರೋಹಿಣಿಯ ಗರ್ಭವನ್ನು ಆಶು=ಕೂಡಲೇ ಪ್ರವಾಹಿತಃಸನ್=ಹೊಂದಿಸಲ್ಪಟ್ಟವನಾಗಿ ತತ್ರ=ಆ ರೋಹಿಣಿಯ ಗರ್ಭದಲ್ಲಿ ಸಪ್ತಮಾಸಾನ್=ಏಳು ತಿಂಗಳುಗಳಲ್ಲಿ ಸ್ಥಿತ್ವಾ=ಇದ್ದು ಪೃಥಿವ್ಯಾಂ=ಭೂಮಿಯಲ್ಲಿ ಜಾತಃ= ಹುಟ್ಟಿದನು. ॥ ೫೮ ॥

ಸನಾಮತೋ ಬಲದೇವೋ ಬಲಾಢ್ಯೋ ಬಭೂವ ತಸ್ಯಾನು ಜನಾರ್ದನಃ ಪ್ರಭುಃ ।
ಆವಿರ್ಬಭೂವಾಖಿಲಸದ್ಗುಣೈಕಪೂರ್ಣಸ್ಸುತಾಯಾಮಿಹದೇವಕಸ್ಯ ॥ ೫೯ ॥

ಸಃ=ರೋಹಿಣಿಯ ಮಗನು ಬಲಾಢ್ಯಃ=ಬಲ ಸಂಪನ್ನನಾಗಿ ನಾಮತಃ=ಹೆಸರಿನಿಂದ ಬಲದೇವಃ=ಬಲದೇವ ನೆಂದು ಬಭೂವ=ಆದನು ತಸ್ಯ=ಆ ಬಲದೇವನ ಅನು=ಮೂರು ತಿಂಗಳ ನಂತರ ಪ್ರಭುಃ = ಸಮರ್ಥನಾದ ಅಖಿಲ ~~ಸದ್ಗುಣೈಕಪೂರ್ಣಃ=ಎಲ್ಲಾ ನಿರ್ದುಷ್ಟ ಗುಣಗಳಿಂದ ಮಾತ್ರ ಪೂರ್ಣನಾದ ಜನಾರ್ದನಃ=ಶ್ರೀಕೃಷ್ಣನು ದೇವಕಸ್ಯ=ದೇವ~~ ಕನ ಸುತಾಯಾಂ=ಮಗಳಾದ ದೇವಕಿಯಲ್ಲಿ ಆವಿರ್ಬಭೂವ=ಅವತರಿಸಿದನು ॥ ೫೯ ॥

ಯಃ ಸತ್ಸುಖಜ್ಞಾನ ಬಲೈಕದೇಹಃ ಸಮಸ್ತ ದೋಷಸ್ಪರ್ಶೋಜ್ಝಿತಃ ಸದಾ ।
ಅವ್ಯಕ್ತತತ್ಕಾರ್ಯಮಯೋನಯಸ್ಯ ದೇಹಕುತಶ್ಚಿತ್ ಕ್ವಚ ಸಹಜ್ಯೋ ಹರಿಃ ॥ ೬೦ ॥

ಯಃ=ಯಾವನು ಸತ್ಸುಖಜ್ಞಾನ ಬಲೈಕ ದೇಹಃ=ನಿರ್ದುಷ್ಟಗಳಾದ ಆನಂದ ಜ್ಞಾನಬಲಗಳೇ ಕೇವಲ ದೇಹವಾಗಿ ಉಳ್ಳವನೋ ಸದಾ=ಯಾವಾಗಲೂ ಸಮಸ್ತದೋಷ ಸ್ಪರ್ಶೋಜ್ಝಿತಃ=ಪಾರತಂತ್ರ್ಯಾದಿ ಎಲ್ಲಾ ದೋಷಗಳ ಸಂಬಂಧ ರಹಿತನೋ ಯಸ್ಯ=ಯಾವನಿಗೆ ಅವ್ಯಕ್ತತತ್ಕಾರ್ಯಮಯಃ=ಮೂಲಪ್ರಕೃತಿ ಅದರ ಕಾರ್ಯವಾದ ಪಂಚಭೂತಗಳು ಇವುಗಳ ವಿಕಾರವಾದ ಶುದ್ಧಪ್ರಾಕೃತ ಪಾಂಚ ಭೌತಿಕವಾದ ದೇಹಃ= ಶರೀರವು ಕುತಶ್ಚಿತ್=ಯಾವ ಕಾರಣದಿಂದಲೂ ಕ್ವಚ=ಯಾವ ದೇಶ ಕಾಲಗಳಲ್ಲಿಯಾ ನ=ಇಲ್ಲವೋ ಸಃ ಹರಿಃ=ಆ ದೇವಕೀ ಪುತ್ರನೇ ಅಜಃ=ಉತ್ಪತ್ತಿಶೂನ್ಯನು. ॥ ೬೦ ॥

ನ ಶುಕ್ಲರಕ್ತಪ್ರಭವೋಸ್ಯ ಕಾಯಸ್ತಥಾಪಿ ತತ್ಪುತ್ರ ತಯೋಚ್ಯತೇ ಮೃಷಾ ।
ಜನಸ್ಯ ಮೋಹಾಯ ಶರೀರತೋಸ್ಯಾಯದಾವಿ ರಾಸೀದಮಲ ಸ್ವರೂಪಃ ॥ ೬೧ ॥

ಅಸ್ಯ=ಈ ಹರಿಯ ಕಾಯಃ=ದೇಹವು ಶುಕ್ಲ ರಕ್ತ ಪ್ರಭವಃ=ಪುರುಷ ರೇತಸ್ಸಿನಿಂದಲೂ ಸ್ತ್ರೀಯರ ಶೋಣಿತದಿಂದಲೂ ಉತ್ಪತ್ತಿಯುಳ್ಳದ್ದು ನ=ಅಲ್ಲ ತಥಾಪಿ=ಹಾಗಾದರೂ ತತ್ಪುತ್ರತಯಾ=ಆ ಮಾತಾಪಿತೃಗಳ ಮಗನೆಂದು ಮೃಷಾ=ಬುದ್ಧಿ ಮೋಹದಿಂದ ಉಚ್ಯತೇ=ಅಜ್ಞಾನಿಗಳಿಂದ ಹೇಳಲ್ಪಡುತ್ತಾನೆ. ಅಮಲಸ್ವರೂಪಃ= ನಿರ್ದುಷ್ಟಸ್ವರೂಪಳುಳ್ಳ ಪರಿಯು ಜನಸ್ಯ=ಅಸುರ ಲೋಕಕ್ಕೆ ಮೋಹಾಯ = ಮಿಥ್ಯಾ ಜ್ಞಾನವನುಂಟು ಮಾಡುವದಕ್ಕೋಸ್ಕರ ಅಸ್ಯಾಃ=ಈ ದೇವಕಿಯ ಶರೀರತಃ ಶರೀರದ್ದೆಸೆಯಿಂದ ಯತ್=ಯಾವ ಕಾರಣದಿಂದ ಆವಿರಾಸೀತ್=ಪ್ರಾದುರ್ಭವಿಸಿದನೋ ತತ್=ಆ ಕಾರಣದಿಂದ ಮಗನೆಂದು ಬುದ್ಧಿಮೋಹದಿಂದ ಹೇಳಲ್ಪಡುತ್ತಾನೆ. ॥ ೬೧ ॥

ಆವಿಶ್ಯಪೂರ್ವಂವಸುದೇವವೇವ ವಿವೇಶ ತಸ್ಮಾದೃತುಕಾಲ ಏವ ॥
ದೇವೀಮುವಾಸಾತ್ರಚ ಸಪ್ತಮಾಸಾನ್ ಸಾರ್ಧಂಸ್ತತಶ್ಚಾವಿರಭೂದಜೋಪಿ ॥ ೬೨ ॥

ಪೂರ್ವಂ=ಮೊದಲು ವೆಸುದೇವವೇವ=ವಸುದೇವನನ್ನೇ ಆವಿಶ್ಯ=ಭೂತಾವೇಶದಂತೆ ಪ್ರವೇಶಿಸಿ ತಸ್ಮಾತ್=ಆ ವಸುದೇವನ ದೆಸೆಯಿಂದ ಋತುಕಾಲವಿವ=ಗರ್ಭಾಧಾನಕ್ಕೆ ಯೋಗ್ಯವಾದ ಸಮಯದಲ್ಲಿಯೇ ದೇವೀಂ=ದೇವಕಿಯ ಉದರ ವನ್ನು ವಿವೇಶ=ಭೂತಾವೇಶದಂತೆ ಪ್ರವೇಶಿಸಿದನು. ವಸುದೇವನ ರೇತಸ್ಸಿನ ದ್ವಾರಾ ದೇವಕಿಯ ಯೋನಿಯಲ್ಲಿರುವ ಶೋಣಿತ ದಲ್ಲಿ ಪ್ರವೇಶಿಸಲಿಲ್ಲ. ಅತ್ರ=ಈ ದೇವಕಿಯಲ್ಲಿ ಸಾರ್ಧಾನ್=ಏಳರ ಅರ್ಧದಿಂದ ಕೂಡಿದ ಅಂದರೆ ಮೂರುವರೆ ತಿಂಗಳಿಂದ ಕೂಡಿದ ಸಪ್ತಮಾಸಾನ್=ಏಳು ತಿಂಗಳುಗಳಲ್ಲಿ ಉವಾಸ=ವಾಸಮಾಡಿದನು. ತತಃ=ಆ ದೇವಕಿಯಿಂದ ಅಜೋಪಿ=ಉತ್ಪತ್ತಿ ರಹಿತನಾದರೂ ಆವಿರಭೂತ್=ಆವಿರ್ಭವಿಸಿದನು. ॥ ೬೨ ॥

ಯಥಾಪುರಾಸ್ತಂಭತ ಆವಿರಾಸೀದ ಶುಕ್ಲರಕ್ತೋಪಿ ನರಸಿಂಹರೂಪಃ ॥
ತಥೈವ ಕೃಷ್ಣೋಪಿ ತಥಾಪಿ ಮಾತಾಪಿತೃಕ್ರಮಾದೇವ ವಿಮೋಹಯತ್ಯಜಃ ॥ ೬೩ ॥

ನೃಸಿಂಹರೂಪಃ=ನರಸಿಂಹನ ರೂಪವುಳ್ಳ ರಿಯನು ಅಶುಕ್ಲರಕ್ತೋಪಿ=ಶುಕ್ಲಶೋಣಿತ ಸಂಬಂಧ ರಹಿತನಾಗಿ ಯಥಾ=ಹೇಗೆ ಪುರಾ=ಹಿಂದೆ ಸ್ತಂಭತಃ=ಕಂಭದಿಂದ ಆವಿರಾಸೀತ್=ಅವತರಿಸಿದನೋ ತಥೈವ=ಹಾಗೆಯೇ ಕೃಷ್ಣೋಪಿ= ಕೃಷ್ಣನೂ ಕೂಡ ಶುಕ್ಲಶೋಣಿತ ಸಂಬಂಧರಹಿತನು ತಥಾಪಿ=ಹಾಗಾದರೂ ಕೂಡ ಅಜಃ=ಉತ್ಪತ್ತಿ ಇಲ್ಲದ ಶ್ರೀಕೃಷ್ಣನು ಮಾತಾಪಿತೃಕ್ರಮಾದೇವ=ಮಾತಾಪಿತೃಗಳ ಕ್ರಮಾನುಸರಣದಿಂದಲೇ ವಿಮೋಹಯತಿ=ಅಸುರಜನರನ್ನು ಮೋಹ ಗೊಳಿಸುತ್ತಾನೆ. ॥ ೬೩ ॥

ಪಿತೃಕ್ರಮಂ ಮೋಹನಾರ್ಥಂ ಸಮೇತಿ ತತಾವತಾ ಶುಕ್ಲತೋರಕ್ತತಶ್ಚ ।
ಜಾತೋsಸ್ಯದೇಹಸ್ತ್ವಿತಿದರ್ಶನಾಯ ಸ ಶಂಖಿಚಕ್ರಾಬ್ಜಗದಃ ಸದೃಷ್ಟಃ ॥ ೬೪ ॥

ಸಃ=ಆ ಹರಿಯು ಮೋಹನಾರ್ಥಂ=ಅಸುರರನ್ನು ಮೋಹಿಸುವುದಕ್ಕಾಗಿಯೇ ಪಿತೃಕ್ರಮಂ=ತಂದೆಯನ್ನು ಪ್ರವೇಶಿ ಸುವ ಕ್ರಮವನ್ನು ಸಮೇತಿ=ಹೊಂದುತ್ತಾನೆ ತಾವತಾ = ಪಿತೃಕ್ರಮಾನುಸರಣಪೂರ್ವದಿಂದ ಅಸ್ಯ = ಈ ಕೃಷ್ಣನ ದೇಹಃ= ಶರೀರವು ಶುಕ್ಲತಃ = ಪುರುಷರೇತಸ್ಸಿನಿಂದಲೂ ರಕ್ತತಶ್ಚ = ಸ್ತ್ರೀಯರಶೋಣಿತದಿಂದಲೂ ಜಾತಃ = ಉತ್ಪನ್ನವಾದದ್ದು ನ =ಅಲ್ಲ ಇತಿ = ಎಂಬುದಾಗಿ ತರಿ = ತಂದೆ ತಾಯಿಗಳಿಗೆ ವಿಶೇಷ ಜ್ಞಾನವನ್ನುಂಟುಮಾಡುವುದಕ್ಕಾಗಿ ಸಶಂಖಿಚಕ್ರಾಬ್ಜ ಗದಃ = ಶಂಖಿ ಚಕ್ರಪದ್ಮಗದೆಗಳಿಂದ ಕೂಡಿದವನಾಗಿ ದೃಷ್ಟಃ = ತಂದೆ ತಾಯಿಗಳಿಂದ ಕಾಣಿಸಿಕೊಳ್ಳಲ್ಪಟ್ಟನು. ॥ ೬೪ ॥

ಅನೇಕ ಸೂರ್ಯಾಭ ಕಿರೀಟಯುಕ್ತೋವಿದ್ಯುತ್ಪ್ರಭೇಕುಂಡಲೇ ಧಾರಯಂಶ್ಚ ।
ಪೀತಾಂಬರೋ ವನಮಾಲೀಸ್ವನಂತಸೂರ್ಯೋರುದೀಪ್ತಿರ್ದದೃಶೇ ಗುಣಾರ್ಣವಃ ॥ ೬೫ ॥

ಅನೇಕ.. ಯುಕ್ತಃ ಅನಂತಸೂರ್ಯರ ಕಾಂತಿಯಂತೆ ಕಾಂತಿಯುಳ್ಳ ಕಿರೀಟದಿಂದ ಯುಕ್ತನಾದ ವಿದ್ಯುತ್ಪ್ರಭೇ =ಮಿಂಚಿ ನಂತೆ ಕಾಂತಿಯುಳ್ಳ ಕುಂಡಲೇ =ಕರ್ಣಾಭರಣಗಳನ್ನು ಧಾರಯನ್ =ಧರಿಸಿರುವ ಪೀತಾಂಬರಃ =ಹಳದಿಬಣ್ಣದ ವಸ್ತ್ರವನ್ನುಟ್ಟ ವನಮಾಲೀ ವನಮಾಲೆಯನ್ನು ಧರಿಸಿರುವ ಸ್ವನಂತಸೂರ್ಯೋರುದೀಪ್ತಿಃ=ಮೋಹಾದಿ ಸಂಬಂಧ ರಹಿತ ಅನಂತ ಸೂರ್ಯ ರಿಂದಲೂ ಉತ್ಕೃಷ್ಟಕಾಂತಿಯುಳ್ಳ ಗುಣಾರ್ಣವಃ =ಗುಣಗಳಿಂದ ಸಮುದ್ರದಂತಿರುವ ಶ್ರೀಕೃಷ್ಣನು ದದೃಶೇ=ಪಿತ್ರಾದಿಗಳಿಂದ ಕಾಣಿಸಿಕೊಳ್ಳಲ್ಪಟ್ಟನು. ॥ ೬೫ ॥

ಸಕಂಜಯೋನಿಪ್ರಮುಖೈಃ ಸುರೈಸ್ತುತಃ ಪಿತ್ರಾಚ ಮಾತ್ರಾಚ ಜಗಾದ ಶೂರಜಂ ॥
ನಯಸ್ವ ಮಾಂ ನಂದಗೃಹಾನಿತಿಸ್ಮ ತತೋಬಭೂವ ದ್ವಿಭುಜೋ ಜನಾರ್ದನಃ ॥ ೬೬ ॥

ಕಂಜಯೋನಿಪ್ರಮುಖೈಃಕ= ಕಮಲವು ಕಾರಣವಾಗಿಯುಳ್ಳ ಬ್ರಹ್ಮನೇ ಪ್ರಧಾನರಾಗಿಯುಳ್ಳ ಸುರೈಃ = ದೇವತೆಗಳಿಂದ ಪಿತ್ರಾಚ = ತಂದೆಯಿಂದಲೂ ಮಾತ್ರಾಚ = ತಾಯಿಯಿಂದಲೂ ಸ್ತುತಃ = ಸ್ತೋತ್ರ ಮಾಡಿಸಿ ಕೊಳ್ಳಲ್ಪಟ್ಟ ಕೃಷ್ಣನು

ಶೂರಜಂ=ಶೂರನ ಮಗನಾದ ವಸುದೇವನನ್ನು ಕುರಿತು (ಹೇ ವಸುದೇವನೇ) "ಮಾಂ =ನನ್ನನ್ನು ನಂದ ಗೃಹಾನ್ = ನಂದನ ಮನೆಯನ್ನು ಕುರಿತು ನಯಸ್ವ =ಕರೆದುಕೊಂಡು ಹೋಗು" ಇತಿ = ಎಂದು ಜಗಾದ ಹೇಳಿದನು. ತತಃ =ಅನಂತರ ಜನಾರ್ದನಃ ಶ್ರೀ ಕೃಷ್ಣನುದ್ವಿಭುಜಃ = (ಅವತಾರ ಕಾಲದಲ್ಲಿ ಚತುರ್ಭುಜವುಳ್ಳವನಾಗಿದ್ದು ಈಗ) ಎರಡು ಭುಜಗಳುಳ್ಳವನು ಬಭೂವ =ಆದನು ॥ ೬೬॥

ತದೈವಜಾತಾ ಚ ಹರೇರನುಜ್ಞಯಾ ದುರ್ಗಾಭಿದಾ ಶ್ರೀರನು ನಂದಪತ್ನ್ಯಾಂ ॥
ತತಸ್ತಮಾದಾಯ ಹರಿಂ ಯಯೌಸ ಶೂರಾತ್ಮಜೋ ನಂದಗೃಹಾನ್ನಿಶೀಥೇ ॥ ೬೭ ॥

ತದೈವ = ಕೃಷ್ಣನು ಅವತರಿಸಿದ ಸಮಯದಲ್ಲಿಯೇ ಹರೇಃ = ಶ್ರೀಕೃಷ್ಣನ ಅನುಜ್ಞಯಾ = ಅಪ್ಪಣೆಯಿಂದ ದುರ್ಗಾಭಿಧಾ=ದುರ್ಗೆಯೆಂದು ಹೆಸರುಳ್ಳ ಶ್ರೀಃ=ಲಕ್ಷ್ಮಿಯು ಅನು=ಕೃಷ್ಣನು ಅವತರಿಸಿ ಸ್ವಲ್ಪ ಸಮಯದ ನಂತರ ಕೃಷ್ಣನಿಗೆ ಅನುಕೂಲಳಾಗಿ ಜಾತಾ=ಅವತರಿಸಿದಳು. ತತಃ=ಎರಡು ಭುಜಗಳುಳ್ಳವನಾದ ಮೇಲೆ ಶೂರಾತ್ಮಜಃ =ಶೂರನ ಮಗನಾದ ವಸುದೇವನು ತಂಹರಿಂ=ಆ ಶ್ರೀಕೃಷ್ಣನ್ನು ಆದಾಯ=ಹಿಡಿದುಕೊಂಡು ನಿಶೀಥೇ=ಅರ್ಧರಾತ್ರಿ ಸಮಯದಲ್ಲಿ ನಂದಗೃಹಾನ್ = ನಂದನ ಮನೆಯನ್ನು ಕುರಿತು ಯಯೌ=ಹೋದನು. ॥ ೬೭ ॥

ಸಂಸ್ಥಾಪ್ಯ ತಂತತ್ರ ತಥೈವ ಕನ್ಯಕಾಮಾದಾಯ ತಸ್ಮಾತ್ ಸ್ವಗೃಹಂಪುನರ್ಯಯೌ ।
ಹತ್ವಾಸ್ವಸುರ್ಗರ್ಭಷಟ್ಕಂಕ್ರಮೇಣ ಮತ್ವಾಷ್ಟಮಂ ತತ್ರ ಜಗಾಮ ಕಂಸಃ ॥ ೬೮ ॥

ಸಃ=ಆ ವಸುದೇವನು ತತ್ರ=ನಂದನ ಮನೆಯಲ್ಲಿ ತಂ = ಆ ಕೃಷ್ಣನನ್ನು ಸಂಸ್ಥಾಪ್ಯ =ಇಟ್ಟು ತಥೈವ=ಅದರಂತೆಯೇ ಕನ್ಯಾಕಾಂ = ಯಶೋದೆಯಲ್ಲಿ ಅವತರಿಸಿದ ದುರ್ಗೆಯನ್ನು ಆದಾಯ=ಹಿಡಿದುಕೊಂಡು ತಸ್ಮಾತ್=ಆನಂದಗೋಪನ ಮನೆಯಿಂದ ಪುನಃ=ಮತ್ತು ಸ್ವಗೃಹ = ತನ್ನ ಮನೆಯನ್ನು ಕುರಿತು ಯಯೌ=ಹೋದನು ಕಂಸಃ=ಕಂಸನು ಸ್ವಸುಃ=ತಂಗಿಯಾದ ದೇವಕಿಯ ಗರ್ಭಷಟ್ಕಂ=ಆರು ಗರ್ಭಗಳಲ್ಲಿ ಜನಿಸಿದ ಮಕ್ಕಳನ್ನು ಕ್ರಮೇಣ ಜನನ ಕ್ರಮದಿಂದ ಹತ್ವಾ=ಕೊಂದು ಅಷ್ಟಮಂ=ಹುಟ್ಟಿದ ಮಗುವನ್ನು ಎಂಟನೆಯವನ್ನಾಗಿ ಮತ್ವಾ=ತಿಳಿದು ತತ್ರ=ಪ್ರಸೂತಿಕಾ ಗೃಹವನ್ನು ಕುರಿತು ಜಗಾಮ= ಹೋದನು. ॥ ೬೮ ॥

ಅವಃ— ಆರು ಮಕ್ಕಳನ್ನು ಕೊಂದು ಈಗ ಕೊಲ್ಲುವ ಮಗುವಿನಲ್ಲಿ ಏಳನೆಯ ಮಗುವನ್ನಾಗಿ ತಿಳಿಯದೆ ಎಂಟನೆಯ ಮಗುವನ್ನಾಗಿ ಹೇಗೆ ತಿಳಿದನು ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ.

ಗರ್ಭಂ ದೇವಕ್ಯಾಃ ಸಪ್ತಮಂ ಮೇನಿರೇಹಿ ಲೋಕಾಃ ಸ್ಮೃತಂ ತ್ವಷ್ಟಮಂ ತಾಂ ತತಃ ಸಃ ।
ಮತ್ವಾ ಹಂತುಂ ಪಾದಯೋಃ ಸಂಪ್ರಗೃಹ್ಯ ಸಂಪೋಥಯಾಮಾಸ ಶಿಲಾತಲೇಚ ॥ ೬೯ ॥

ಲೋಕಾಃ=ಜನರು ದೇವಕ್ಯಾಃ=ದೇವಕಿಯ ಸಪ್ತಮಂ ಗರ್ಭವನ್ನು=ಏಳನೆಯ ಗರ್ಭವನ್ನು ಹಿ=ಯಾವ ಕಾರಣದಿಂದ ಸ್ಮೃತಂ=ಪತಿತವಾದದ್ದನ್ನಾಗಿ (ಅಂದರೆ ದುರ್ಗೆಯು ಶೇಷನನ್ನು ದೇವಕೀ ಗರ್ಭದಿಂದ ರೋಹಿಣಿಯ ಗರ್ಭದಲ್ಲಿ ಹಾಕಿದ್ದರಿಂದ) ಮೇನಿರೇ ತಿಳಿದರೋ ತತಃ=ಆ ಏಳನೆಯ ಗರ್ಭಪಾತವಾಯಿತು ಎಂದು ತಿಳಿದ ಕಾರಣ ಸಃ = ಆ ಕಂಸನು ತಾಂ =ಆ ದುರ್ಗಾದೇವಿಯನ್ನು ಅಷ್ಟಮಂ = ಎಂಟನೆಯ ಮಗುವನ್ನಾಗಿ ಮತ್ವಾ = ತಿಳಿದು ಹಂತುಂ = ಕೊಲ್ಲಲು ಪಾದಯೋಃ= ಕಾಲುಗಳಲ್ಲಿ ಸಂಪ್ರಗೃಹ್ಯ = ಹಿಡಿದು ಶಿಲಾತಲೇ = ಬಂಡೆಕಲ್ಲಿನಲ್ಲಿ ಸಂಪೋಥಯಾಮಾಸ = ಬಡಿದನು. ॥ ೬೯ ॥

ಸಾತದ್ಧಸ್ತಾತ್ ಕ್ಷಿಪ್ರಮುತ್ಪತ್ಯ ದೇವೀಖೇsದೃಶ್ಯತೈವಾಷ್ಟಭುಜಾ ಸಮಗ್ರಾ ।
ಬ್ರಹ್ಮಾದಿಭಿಃ ಪೂಜ್ಯಮಾನಾ ಸಮಗ್ರೈರತ್ಯದ್ಭುತಾಕಾರವತೀ ಹರಿಪ್ರಿಯಾ ॥ ೭೦ ॥

ಅಷ್ಟಭುಜಾ=ಎಂಟು ಕೈಗಳುಳ್ಳ ಸಮಗ್ರಾ = ಸ್ಥಾನಾದ್ಯವಯವಗಳಿಂದ ಪೂರ್ಣವಾದ ತಾರುಣ್ಯ ಸ್ವರೂಪವುಳ್ಳ ಸಮಗ್ರೈಃ = ಎಲ್ಲಾ ಬ್ರಹ್ಮಾದಿಭಿಃ = ಬ್ರಹ್ಮನೇ ಮೊದಲಾಗಿ ಉಳ್ಳ ದೇವತೆಗಳಿಂದ ಪೂಜ್ಯಮಾನಾ = ಪೂಜಿಸಿಕೊಳ್ಳಲ್ಪಡ ತಕ್ಕ ಹರಿಪ್ರಿಯಾ = ಪರಮಾತ್ಮನ ಪ್ರೀತಿಪಾತ್ರಳಾದ ಅತ್ಯದ್ಭುತಾಕಾರವತೀ = ಅತ್ಯಂತ ಆಶ್ಚರ್ಯಕರವಾದ ಲೋಕ ವಿಲ

ಕ್ಷಣವಾದ ಆಕಾರವುಳ್ಳ ಸಾದೇವೀ = ಆ ದುರ್ಗಾದೇವಿಯು ತದ್ಧಸ್ತಾತ್ = ಆ ಕಂಸನ ಕೈಯಿಂದ ಕ್ಷಿಪ್ರಂ = ಕೂಡಲೇ ಉತ್ಪತ್ಯ = ಮೇಲಕ್ಕೆ ಹಾರಿ ಖೇವಿವ = ಆಕಾಶದಲ್ಲಿಯೇ ಅದೃಶ್ಯತ = ಭೂಮಿಯಲ್ಲಿರುವವರಿಂದ ಕಾಣಿಸಿಕೊಳ್ಳಲ್ಪಟ್ಟಳು. ॥ ೭೦ ॥

ಉವಾಚಚಾರ್ಯಾತವಮೃತ್ಯುರತ್ರ ಕ್ವಚಿತ್ಪ್ರಜಾತೋ ಹಿ ವೃಥೈವ ಪಾಪ ॥
ಅನಾಗಸೀಂ ಮಾಂ ವಿನಿಹಂತುಮಿಚ್ಛಸ್ಯಶಕ್ಯಕಾರ್ಯೇ ತವಚೋದ್ಯಮೋಯಂ ॥ ೭೧ ॥

ಅರ್ಯಾ=ಉತ್ತಮಳಾದ ದುರ್ಗಾದೇವಿಯು "ಹೇ ಪಾಪ=ಎಲೋ ಪಾಪಿಷ್ಠನಾದ ಕಂಸನೇ ತವ=ನಿನ್ನ ಮೃತ್ಯುಃ=ಮಾರಕನು ಅತ್ರ=ಈ ಭೂಮಿಯಲ್ಲಿ ಕ್ವಚಿತ್=ಯಾವುದೋ ಒಂದು ಸ್ಥಳದಲ್ಲಿ ಪ್ರಜಾತಃ=ಹುಟ್ಟಿದ್ದಾನೆ ಅನಾಗಸೀಂ=ಅಪರಾಧವಿಲ್ಲದ ಮಾಂ=ನನ್ನನ್ನು ವಿನಿಹಂತುಂ=ಕೊಲ್ಲಲು ಇಚ್ಛಸಿ=ಇಚ್ಛಿಸುತ್ತಿ ಅಶಕ್ಯಕಾರ್ಯೇ=ನಿನ್ನಿಂದ ಮಾಡಲಿಕ್ಕೆ ಅಸಾಧ್ಯವಾದ ನನ್ನ ಸಂಹಾರರೂಪಕಾರ್ಯದಲ್ಲಿ ತವ = ನಿನ್ನ ಅಯಂ ಉದ್ಯಮಃ=ಈ ಉದ್ಯೋಗವು ವೃಥೈವ=ವ್ಯರ್ಥವೇ ಅಂದರೆ ಪ್ರಯೋಜನವಿಲ್ಲದ್ದು" ಇತಿ=ಎಂದು ಉವಾಚ ಹೇಳಿದಳು. ॥ ೭೧ ॥

ಉಕ್ತ್ವೇತಿಕಂಸಂ ಪುನರೇವದೇವಕೀತಲ್ಪೇಽಶಯದ್ಬಾಲರೂಪೈವದುರ್ಗಾ ॥
ನಾಜ್ಞಾಸಿಷುಸ್ತಾಮಥ ಕೇಚನಾತ್ರ ಋತೇಹಿ ಮಾತಾ ಪಿತರೌ ಗುಣಾಢ್ಯಾಂ ॥ ೭೨ ॥

ದುರ್ಗಾ=ದುರ್ಗಾದೇವಿಯು ಕಂಸಂ=ಕಂಸನನ್ನು ಇತಿ= ಮೇಲೆ ವಿವರಿಸಿದಂತೆ ಉಕ್ತ್ವಾ=ಹೇಳಿ ಪುನಃ=ಮತ್ತು ಬಾಲರೂಪೈವ=ಶಿಶುವಿನ ರೂಪವುಳ್ಳವಳಾಗಿಯೇ ದೇವಕೀತಲ್ಪೇ=ದೇವಕಿಯ ಹಾಸಿಗೆಯಲ್ಲಿ ಅಶಯತ್=ಮಲಗಿದಳು ಅಥ=ಮಲಗಿದ ನಂತರ ಅತ್ರ=ಈ ಭೂಮಿಯಲ್ಲಿ ಮಾತಾಪಿತರೌ=ತಂದೆ ತಾಯಿಗಳನ್ನು ಋತೇ=ಹೊರತು ಕೇಚನ=ಯಾವ ಪುರುಷರೂ ಕೂಡ ಗುಣಾಢ್ಯಾಂ=ಗುಣಸಂಪನ್ನಳಾದ ತಾಂ = ಆ ದುರ್ಗೆಯನ್ನು ನಾಜ್ಞಾನಿಷುಃ=ತಿಳಿಯಲಿಲ್ಲ. ॥ ೭೨ ॥

ಶ್ರುತ್ವಾತಯೋಕ್ತಂ ತು ತದೈವ ಕಂಸಃಪಶ್ಚಾತ್ತಾಪಾದ್ವಸುದೇವಂ ಸಭಾರ್ಯಾಂ ॥
~~ಪ್ರಸಾದಯಾಮಾಸ ಪುನಃ ಪುನಶ್ಚ ವಿಹಾಯ ಕೋಪಂಚ ತಮೂಚತುಸ್ತೌ~~
ಸುಖಸ್ಯದುಃಖಸ್ಯಚ ರಾಜಸಿಂಹ ನಾನ್ಯಃಕರ್ತಾವಾಸುದೇವಾದಿತಿಸ್ಮ ॥ ೭೩ ॥

ಕಂಸಃ=ಕಂಸನು ತಯಾ = ಆ ದುರ್ಗೆಯಿಂದ ಉಕ್ತಂ=ಹೇಳಲ್ಪಟ್ಟದ್ದನ್ನು ಶ್ರುತ್ವಾ=ಕೇಳಿ ತದೈವ=ಆಗಲೇ ಪಶ್ಚಾತ್ತಾಪಾತ್=ನಾನು ತಂಗಿ, ಭಾವರಿಗೆ ವ್ಯರ್ಥವಾಗಿ ದುಃಖ ಕೊಟ್ಟೆನು ಎಂದು ಸಂತಾಪದಿಂದ ಸಭಾರ್ಯಂ=ಹೆಂಡತಿಯಿಂದ ಕೂಡಿದ ವಸುದೇವಂ=ವಸುದೇವನನ್ನು ಪುನಃ ಪುನಃ=ಮತ್ತು ಮತ್ತೂ ಪ್ರಸಾದಯಾಮಾಸ=ಸಂತೋಷಪಡಿಸಿದನು. ತೌ=ಆ=ಆ ವಸುದೇವ ದೇವಕಿಯರು ಕೋಪಂ=ಕ್ರೋಧವನ್ನು ವಿಹಾಯ=ಬಿಟ್ಟು "ಹೇ ರಾಜಸಿಂಹ=ರಾಜಶ್ರೇಷ್ಠನೇ ಸುಖಸ್ಯ=ಸುಖವನ್ನು ದುಃಖಸ್ಯಚ=ದುಃಖವನ್ನು ಕೂಡ ಕರ್ತಾ=ಕೊಡತಕ್ಕವನು ವಾಸುದೇವಾತ್=ಶ್ರೀ ಹರಿಯು ದೆಸೆಯಿಂದ ಅನ್ಯಃ=ಬೇರೊಬ್ಬನು ನ=ಇಲ್ಲ ಸ್ಮ=ಪ್ರಸಿದ್ಧ" ಇತಿ=ಎಂಬುದಾಗಿ ಊಚತುಃ=ಹೇಳಿದರು ॥ ೭೩ ॥

ಆನೀಯಕಂಸೋಽಥಗೃಹೇ ಸ್ವಮಂತ್ರಿಣಃ ಪ್ರೋವಾಚಕನ್ಯಾವಚನಂಸಮಸ್ತಂ ॥
ಶ್ರುತ್ವಾಚತೇ ಪ್ರೋಚುರತ್ಯಂತ ಪಾಪಾಃ ಕಾರ್ಯಂ ಬಾಲಾನಾಂ ನಿಧನಂ ಸರ್ವಶೋಪಿ ॥ ೭೪ ॥

ಅಥ=ಅನಂತರ ಕಂಸಃ=ಕಂಸನು ಗೃಹೇ=ತನ್ನ ಮನೆಯಲ್ಲಿ ಸ್ವಮಂತ್ರಿಣಃ=ತನ್ನ ಮಂತ್ರಿಗಳನ್ನು ಆನೀಯ=ಕರೆಸಿ ಸಮಸ್ತಂ=ಎಲ್ಲಾ ಕನ್ಯಾವಚನಂ=ದುರ್ಗೆಯು ಮಾತನ್ನು ಪ್ರೋವಾಚ=ಹೇಳಿದನು ಅತ್ಯಂತಪಾಪಃ=ಅತಿ ಪಾಪಿಷ್ಟರಾದ ತೇ=ಆಮಂತ್ರಿಗಳು ಶ್ರುತ್ವಾ=ಆ ಮಾತನ್ನು ಕೇಳಿ ಸರ್ವಶಃ = ಎಲ್ಲಾ ಬಾಲಾನಾಂ=ಮಕ್ಕಳ ನಿಧನಂ=ನಾಶವು ಕಾರ್ಯಂ=ಮಾಡಲ್ಪಡತಕ್ಕದ್ದು ಇತಿ=ಎಂಬುದಾಗಿ ಪ್ರೋಚುಃ = ಹೇಳಿದರು. ॥ ೭೪ ॥

ತಥೇತಿ ತಾಂಸ್ತತ್ರ ನಿಯುಜ್ಯಕಂಸೋ ಗೃಹಂ ಸ್ವಕೀಯಂ ಪ್ರವಿವೇಶ ಪಾಪಃ ॥
ಚೇರುಶ್ಚತೇ ಬಾಲವಧೇ ಸದೋದ್ಯತಾ ಹಿಂಸಾವಿಹಾರಾಃ ಸತತಂ ಸ್ವಭಾವತಃ ॥ ೭೫ ॥

ಪಾಪಃ = ಪಾಪಿಷ್ಠನಾದ ಕಂಸನು ತಥೇತಿ=ಹಾಗೆಯೇ ಆಗಲಿ ಎಂದು ತಾನ್=ಆ ಮಂತ್ರಿಗಳನ್ನು ತತ್ರ=ಆ ಬಾಲ ವಧಕರ್ಮದಲ್ಲಿ ನಿಯುಜ್ಯ=ಆಜ್ಞಾಪಿಸಿ ಸ್ವಕೀಯಂ=ತನ್ನ ಗೃಹಂ=ಮನೆಯನ್ನು ಪ್ರವಿವೇಶ=ಪ್ರವೇಶಿಸಿದನು. ಸತತಂ= ಯಾವಾಗಲೂ ಸ್ವಭಾವತಃ = ಕಾರಣವಿಲ್ಲದೆ ಸ್ವಭಾವದಿಂದಲೇ ಹಿಂಸಾವಿಹಾರಾಃ=ಹಿಂಸೆಯೇ ಕ್ರೀಡೆಯಾಗಿ ಉಳ್ಳ ಬಾಲ ವಧೇ=ಮಕ್ಕಳ ನಾಶದಲ್ಲಿ ಸದಾ=ಯಾವಾಗಲೂ ಉದ್ಯತಾಃ=ಉದ್ಯುಕ್ತರಾದ ತೇ=ಆ ಮಂತ್ರಿಗಳು ಚೇರುಃ=ಅತ್ತಿತ್ತ ಸಂಚರಿಸಿದರು. ॥ ೭೫ ॥

ಅಥ ಪ್ರಭಾತೇ ಶಯನೇ ಶಯಾನಮಪಶ್ಯತಾಮಬ್ಜದಲಾಯತಾಕ್ಷಂ ।
ಕೃಷ್ಣಂ ಯಶೋದಾ ಚ ತಥೈವ ನಂದ ಆನಂದಸಾಂದ್ರಾಕೃತಿಮಪ್ರಮೇಯಂ ॥ ೭೬ ॥

ಅಥ=ಕೃಷ್ಣಾವತಾರಾನಂತರ ಪ್ರಭಾತೇ=ಪ್ರಾತಃ ಕಾಲದಲ್ಲಿ ಶಯನೇ=ಹಾಸಿಗೆಯಲ್ಲಿ ಶಯಾನಂ=ಮಲಗಿರುವ ಅಬ್ಜದಲಾಯತಾಕ್ಷಂ=ಕಮಲದಂತೆ ವಿಶಾಲಗಳಾದ ಕಣ್ಣುಗಳುಳ್ಳ ಆನಂದಸಾಂದ್ರಾಕೃತಿಂ=ಸಂತೋಷದಿಂದ ಪೂರ್ಣವಾದ ಶರೀರವುಳ್ಳ ಅಪ್ರಮೇಯಂ=ತಿಳಿಯಲಶಕ್ಯನಾದ ಕೃಷ್ಣಂ=ಶ್ರೀಕೃಷ್ಣನನ್ನು ನಂದಃ=ನಂದಗೋಪನು ಯಶೋದಾಚ= ಯಶೋದೆಯೂ ಕೂಡ ಅಪಶ್ಯತಾಂ=ನೋಡಿದರು. ॥ ೭೬ ॥

ಮೇನಾತ ಏತೌ ನಿಜಪುತ್ರಮೇನಂ ಸೃಷ್ಟ್ಯೀಶಮಬ್ಜಪ್ರಭವಸ್ಯ ಚೇಶಂ ।
ಮಹೋತ್ಸವಾತ್ಪೂರ್ಣಮನಾಶ್ಚ ನಂದೋ ವಿಪ್ರೇಭ್ಯೋಽದಾಲ್ಲಕ್ಷಮಿತಾಸ್ತದಾಗಾಃ ॥ ೭೭ ॥

ಏತೌ=ಈ ಯಶೋದಾನಂದಗೋಪರು ಅಬ್ಜಪ್ರಭವಸ್ಯ=ಕಮಲದಿಂದ ಉತ್ಪತ್ತಿಯುಳ್ಳ ಬ್ರಹ್ಮನನ್ನು ಸೃಷ್ಟ್ಯೀಶಂ=ಸೃಷ್ಟಿ ಮಾಡತಕ್ಕ ಈಶಂ=ಸ್ವಾಮಿಯಾದ ಏನಂ=ಈ ಕೃಷ್ಣನನ್ನು ನಿಜಪುತ್ರಂ=ತಮ್ಮ ಮಗನನ್ನಾಗಿ ಮೇನಾತೇ= ತಿಳಿದರು. ಮಹೋತ್ಸವಾತ್= ಶ್ರೇಷ್ಠ ಪುತ್ರೋತ್ಸವದಿಂದ ಪೂರ್ಣಮನಾಃ = ಅಭೀಷ್ಟದಿಂದ ಪೂರ್ಣವಾದ ಮನಸ್ಸುಳ್ಳ ನಂದಃ = ನಂದಗೋಪನು ತದಾ = ಆಗ ವಿಪ್ರೇಭ್ಯಃ = ಬ್ರಾಹ್ಮಣರಿಗೋಸ್ಕರ ಲಕ್ಷಮಿತಾಃ = ಲಕ್ಷ ಪರಿಮಿತಗಳಾದ ಗಾಃ = ಗೋವು ಗಳನ್ನು ಅದಾತ್ = ಕೊಟ್ಟನು. ॥ ೭೭ ॥

ಸುವರ್ಣರತ್ನಾಂಬರ ಭೂಷಣಾನಾಂ ಬಹೂನಿಗೋಜೀವಿ ಗಣಾಧಿನಾಥಃ ।
ಪ್ರಾದಾದಥೋಪಾಯನ ಪಾಣಯಸ್ತಂ ಗೋಪಾಯಶೋದಾಂ ಚ ಮುದಾಸ್ತ್ರಿಯೋಽಗಮನ್ ॥೭೮॥

ಗೋಜೀವಿಗಣಾಧಿನಾಥಃ = ಗೋರಸಾದಿಗಳಿಂದ ಜೀವಿಸಿಕೊಂಡಿರುವ ಗೊಲ್ಲರ ಸಮೂಹಕ್ಕೆ ಒಡೆಯನಾದ ನಂದ ಗೋಪನು ಸುವರ್ಣರತ್ನಾಂಬರ ಭೂಷಣಾನಾಂ = ಭಂಗಾರತ್ನ ವಸ್ತ್ರಗಳಿಂದ ಅಲಂಕಾರ ಉಳ್ಳ ಗೋವುಗಳ ಬಹೂನಿ = ಬಹು ಸಮರ್ಪಿದಾಯಂಗಳನ್ನು ಪ್ರಾದಾತ್ = ಕೊಟ್ಟನು. ಅಥ = ಅನಂತರ ಉಪಾಯಂನಪಾಣಯಃ = ಉತ್ಸವ ಕಾಲದಲ್ಲಿ ಕೊಡಲಂ ಯೋಗ್ಯವಾದ ವಸ್ತ್ರಾದಿಗಳು ಕೈಯಲ್ಲಿ ಉಳ್ಳ ಗೋಪಾಃ = ಗೊಲ್ಲರು ತಂ = ಆನಂದ ಗೋಪನನ್ನು ಸ್ತ್ರಿಯಃ = ಗೋಪ ಸ್ತ್ರೀಯರು ಯಶೋದಾಂ ಚ = ಯಶೋದೆಯನ್ನೂ ಕೂಡ ಮುದಾ = ಸಂತೋಷದಿಂದ ಅಗಮನ್ = ಹೊಂದಿದರು. ॥ ೭೮ ॥

ಗತೇಷು ತತ್ರೈವ ದಿನೇಷುಕೇಷುಚಿತ್ ಜಗಾಮ ಕಂಸಸ್ಯ ಗೃಹಂ ಸನಂದಃ ।
ಪೂರ್ವಂ ಹಿ ನಂದಃ ಸ ಕರಂ ಹಿ ದಾತುಂ ಬೃಹದ್ವನಾನ್ನಿಃಸೃತಃ ಪ್ರಾಪಕೃಷ್ಣಂ ॥ ೭೯ ॥

ಸನಂದಃ=ಆನಂದಗೋಪನು ತತ್ರೈವ = ಆ ಯಮುನಾ ತೀರದಲ್ಲಿಯೇ ಕೇಷುಚಿತ್ = ಕೆಲವು ದಿನೇಷು = ದಿನಗಳು ಅಂದರೆ ಮೂವತ್ತು ದಿನಗಳು ಗತೇಷುಸತ್ಸು = ಹೋಗುತ್ತಿರಲು ಕಂಸಸ್ಯ = ಕಂಸನ ಗೃಹಂ = ಮನೆಯನ್ನು ಕುರಿತು ಜಗಾಮ = ಹೋದನು. ಸ ನಂದಃ = ಆನಂದಗೋಪನು ಪೂರ್ವಂ = ಯಶೋದೆಯು ಪ್ರಸವಿಸುವುದಕ್ಕಿಂತ ಮೊದಲು ಕರಂ = ಕಂಸನಿಗೆ ಕಪ್ಪವನ್ನು ದಾತುಂ = ಕೊಡಲು ಬೃಹದ್ವನಾತ್ = ಮಹಾವನದ ದೆಸೆಯಿಂದ ನಿಸೃತಃಸನ್ = ಹೊರಟವನಾಗಿ ಕೃಷ್ಣಂ = ಯಮುನೆಯನ್ನು ಪ್ರಾಪ = ಹೊಂದಿದನು. ॥ ೭೯ ॥

ಸಹಾಗತಾತೇನ ತದಾ ಯಶೋದಾ ಸುಷಾವ ದುರ್ಗಾಮಥ ತತ್ರ ಶೌರಿಃ ।
ನಿಧಾಯ ಕೃಷ್ಣಂ ಪ್ರತಿಗೃಹ್ಯ ಕನ್ಯಕಾಂ ಗೃಹಂಯಯೌ ನಂದ ಉವಾಸ ತತ್ರ ॥ ೮೦ ॥

ತೇನ=ಆನಂದನಿಂದ ಸಹ=ಕೂಡಿಕೊಂಡು ಯಶೋದಾ=ಯಶೋದೆಯು ಆಗತಾ=ಬಂದಳು. ತದಾ=ಆ ದಿನದಲ್ಲಿ ತತ್ರ=ಆ ಯಮುನಾ ತೀರದಲ್ಲಿ ದುರ್ಗಾಂ=ಕನ್ಯೆಯಾದ ದುರ್ಗೆಯನ್ನು ಸುಷಾವ=ಪಡೆದಳು. ಅಥ = ಅನಂತರ ಶೌರಿಃ=ವಸುದೇವನು ತತ್ರ = ಆ ಯಶೋದೆಯ ಹಾಸಿಗೆಯಲ್ಲಿ ಕೃಷ್ಣಂ = ಕೃಷ್ಣನನ್ನು ನಿಧಾಯ=ಇಟ್ಟು ಕನ್ಯಕಾಂ=ದುರ್ಗೆಯನ್ನು ಪ್ರತಿಗೃಹ್ಯ=ಹಿಡಿದುಕೊಂಡು ಗೃಹಂ=ಮಂಥುರೆಯಲ್ಲಿರುವ ತನ್ನ ಮನೆಯನ್ನು ಯಯೌ=ಹೊಂದಿದನು. ನಂದಃ=ನಂದಗೋಪನು ತತ್ರ=ಆ ಯಮುನಾ ತೀರದಲ್ಲಿ ಉವಾಸ=ವಾಸಮಾಡಿದನು. ॥ ೮೦ ॥

ನಿರುಷ್ಯ ತಸ್ಮಿನ್ ಯಮುನಾ ತಟೇಸ ಮಾಸಂ ಯಯೌದ್ರಷ್ಟುಕಾಮೋನರೇಂದ್ರಂ ।
ರಾಜ್ಞೋsಥತಂ ದತ್ತಕರಂ ದದರ್ಶ ಶೂರಾತ್ಮಜೋ ವಾಕ್ಯಮುವಾಚ ಚೈನಂ ॥ ೮೧ ॥

ಸಃ=ಆನಂದನು ತಸ್ಮಿನ್=ಆ ಯಮುನಾತಟೇ=ಯಮುನಾ ತೀರದಲ್ಲಿ (ಪ್ರಸವಸ್ಥಳದಲ್ಲಿ) ಮಾಸಂ=ಒಂದಂ ತಿಂಗಳ ಕಾಲ ನಿರುಷ್ಯ=ವಾಸಮಾಡಿ ನರೇಂದ್ರಂ=ಕಂಸನನ್ನು ದ್ರಷ್ಟುಕಾಮಃಸನ್=ನೋಡಲಂ ಇಚ್ಛಿ ಉಳ್ಳವನಾಗಿ ಯಯೌ =ಹೋದನು ಅಥ =ಮಥುರೆಯನ್ನು ಪ್ರವೇಶಿಸಿದ ನಂತರ ಶೂರಾತ್ಮಜಃ =ವಸುದೇವನು ರಾಜ್ಞೋ =ಕಂಸನಿಗೋಸ್ಕರ ದತ್ತಕರಂ= ಕೊಡಲ್ಪಟ್ಟ ಕಪ್ಪವುಳ್ಳ ತಂ= ಆ ನಂದಗೋಪನನ್ನು ದದರ್ಶ=ನೋಡಿದನು. ಏನಂ=ಈನಂದಗೋಪತನಂ ಕುರಿತು ವಾಕ್ಯಂ= ಮಾತನ್ನು ಉವಾಚ=ಹೇಳಿದನು. ॥ ೮೧ ॥

ಯೂಹ್ಯುತ್ಪಾತಾಃ ಸಂತಿ ತತ್ರೇತ್ಯುದೀರಿತೇ ಜಗಾಮಶೀಘ್ರಂ ಯಮುನಾಂ ಸನಂದಃ ।
ರಾತ್ರಾವೇವಾಗಚ್ಛವೂನೇತುನಂದೇ ಕಂಸಸ್ಯ ಧಾತ್ರೀತುಜಗಾಮ ಗೋಷ್ಠಂ ॥ ೮೨ ॥

ತತ್ರ= ಯಶೋದೆಯ ವಾಸ ಸ್ಥಳದಲ್ಲಿ ಯೂ= ಯಾವ ಕಾರಣದಿಂದ ಉತ್ಪಾತಾಃ= ಅನಿಷ್ಟಗಳು ಸಂತಿ = ಇವೆಯೋ ಅತಃ =ಆದ್ದರಿಂದ ಯೂಹಿ = ಹೋಗು ಇತಿ= ಎಂದು ಉದೀರಿತೇಸತಿ= ವಸುದೇವನಿಂದ ಹೇಳಲ್ಪಡುತ್ತಿರಲು ಸನಂದಃ = ಆನಂದನು ಶೀಘ್ರಂ =ಕೂಡಲೇ ಯಮುನಾಂ= ಯಮುನಾ ನದಿಯನ್ನು ಕುರಿತು ಜಗಾಮ = ಹೋದನು. ನಂದೇ =ನಂದನಂ ರಾತ್ರಾವೇವ= ರಾತ್ರಿಯಲ್ಲಿಯೇ ಆಗಚ್ಛವೂನೇಸತಿ =ಬರುತ್ತಿರಲು ಕಂಸಸ್ಯ =ಕಂಸನ ಧಾತ್ರೀ= ಉಪಮಾತೆಯಾದ ಪೂತನಿಯಃ ಗೋಷ್ಠಂ =ನಂದಗೋಕುಲವನ್ನು ಜಗಾಮ= ನಂದನು ಪ್ರವೇಶಿಸುವ ಮೊದಲೇ ಜಗಾಮ= ಹೋದಳು. ॥ ೮೨ ॥

ಸಾಪೂತನಾ ನಾ ನಾಮ ನಿಜ ಸ್ವರೂಪ ಮೂಚ್ಛಾದ್ಯರಾತ್ರೌಶುಭರೂಪವಚ್ಚ ।
ವಿವೇಶನಂದಸ್ಯ ಗೃಹಂ ಬೃಹದ್ವನ ಪ್ರಾಂತೇಹಿಮಾರ್ಗೇ ರಚಿತಂ ಪ್ರಯಾಣೇ ॥ ೮೩ ॥

ಪೂತನಾ= ಪೂತನಿಯೆಂದು ನಾಮ= ಪ್ರಸಿದ್ಧಳಾದ ಸಾ= ಆ ಕಂಸನ ಧಾತ್ರಿಯು ನಿಜಸ್ವರೂಪಂ= ತನ್ನ ರಾಕ್ಷಸಿಯ ಸ್ವರೂಪವನ್ನು ಆಚ್ಛಾದ್ಯ= ಮಾಯೆಯಿಂದ ಅಡಗಿಸಿ ರಾತ್ರೌ= ರಾತ್ರಿಯಲ್ಲಿ ಶುಭರೂಪವತ್= ಪ್ರಶಸ್ತರೂಪವಿರುವಂತೆ ರೂಪವನ್ನು ಹೊಂದಿ ಬೃಹದ್ವನಪ್ರಾಂತೇ = ಬೃಹದ್ವನದ ಪ್ರದೇಶದಲ್ಲಿ ಪ್ರಯಾಣೇ ಮಾರ್ಗೇ= ಮಾಧುರೆಗೆ ಪ್ರಯಾಣ ಮಾಡುವ ಹಿ = ಪ್ರಸಿದ್ಧವಾದ ರಾಜ ಮಾರ್ಗದಲ್ಲಿ ರಚಿತಂ=ವಸ್ತ್ರದಿಂದ ನಿರ್ಮಿಸಲ್ಪಟ್ಟ ನಂದಸ್ಯ=ನಂದನ ಗೃಹಂ = ಮನೆಯನ್ನು ಕುರಿತು ವಿವೇಶ= ಪ್ರವೇಶಿಸಿದಳು. ॥ ೮೩ ॥

ತೀರೇಭಗಿನ್ಯಾಸ್ತು ಯಮಸ್ಯ ವಸ್ತ್ರೆ ಗೃಹೇ ಶಯಾನಂ ಪುರುಷೋತ್ತಮಂತಂ ।
ಜಗ್ರಾಹ ಮಾತ್ರಾತು ಯಶೋದಯಾ ತಯಾ ನಿದ್ರಾಯುಜಾ ಪ್ರೇಕ್ಷ್ಯಮಾಣಾ ಶುಭೇವ ॥ ೮೪ ॥

ನಿದ್ರಾಯುಜಾ= ನಿದ್ರೆಯಿಂದ ಯುಕ್ತಳಾದ ಮಾತಾ= ತಾಯಿಯಾದ ತಯಾ ಯಶೋದಯಾ= ಆ ಯಶೋದೆಯಿಂದ ಶುಭೇವ= ಒಳ್ಳೆಯಂ ಸ್ತ್ರೀಯಂತೆ ಪ್ರೇಕ್ಷ್ಯಮಾಣಾ=ಕಾಣಿಸಿಕೊಳ್ಳಲ್ಪಡತಕ್ಕ ಪೂತನಿಯಂ ಯಮಸ್ಯ= ಯಮುನ ಭಗಿನ್ಯಾಃ=

ತಂಗಿಯಾದ ಯಮುನೆಯ ತೀರ = ದಡದಲ್ಲಿ ಹಸ್ತಿಗೃಹೇ = ವಸ್ತ್ರ ನಿರ್ಮಿತ ಡೇರೆಯಲ್ಲಿ ಶಯಾನಂ=ಮಲಗಿರುವ ಪುರುಷೋತ್ತಮಂ=ಪುರುಷ ಶ್ರೇಷ್ಠನಾದ ತಂ=ಆ ಕೃಷ್ಣನನ್ನು ಜಗ್ರಾಹ=ಹಿಡಿದಳು. ॥ ೮೪ ॥

ತನ್ಮಾಯಯಾಧರ್ಷಿತಾ ನಿದ್ರಯಾ ಚ ನ್ಯವಾರಯನ್ನೈವ ಹಿ ನಂದಜಾಯಾ ।
ತಯಾ ಪದತ್ತಂ ಸ್ತನ ವಿಶಿತಾಸುಭಿಃ ಪಪೌ ಸಹೈವಾಶು ಜನಾರ್ದನಃ ಪ್ರಭುಃ ॥ ೮೫ ॥

ತನ್ಮಾಯಯಾ=ಪೂತನಿಯ ಮೋಹಕ ಶಕ್ತಿಯಿಂದ ನಿದ್ರಯಾ ಚ=ನಿದ್ರೆಯಿಂದಲೂ ಕೂಡ ಧರ್ಷಿತಾ=ವಶೀಕರಿಸಲ್ಪಟ್ಟ ನಂದಜಾಯಾ=ನಂದನ ಪತ್ನಿಯಾದ ಯಶೋದೆಯು ನೈವನ್ಯವಾರಯತ್=ಮಗುವನ್ನು ಹಿಡಿಯಬೇಡವೆಂದು ತಡೆಯಲೇ ಇಲ್ಲ. ಈಶಿತಾ=ಸರ್ವಸ್ವಾಮಿಯಾದ ಪ್ರಭುಃ=ಸಮರ್ಥನಾದ ಜನಾರ್ದನಃ=ಶ್ರೀಕೃಷ್ಣನು ತಯಾ=ಆ ಪೂತನಿಯಿಂದ ಪ್ರದತ್ತಂ=ಕೊಡಲ್ಪಟ್ಟ ಸ್ತನಂ=ಮೊಲೆ ಹಾಲನ್ನು ಆಸುಭಿಃ=ಪ್ರಾಣಗಳಿಂದ ಸಹೈವ=ಕೂಡಿಕೊಂಡೇ ಪಪೌ=ಕುಡಿದನು. ॥ ೮೫ ॥

ಮೃತಾ ಸ್ವರೂಪೇಣ ಸುಭೀಷಣೇನ ಪಪಾತ ಸಾ ವ್ಯಾಪ್ಯ ವನಂ ಸಮಸ್ತಂ ।
ತದಾಗಮನ್ನಂದಗೋಪೋಪಿ ತತ್ರ ದೃಷ್ಟ್ವಾಪಿ ಸರ್ವೇಪ್ಯಭವನ್ವಿಸ್ಮಿತಾಃ ॥ ೮೬ ॥

ಸಾ=ಆ ಪೂತನಿಯು ಮೃತಾಸತೀ=ಸತ್ತುಬಳಿಕ ಸುಭೀಷಣೇನ=ಅತ್ಯಂತ ಭಯಂಕರವಾದ ಸ್ವರೂಪೇಣ=ರಾಕ್ಷಸೀ ಸ್ವರೂಪದಿಂದ ಸಮಸ್ತಂವನಂ=ಎಲ್ಲಾವನ್ನು ವ್ಯಾಪ್ಯ=ವ್ಯಾಪಿಸಿ ಪಪಾತ=ಬಿದ್ದಳು. ತದಾ=ಆ ಪೂತನಿಯು ಬಿದ್ದಾಗ ನಂದಗೋಪೋಪಿ=ನಂದಗೋಪನೂ ಕೂಡ ತತ್ರ=ಅಲ್ಲಿಗೆ ಆಗಮತ್=ಬಂದನು. ಸರ್ವೇಪಿ=ನಂದಗೋಕುಲದಲ್ಲಿ ವಾಸ ಮಾಡುವ ನಂದಗೋಪಾದಿಗಳೆಲ್ಲರೂ ಕೂಡ ದೃಷ್ಟ್ವಾಪಿ=ವ್ಯಾಪ್ತವಾದ ಶರೀರವನ್ನು ನೋಡಿ ಸುವಿಸ್ಮಿತಾಃ = ಅತ್ಯಾಶ್ಚರ್ಯಯುಕ್ತರು ಅಭವನ್ = ಆದರು. ॥ ೮೬ ॥

ಸಾ ತಾಟಕಾ ಚೋರ್ವಶೀ ಸಂಪ್ರವಿಷ್ಟಾ ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ।

ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ ಪೂತಾ ಸ್ವರ್ಗಂ ಪ್ರಯಯೌ ತತ್ಕ್ಷಣೇನ ॥ ೮೭ ॥

ಉರ್ವಶೀಸಂಪ್ರವಿಷ್ಟಾ=ಉರ್ವಶಿಯಿಂದ ಪ್ರವಿಷ್ಟಳಾದ ಸಾ=ಆ ಪೂತನಿಯು ತಾಟಕಾ = ಹಿಂದೆ ತಾಟಕಿಯೆಂಬ ರಾಕ್ಷಸಿಯು ಸಾ=ಆ ಪೂತನಿಯು ಕೃಷ್ಣಾವಧ್ಯಾನಾತ್=ಕೃಷ್ಣನನ್ನು ಸ್ತನದಲ್ಲಿರುವ ಕಾಲಕೂಟ ವಿಷದಿಂದ ಕೊಲ್ಲುವ ಇಚ್ಛಾ ರೂಪವಾದ ಅಪರಾಧದಿಂದ ನಿರಯಂ=ನಿತ್ಯ ನರಕರೂಪವಾದ ತಮಸ್ಸನ್ನು ಸಂಜಗಾಮ = ಹೊಂದಿದಳು. ಸಾ=ಪೂತನಾ ಶರೀರದಲ್ಲಿರುವ ಉರ್ವಶೀ=ಉರ್ವಶಿಯು ಕೃಷ್ಣಭುಕ್ತಸ್ತನೇನ=ಕೃಷ್ಣನಿಂದ ಪಾನಮಾಡಲ್ಪಟ್ಟ ಸ್ತನಕ್ಷೀರದಿಂದ ಪೂತಾ=ತುಂಬು ರಾರಮಣ ದೋಷದಿಂದ ಪವಿತ್ರಳಾಗಿ ತತ್ಕ್ಷಣೇನ=ಅದೇ ಸಮಯದಲ್ಲಿ ಸ್ವರ್ಗಂ=ಸ್ವರ್ಗವನ್ನು ಯಯೌ=ಹೋದಳು. ॥೮೭॥

ಸಾ ತುಂಬುರೋಃ ಸಂಗತ ಆವಿವೇಶ ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣ ಸ್ಪರ್ಶಾಚ್ಛುದ್ಧಭಾವಾ ಪುನರ್ದಿವಂ ಯಯೌ ತುಷ್ಟೇ ಕಿಮಲಭ್ಯಂ ರಮೇಶೇ ॥ ೮೮ ॥

ಸಾ=ಆ ಉರ್ವಶಿಯು ತುಂಬುರೋಃ=ತುಂಬುರು ಗಂಧರ್ವನ ಸಂಗತಃ=ರಮಣನಿಂದ ವಿತ್ತಪಸ್ಯ=ಕುಬೇರನ ಶಾಪತಃ=ಶಾಪದಿಂದ ರಕ್ಷಸ್ತನುಂ=ರಾಕ್ಷಸಿಯ ಶರೀರವನ್ನು ಆವಿವೇಶ=ಪ್ರವೇಶಿಸಿದಳು. ಕೃಷ್ಣ ಸ್ಪರ್ಶಾತ್=ಕೃಷ್ಣನ ಸ್ಪರ್ಶದಿಂದ ಶುದ್ಧಭಾವಾ=ಪರಿತ್ರ ಸ್ವಭಾವವುಳ್ಳವಳಾಗಿ ಪುನಃ=ಮತ್ತೆ ದಿವಂ=ಸ್ವರ್ಗವನ್ನು ಯಯೌ=ಹೋದಳು. ರಮೇಶೇ=ಲಕ್ಷ್ಮೀಪತಿಯಾದ ಪರಮಾತ್ಮನಂ ತುಷ್ಟೇಸತಿ=ಸಂತುಷ್ಟನಾಗುತ್ತಿರಲು ಅಲಭ್ಯಂ=ಹೊಂದಲಿಕ್ಕೆ ಅಶಕ್ಯವಾದದ್ದು ಕಿಂ=ಯಾವುದಿದೆ. ಯಾವುದೂ ಇಲ್ಲವೆಂದರ್ಥ. ॥ ೮೮ ॥

ಯದಾಪ ದೇವಶ್ಚ ತುರೋಽಥ ಮಾಸಾನ್ ತದೋಪನಿಷ್ಕ್ರಮಣ ಮಸ್ಯ ಚಾಸೀತ್ ।
ಜನ್ಮರ್ಕ್ಷಮಸ್ಮಿನ್ ದಿನಏವಚಾಸೀತ್ ಪ್ರಾತಃ ಕಂಚಿತ್ತ್ರಮಹೋತ್ಸವೋಽಭೂತ್ ॥ ೮೯ ॥

ಅಥ=ಅನಂತರ ದೇವಃ=ಶ್ರೀಕೃಷ್ಣನಂ ಯದಾ=ಯಾವಾಗ ಚತುರಃ=ನಾಲ್ಕು ಮಾಸಾನ್=ತಿಂಗಳುಂಗಳನ್ನು ಆಪ= ಹೊಂದಿದನೋ ತದಾ=ಆ ನಾಲ್ಕನೇ ತಿಂಗಳ (ಮಾರ್ಗಶೀರ್ಷಮಾಸ)ದಲ್ಲಿ ಅಸ್ಯ=ಈ ಕೃಷ್ಣನಿಗೆ ಉಪನಿಷ್ಕ್ರಮಣಂ= ಸ್ವಗೃಹದಿಂದ ಮಾತುಲಾದಿಗೃಹಗಳಿಗೆ ನಯರೂಪವಾದ ಸಂಸ್ಕಾರವು ಅಸೀತ್=ಆಯಿತಂ. ಅಸ್ಮಿನ್ದಿನವಿವ=ಈ ಉಪ ನಿಷ್ಕ್ರಮಣದ ದಿನದಲ್ಲಿಯೇ ಪ್ರಾತಃ=ಬೆಳಿಗ್ಗೆ ಕಿಂಚಿತ್=ಅಲ್ಪಕಾಲದಲ್ಲಿರತಕ್ಕ ಜನ್ಮಕ್ಷಂ=ರೋಹಿಣೀ ನಕ್ಷತ್ರವು ಅಸೀತ್=ಇತ್ತು. ತತ್ರ=ಆ ಉಪನಿಷ್ಕ್ರಮಣಕರ್ಮದಲ್ಲಿ ಮಹೋತ್ಸವಃ=ಶ್ರೇಷ್ಠ ಉತ್ಸವವು ಅಭೂತ್=ಆಯಿತಂ. ॥೮೯॥

ತದಾ ಶಯಾನಃ ಶಕಟಸ್ಯ ಸೋಧಃ ಪದಾಕ್ಷಿಪತ್ತಂ ದಿತಿಜಂ ನಿಹಂತುಂ ।
ಅನಃ ಸಮಾವಿಶ್ಯದಿತೇಃ ಸುತೋಽಸೌ ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ ॥ ೯೦ ॥

ತದಾ=ಆ ದಿನದಲ್ಲಿ ಶಕಟಸ್ಯ=ಬಂಡಿಯ ಅಧಃ=ಕೆಳಗೆ ಶಯಾನಃ=ಮಲಗಿರುವ ಸಃ=ಆ ಕೃಷ್ಣನಂ ದಿತಿಜಂ= ಬಂಡಿಯಲ್ಲಿರುವ ದೈತ್ಯನನ್ನ ನಿಹಂತುಂ=ಕೊಲ್ಲುವುದಕ್ಕೋಸ್ಕರ ಪದಾ=ಪಾದದಿಂದ ಅಕ್ಷಿಪತ್=ಎಸೆದನು. ಸುಪಾಪಃ= ಅತ್ಯಂತ ಪಾಪಿಷ್ಠನಾದ ದಿತೇಃ ಸುತಃ=ದೈತ್ಯನು ಹರೇಃ=ಶ್ರೀ ಕೃಷ್ಣನಿಗೆ ಪ್ರತೀಪಾಯಂ=ಪ್ರತಿಕೂಲವನ್ನು ಮಾಡುವುದಕ್ಕೋಸ್ಕರ ಅನಃ=ಶಕಟವನ್ನು ಸಮಾವಿಶ್ಯ ಆಶ್ರಯಿಸಿ ಸ್ಥಿತಃ=ಇರತಕ್ಕವನು ಅಭೂತ್=ಆದನಂ. ॥ ೯೦ ॥

ಕ್ಷಿಪ್ತೋಽನಸಿಸ್ಥಃಶಕಟಾಕ್ಷನಾಮಾ ಸವಿಷ್ಣುನೇತ್ವಾ ಸಹಿತಃ ಪಪಾತ ।
ಮಮಾರಚಾಶು ಪ್ರತಿಭಗ್ನಗಾತ್ರೋವ್ಯತಸ್ತಚಕ್ರಾಕ್ಷಮಭೂದನಶ್ಚ ॥ ೯೧ ॥

ವಿಷ್ಣುನಾ=ಶ್ರೀ ಕೃಷ್ಣನಿಂದ ಕ್ಷಿಪ್ತಃ=ಎಸೆಯಲ್ಪಟ್ಟ ಇತ್ವಾಸಹಿತಃ=ಬಂಡಿಯಿಂದ ಬೆನ್ನಾಗಿ ಕೂಡಿರುವ ಶಕಟಾಕ್ಷ ನಾಮಾ=ಶಕಟಾಕ್ಷನೆಂದು ಹೆಸರುಳ್ಳ ಸಃ=ಆ ಅಸುರನಂ ಪಪಾತ=ಬಿದ್ದನಂ. ಪ್ರತಿಭಗ್ನಗಾತ್ರಃ=ಭಂಗವನ್ನು ಹೊಂದಿರುವ ಹಸ್ತಾದ್ಯವಯವಗಳುಳ್ಳ ಅಸುರನು ಆಶು=ಕೂಡಲೇ ಮಮಾರ=ಸತ್ತನು. ಅನಶ್ಚ=ಬಂಡಿಯೂ ಕೂಡ ವ್ಯತ್ಯಸ್ತಚಕ್ರಾಕ್ಷಂ= ವ್ಯತ್ಯಾಸವನ್ನು ಹೊಂದಿದ ಚಕ್ರಗಳೂ ಅಚ್ಚು ಮರವುಳ್ಳದ್ದೂ ಅಭೂತ್=ಆಯಿತಂ. ॥ ೯೧ ॥

ಸಾ ಸಂಭ್ರಮಾತ್ತಂ ಪ್ರತಿಗೃಹ್ಯ ಶಂಕಯಾ ಕೃಷ್ಣಂ ಯಶೋದಾದ್ವಿಜವರ್ಯಸೂಕ್ತಿಭಿಃ ।
ಸಂಸ್ನಾಪಯಾಮಾಸ ನದೀತಟಾ ತ್ತದಾ ಸಮಾಗತಾ ನಂದವಚೋಭಿತರ್ಜಿತಾ ॥ ೯೨ ॥

ತದಾ=ಆಗ ನದೀತಟಾತ್=ನದಿಯ ದಡದಿಂದ ಸಮಾಗತಾ=ಬಂದಿರುವ ನಂದವಚೋಭಿತರ್ಜಿತಾ=ನಂದಗೋಪನ "ಮಗುವನ್ನು ಬಿಟ್ಟು ಎಲ್ಲಿ ಹೋಗುವೆ" ಎಂಬ ಮಾತುಗಳಿಂದ ಬೆದರಿಸಲ್ಪಟ್ಟ ಸಾ ಯಶೋದಾ=ಆ ಯಶೋದೆಯು ಸಂಭ್ರ ಮಾತ್=ಭಯದಿಂದ ಕೃಷ್ಣಂ=ಕೃಷ್ಣನನ್ನು ಪ್ರತಿಗೃಹ್ಯ=ಹಿಡಿದುಕೊಂಡು ಶಂಕಯಾ=ಪಿಶಾಚಾದಿಗಳ ಬಾಧ ಶಂಕೆಯಿಂದ ದ್ವಿಜವರ್ಯ ಸೂಕ್ತಿಭಿಃ=ಬ್ರಾಹ್ಮಣ ಶ್ರೇಷ್ಠರ ಶೋಭನಗಳಾದ ಭಯಪರಿಹಾರ ರೂಪ ಮಂತ್ರಗಳಿಂದ ಸಂಸ್ನಾಪಯಾ ಮಾಸ=ಸ್ನಾನ ಮಾಡಿಸಿದಳಂ. ॥ ೯೨ ॥

ಹತ್ವಾತು ತಂ ಕಂಸಭೃತ್ಯಂ ಸ ಕೃಷ್ಣಃ ಶಿಶ್ಯೇಪುನಃ ಶಿಶುವತ್ಸರ್ವಶಾಸ್ತಾ ॥
ಏವಂ ಗೋಪಾನ್ ಪ್ರೀಣಯನ್ ಬಾಲಕೇಲೀ ವಿನೋದತೋನ್ಯವಸತ್ತತ್ರದೇವಃ ॥ ೯೩ ॥

ಸರ್ವಶಾಸ್ತ್ರಾ=ಎಲ್ಲರನ್ನೂ ಶಿಕ್ಷಿಸತಕ್ಕ ಸಕೃಷ್ಣಃ=ಆ ಕೃಷ್ಣನು ಕಂಸಭೃತ್ಯಂ=ಕಂಸನಭೃತ್ಯನಾದ ತಂ= ಶಕಟಾಕ್ಷನನ್ನು ಹತ್ವಾ=ಕೊಂದು ಪುನಃ = ಮತ್ತೆ ಶಿಶುವತ್=ಮಗುವಿನಂತೆ ಶಿಶ್ಯೇ=ಮಲಗಿದನು. ದೇವಃ=ಕ್ರೀಡಾದಿ ಗುಣ ವಿಶಿಷ್ಟನಾದ ಶ್ರೀಕೃಷ್ಣನು ವಿನೋದತಃ = ಬಾಲಕರ ಕ್ರೀಡೆಗಳ ವಿನೋದದಿಂದ ವಿವಂ=ಹಿಂದೆ ಹೇಳಿದ ರೀತಿಯಿಂದ ಗೋಪಾನ್=ಗೋಪಾಲಕರನ್ನು ಪ್ರೀಣಯನ್ ಸನ್=ಸಂತೋಷಪಡಿಸತಕ್ಕವನಾಗಿ ತತ್ರ=ಆ ಗೋಷ್ಠನಲ್ಲಿ ನ್ಯವಸತ್= ವಾಸ ಮಾಡಿದನು. ॥ ೯೩ ॥

ವಿವರ್ಧಮಾನೇ ಲೋಕ ದೃಷ್ಟ್ಯೈವಕೃಷ್ಣೇ ಪಾಂಡುಃ ಪುನಃ ಪ್ರಾಹಪೃಥಾವಿದಂ ವಚಃ ।
ಧರ್ಮಿಷ್ಠೋಽಸೌ ಸೂನುರಗ್ರೇ ಬಭೂವ ಬಲದ್ವಯ ಜ್ಯೇಷ್ಠ ಉತಾಪರಶ್ಚ ॥ ೯೪ ॥

ಕೃಷ್ಣೇ= ಶ್ರೀ ಕೃಷ್ಣನು ಲೋಕದೃಷ್ಟ್ಯೈವ=ಆಜ್ಞಾ ಜನರ ದೃಷ್ಟಿಯನ್ನು ಅಪೇಕ್ಷಿಸಿಯೇ ವಿವರ್ಧಮಾನೇಸತಿ=ಅಭಿವೃದ್ಧಿಯನ್ನು ಹೊಂದುತ್ತಿರಲು ಪಾಂಡುಃ=ಪಾಂಡುರಾಜನು ಪುನಃ ಮತ್ತು ಪೃಥಾಂ=ಕುಂತಿಯನ್ನು ಕುರಿತು ಇದಂ ವಚಃ = ಈ ಮುಂದೆ ಹೇಳುವ ಮಾತನ್ನು ಪ್ರಾಹ=ಹೇಳಿದನು. ನೌ=ನಮ್ಮಿಬ್ಬರಿಗೆ ಅಗ್ರೇ=ಮೊದಲು ಧರ್ಮಿಷ್ಟಃ = ಧರ್ಮಿಷ್ಠನಾದ ಸೂನುಃ=ಮಗನು ಬಭೂವ = ಆದನು. ಉತ = ಅನಂತರ ಅಪರಃ = ಎರಡನೆಯವನು ಬಲದ್ವಯಜ್ಯೇಷ್ಠಃ= ಜ್ಞಾನಬಲ ಬಾಹುಬಲ ಇವುಗಳೆರಡರಿಂದ ಶ್ರೇಷ್ಠನಾದ ಸೂನುಃ= ಮಗನು ಬಭೂವ ಆದನು. ॥ ೯೪ ॥

ಯದೈಕಏವಾತಿಬಲೋಪಪನ್ನೋಭವೇತ್ತದಾ ತೇನ ಪರಾವ ಮರ್ದೇ ।
ಪ್ರವರ್ತಮಾನೇ ಸ್ವಪುರಂ ಹರೇಯುಶ್ಚೌರ್ಯಾತ್ಪರೇ ತದ್ವಯಮತ್ರಯೋಗ್ಯಂ ॥ ೯೫ ॥

ಯದಾ= ಯಾವಾಗ ಅತಿಬಲೋಪಪನ್ನಃ= ಅತ್ಯಂತ ಬಲಾಢ್ಯನಾದ ಏಕ ಏವ= ಒಬ್ಬನೇ ಮಗನು ಭವೇತ್= ಆಗುವನೋ ತದಾ= ಆಗ ತೇನ= ಒಬ್ಬ ಬಲಾಢ್ಯ ಪುತ್ರನಿಂದ ಪರಾವಮರ್ದೇ= ಶತ್ರುವಿನಿಂದ ಯುಂದ್ಧವು ಪ್ರವರ್ತ ಮಾನೇ ಸತಿ= ಉಂಟಾಗುತ್ತಿರಲು ಪರೇ= ಶತ್ರುಗಳು ಚೌರ್ಯಾತ್ =ಕಳ್ಳತನದಿಂದ ಸ್ವಪುರಂ= ತನ್ನ ಪಟ್ಟಣವನ್ನು ಹರೇಯುಃ= ಅಪಹರಿಸಿಯಾರು ತತ್= ಆ ಕಾರಣದಿಂದ ಅತ್ರ= ಶತ್ರುಗಳಿಂದ ಯುದ್ಧರಾಜ್ಯ ಪಾಲನ ವಿಷಯದಲ್ಲಿ ದ್ವಯಂ= ಬಾಹು ಬಲಾಢ್ಯಪುತ್ರದ್ವಯವು ಯೋಗ್ಯಂ= ಯುಕ್ತವು ॥ ೯೫ ॥

ಶಸ್ತ್ರಾಸ್ತ್ರವಿದ್ವೀರ್ಯವಾನ್ನೌ ಸುತೋಽನ್ಯೋಭವೇದ್ದೇವಂ ತಾದೃಶಮಾಹ್ವಯಾತಃ ।
ಶೇಷಸ್ತವಭ್ರಾತೃಸುತೋಭಿಜಾತ ಸ್ತಸ್ಮಾನ್ನಾಸೌ ಸುತದಾನಾಯಯೋಗ್ಯಃ ॥ ೯೬ ॥

ಶಸ್ತ್ರಾಸ್ತ್ರವಿತ್=ಶಸ್ತ್ರವನ್ನೂ, ಅಸ್ತ್ರವನ್ನೂ ತಿಳಿದಿರುವ ವೀರ್ಯವಾನ್ = ಪರಾಕ್ರಮವುಳ್ಳ ಅನ್ಯಃ = ಭೀಮನಿಂದ ಇತರನಾದ ಸುತಃ = ಬಲಾಢ್ಯನಾದ ಪುತ್ರನು ನೌ = ನಾಮ್ಮಿಬ್ಬರಿಗೆ ಭವೇತ್ = ಆಗಬೇಕು. ಅತಃ = ಆದ್ದರಿಂದ ತಾದೃಶಂ= ಬಲಿಷ್ಠ ಪುತ್ರನನ್ನು ಕೊಡಲು ಯೋಗ್ಯನಾದವನನ್ನು ಆಹ್ವಯ = ಕರೆ. (ಅಂತಹನು ಯಾರೆಂದರೆ ಪರಿಶೇಷದಿಂದ ಇಂದ್ರನು ಎಂದು ಹೇಳುತ್ತಾನೆ.) ಶೇಷಃ = ಶೇಷ ದೇವನು ತವ = ನಿನ್ನ ಭ್ರಾತೃಸುತಃ = ಅಣ್ಣನಾದ ವಸುದೇವನ ಬಲ ಭದ್ರನೆಂಬ ಮಗನಾಗಿ ಅಭಿಜಾತಃ = ಹುಟ್ಟಿರುವನು. ತಸ್ಮಾತ್ = ಆದ್ದರಿಂದ ಅಸೌ = ಈ ಶೇಷನು ಸುತದಾನಾಯ= (ನಿನಗೆ) ಮಗನನ್ನು ಕೊಡಲಿಕ್ಕೆ ನಯೋಗ್ಯಃ = ಯೋಗ್ಯನಲ್ಲ. ॥ ೯೬ ॥

ನವೈಸುಪರ್ಣಃ ಸುತದೋನರೇಷು ಪ್ರಜಾಯತೇಚಾಸ್ಯಯತಸ್ತಥಾಜ್ಞಾ ।
ಕೃತಾ ಪುರಾಹರಿಣಾ ಶಂಕರಸ್ತು ಕ್ರೋಧಾತ್ಮಕಃ ಪಾಲನೇ ನೈವಯೋಗ್ಯಃ ॥ ೯೭ ॥

ಪುರಾ = ಮೊದಲು ಹರಿಣಾ = ಪರಮಾತ್ಮನಿಂದ ಅಸ್ಯ = ಈ ಗರುಡನಿಗೆ ತಥಾ = ಮನುಷ್ಯರಲ್ಲಿ ಅವತಾರವನ್ನು ಮಾಡಬೇಡವೆಂದು ಆಜ್ಞಾ = ಅಪ್ಪಣೆಯು ಕೃತಾ = ಮಾಡಲ್ಪಟ್ಟಿತೋ ತತಃ = ಆ ಕಾರಣದಿಂದ ಸುಪರ್ಣಃ = ಗರುಡನು ಸುತದಃ = ಮಗನನ್ನು ಕೊಡತಕ್ಕವನಾಗಿ ನರೇಷು = ಮನುಷ್ಯರಲ್ಲಿ ವೈ = ನಿಶ್ಚಯವಾಗಿಯೂ ನಪ್ರಜಾಯತೇ = ಹುಟ್ಟಿವುದಿಲ್ಲ. ಕ್ರೋಧಾತ್ಮಕಃ = ಕೋಪಕ್ಕೆ ಕಾರಣನಾದ ತಮೋಗುಣಕ್ಕೆ ಅಭಿಮಾನಿಯಾದ ಶಂಕರಸ್ತು = ರುದ್ರನಾದರೂ ಪಾಲನೇ=ರಾಜ್ಯವನ್ನು ಪಾಲಿಸುವುದಲ್ಲಿರ ನೈವಯೋಗ್ಯಃ=ಯೋಗ್ಯನಲ್ಲ. ॥ ೯೭ ॥

ಅತೋಮಹೇಂದ್ರೋಬಲವಾನನಂತರಸ್ತೇಷಾಂ ಸಮಾಹ್ವಾನಮಿಹಾರ್ಹತಿಸ್ವರಾಟ್ ।
ಇತೀರಿತಾಸಾಹ್ವಯದಾಶುವಾಸಂ ತತಃ ಪ್ರಜಜ್ಞೇ ಸ್ವಯಮೇವಶಕ್ರಃ ॥ ೯೮ ॥

ಅತಃ=ಆದ್ದರಿಂದ ತೇಷಾಂ=ಆ ಗರುಡ, ಶೇಷ, ರುದ್ರರ ಅನಂತರಃ=ನಂತರದವನು ಪುರಂದರಃ=ಇಂದ್ರನು ಬಲವಾನ್=ಬಲಿಷ್ಠನು. ಅತಃ=ಆದ್ದರಿಂದ ಸ್ವರಾಟ್=ಇಂದ್ರನು ಸಮಾಹ್ವಾನಂ=ಚೆನ್ನಾಗಿ ಕರೆಯುವಿಕೆಯನ್ನು ಅರ್ಹತಿ= ಹೊಂದಲು ಯೋಗ್ಯನಾಗುತ್ತಾನೆ. ಇತಿ=ಈ ರೀತಿಯಾಗಿ ಈರಿತಾ=ಹೇಳಿಸಿಕೊಳ್ಳಲ್ಪಟ್ಟ ಸಾ=ಆ ಕುಂತಿಯು ವಾಸವಂ=

ಇಂದ್ರನನ್ನು ಅಶು=ಕೂಡಲೇ ಆಹ್ವಯತ್=ಕರೆದಳು. ತತಃ=ಇಂದ್ರನ ಆವಾಹನಾನಂತರ ಶಕ್ರಃ=ಇಂದ್ರನು ಸ್ವಯಮೇವ=ತನ್ನ ದೆಸೆಯಿಂದ ತಾನೇ ಪ್ರಜಜ್ಞೇ=ಹುಟ್ಟಿದನು. ॥ ೯೮ ॥

ಸಚಾರ್ಜುನೋನಾಮ ನರಾಂಶಯುಕ್ತೋ ವಿಷ್ಣ್ವಾವೇಶೀಬಲವಾನಸ್ತ್ರವೇತ್ತಾ ।
ರೂಪ್ಯಸ್ಯೇಸ್ಯಾ ತ್ವೇನುರಿತ್ಯುಚ್ಯಮಾನಾ ಭರ್ತ್ರಾಕುಂತೀನೇತಿತಂ ಪ್ರಾಹಧರ್ಮಾತ್ ॥ ೯೯ ॥

ಸಚ=ಆ ಕುಂತಿಯ ಮಗನು ನರಾಂಶಯುಕ್ತಃ=ಶೇಷನ ಅಂಶದಿಂದ ಕೂಡಿದವನಾಗಿ ವಿಷ್ಣ್ವಾವೇಶೀ=ವಿಷ್ಣುವಿನ ವಿಶೇಷ ಆವೇಶ ಉಳ್ಳವನಾಗಿ ಬಲವಾನ್=ಬಲವುಳ್ಳವನೂ ಅಸ್ತ್ರವೇತ್ತಾ=ಅಸ್ತ್ರಜ್ಞಾನಿಯೂ ಆರ್ಜುನಃ=ಅರ್ಜುನನೆಂದು ನಾಮ=ಪ್ರಸಿದ್ಧನಾದವನು ಅಭೂತ್=ಆದನು. ಭರ್ತ್ರಾ=ಗಂಡನಾದ ಪಾಂಡುವಿನಿಂದ ರೂಪೀ=ಕೋಮಲ ರೂಪವುಳ್ಳ ಅನ್ಯಃ=ವಜ್ರಕಾಯರಾದ ಭೀಮಾರ್ಜುನರಿಂದ ಬೇರೆಯಾದ ಸೂನುಃ=ಮಗನು ಸ್ಯಾತ್=ಆಗಲಿ ಇತಿ=ಎಂಬುದಾಗಿ ಉಚ್ಯಮಾನಾ=ಹೇಳಿಸಿಕೊಳ್ಳಲ್ಪಟ್ಟ ಕುಂತೀ=ಕುಂತಿಯು ಧರ್ಮಾತ್=ಮಹತ್ಕಾರ್ಯವನ್ನು ಪೊರತು ಮಕ್ಕಳಿಗಾಗಿ ಪರ ಪುರುಷ ಸಂಬಂಧವು ಅನರ್ಥಕಾರಿಯು ಎಂಬ ಧರ್ಮ ಶಾಸ್ತ್ರದಿಂದ ತಂ=ಆ ಪಾಂಡುರಾಜನನ್ನು ನೇತಿ=ಆಗುವುದಿಲ್ಲವೆಂದು ಪ್ರಾಹ=ಹೇಳಿದಳು. ॥ ೯೯ ॥

ಬೃಹಸ್ಪತಿಃಪೂರ್ವಮಭೂದ್ಧರೇಃ ಪದಂ ಸಂಸೇವಿತುಂ ಪವನಾವೇಶಯುಕ್ತಃ ।
ಸ ಉದ್ಧವೋ ನಾಮ ಯದು ಪ್ರವೀರಾತ್ ಜಜ್ಞೇತೋ ವಿದ್ವಾನುಪಗವನಾಮಧೇಯಾತ್ ॥ ೧೦೦ ॥

ಬೃಹಸ್ಪತಿಃ=ಬೃಹಸ್ಪತ್ಯಾಚಾರ್ಯರು ಪೂರ್ವಂ=ಯುಧಿಷ್ಠಿರ ಭೀಮಾದಿಗಳಿಗಿಂತ ರಾಮಾಕೃಷ್ಣಾದಿಗಳಿಗಿಂತ ಮೊದಲು ಹರೇಃ=ಪರಮಾತ್ಮನ ಪದಂ=ಪಾದವನ್ನು ಸಂಸೇವಿತುಂ=ಚೆನ್ನಾಗಿ ಸೇವಿಸುವುದಕ್ಕೋಸ್ಕರ ಅಭೂತ್=ದ್ರೋಣ ನಾಮಕರಾಗಿದ್ದರು. ಸಃ=ಆ ಬೃಹಸ್ಪತ್ಯಾಚಾರ್ಯರು ಪವನಾವೇಶಯುಕ್ತಃಸನ್=ವಾಯುದೇವರ ಆವೇಶದಿಂದ ಕೂಡಿದವರಾಗಿ ವಿದ್ವಾನ್=ಜ್ಞಾನಿಗಳಾಗಿ ಉದ್ಧವಃ=ಉದ್ಧವನೆಂದು ನಾಮಃ=ಪ್ರಸಿದ್ಧರಾಗಿ ಯದು-ಪ್ರವೀರಾತ್=ಯದುಗಳಲ್ಲಿ ಶ್ರೇಷ್ಠನಾದ ಉಪಗವನಾಮಧೇಯಾತ್=ಉಪಗವನೆಂದು ಹೆಸರುಳ್ಳವನಿಂದ ಜಾತಃ=ಹುಟ್ಟಿದನು. ॥ ೧೦೦ ॥

ದ್ರೋಣಾತ್ಮಕಂನಾತಿಗರಾಂ ಸ್ವಸೇವಕಂ ಕುರ್ಯಾದ್ಧರಿರ್ಮಾಮಿತಿ ಭೂಯ ಏವ ।
ಸ ಉದ್ಧವಾತ್ಮಾವತತಾರ ಯಾದವೇಷ್ವಸೇವನಾರ್ಥಂ ಪುರುಷೋತ್ತಮಸ್ಯ ॥ ೧೦೧ ॥

ಹರಿಃ=ಶ್ರೀಕೃಷ್ಣನು ದ್ರೋಣಾತ್ಮಕಂ=ದ್ರೋಣ ಸ್ವರೂಪನಾದ ಮಾಂ=ನನ್ನನ್ನು ಅತಿತರಾಂ=ಅತ್ಯಂತವಾಗಿ ಸ್ವಸೇವಕಂ=ತನ್ನ ಸೇವಕನನ್ನಾ ನ ಕುರ್ಯಾತ್=ಮಾಡಲಾರನಂ. ಇತಿ=ಈ ಕಾರಣದಿಂದ ಭೂಯಏವ=ಮತ್ತೂ ಕೂಡ ಸಃ=ಆ ಬೃಹಸ್ಪತ್ಯಾಚಾರ್ಯರು ಪುರುಷೋತ್ತಮಸ್ಯ=ಪುರುಷ ಶ್ರೇಷ್ಠನಾದ ಶ್ರೀಕೃಷ್ಣನ ಆಸೇವನಾರ್ಥಂ=ಚೆನ್ನಾಗಿ ಸೇವೆ ಮಾಡುವುದಕ್ಕೋಸ್ಕರ ಅಂದರೆ ತನ್ನ ಯೋಗ್ಯತಾ ಪೂರ್ತಿರೂಪವಾದ ಸೇವೆಯನ್ನು ಮಾಡುವುದಕ್ಕೋಸ್ಕರ 'ಯಾದವೇಷು=ಯಾದವರಲ್ಲಿ ಉದ್ಧವಾತ್ಮಾ=ಉದ್ಧವ ಸ್ವರೂಪವುಳ್ಳವನಾಗಿ ಅವತತಾರ=ಅವತರಿಸಿದನಂ. ॥ ೧೦೧ ॥

ಬೃಹಸ್ಪತೇ ರೇವ ಸಸರ್ವವಿದ್ಯಾ ಅವಾಪ ಮಂತ್ರೀನಿಪುಣಃ ಸರ್ವವೇತ್ತಾ ।
ವರ್ಷತ್ರಯೇ ತತ್ಪರತಃ ಸ ಸಾತ್ಯ ಕಿರ್ಜಜ್ಞೇದಿನೇ ಚೇಕಿತಾನಶ್ಚ ತಸ್ಮಿನ್ ॥ ೧೦೨ ॥

ಸಃ=ಆ ಉದ್ಧವನಂ ಬೃಹಸ್ಪತೇ ರೇವ=ಬೃಹಸ್ಪತಿಯಿಂದಲೇ ಸರ್ವವಿದ್ಯಾಃ=ಎಲ್ಲಾ ವಿದ್ಯೆಗಳನ್ನು ಅಪಾಪ=ಹೊಂದಿದನು. ಮಂತ್ರೀ=ಸಂಧಿವಿಗ್ರಹಾದಿ ಕರಣಗಳನ್ನು ತಿಳಿದವನೂ ನಿಪುಣಃ=ಚತುರನೂ ಸರ್ವವೇತ್ತಾ=ಸರ್ವಜ್ಞನೂ ಅಭೂತ್=ಆದನಂ. ತತ್ಪರತಃ=ಉದ್ಧವನು ಹುಟ್ಟಿದ ನಂತರ ವರ್ಷತ್ರಯೇ=ಮೂರು ವರ್ಷಗಳ ಕಾಲವು ದಾಟುತ್ತಿರಲು ಸಃ=ಆ ಪೂರ್ವೋಕ್ತನಾದ ಸಾತ್ಯಕಿಃ=ಸಾತ್ಯಕಿಯು ಜಜ್ಞೇ=ಹುಟ್ಟಿದನು. ತಸ್ಮಿನ್=ಆ ದಿನೇ=ದಿನದಲ್ಲಿ ಚೇಕಿತಾನಶ್ಚ=ಚೇಕಿತಾನನೆಂಬ ಯಾದವನೂ ಕೂಡ ಜಜ್ಞೇ=ಹುಟ್ಟಿದನಂ. ॥ ೧೦೨ ॥

ಮರುತ್ಸುನಾಮ ಪ್ರವಹೋ ಯದು ಷ್ವಭೂತ್ಸಚೇಕಿತಾನೋ ಹರಿಸೇವನಾರ್ಥಂ ।
ತದೈವ ಜಾತೋಽಪ್ಯದಿಕಾತ್ಮಜೋಽಪಿ ವರ್ಷತ್ರಯೇ ತತ್ಪರತೋಯುಧಿಷ್ಠಿರಃ ॥ ೧೦೩ ॥

ಮರುತ್ಸು=ಮರುತ್ತುಗಳಲ್ಲಿ ನಾಮ=ಪ್ರಸಿದ್ಧನಾದ ಯಃ=ಯಾವ ಪ್ರವಹಃ=ಪ್ರವಹನೆಂಬೋಸಃ=ಆ ಪ್ರವಹನು ಹರಿಸೇವಾರ್ಥಂ=ಪರಮಾತ್ಮನ ಸೇವೆಗೋಸ್ಕರ ಯದುಷು=ಯಾದವರಲ್ಲಿ ಚೇಕಿತಾನಃ=ಚೇಕಿತಾನ ನಾಮಕನಾಗಿ ಅಭೂತ್=ಹುಟ್ಟಿದನು. ತದೈವ=ಅದೇ ದಿನದಲ್ಲಿಯೇ ಹೃದಿಕಾತ್ಮಜೋಪಿ=ಹೃದಿಕನ ಮಗನಾದ ಕೃತವರ್ಮನೂ ಕೂಡ ಅಭೂತ್=ಹುಟ್ಟಿದನು. ತತ್ಪರತಃ= ಆ ಕೃತವರ್ಮನು ಹುಟ್ಟಿದ ಪಂತರ ವರ್ಷತ್ರಯೇ=ಮೂರು ವರ್ಷಗಳಾಗುತ್ತಿರಲು ಯುಧಿಷ್ಠಿರಃ=ಧರ್ಮರಾಜನು ಅಭೂತ್=ಹುಟ್ಟಿದನು. ॥ ೧೦೩ ॥

ತತೋಽಬ್ದತೋ ಭೂಭರಸಂಹೃತೌ ಹರೇರಂಗತ್ವಮಾಪ್ತುಂಗಿರಿಶೋಽಜನಿಷ್ಟ ।
ಅಶ್ವತ್ಥಾಮಾ ನಾಮತೋಽಶ್ವಧ್ವನಿಂ ಸ ಯಸ್ಮಾಚ್ಚಕ್ರೇ ಜಾಯಮಾನೋಮಹಾತ್ಮಾ ॥ ೧೦೪ ॥

ತತಃ= ಯುಧಿಷ್ಠಿರನು ಹುಟ್ಟಿದ ನಂತರ ಅಬ್ದತಃ = ಒಂದು ವರ್ಷದ ನಂತರ ಭೂಭಾರ ಸಂಹೃತೌ=ಭೂಮಿಗೆ ಭಾರ ಭೂತರಾದ ದೈತ್ಯರ ನಾಶದಲ್ಲಿ ಹರೇಃ=ಶ್ರೀಕೃಷ್ಣನಿಗೆ ಅಂಗತ್ವಂ=ಸಹಾಯತ್ವವನ್ನು ಆಪ್ತುಂ=ಹೊಂದಲು ಗಿರಿಶಃ=ರುದ್ರನು ಅಜನಿಷ್ಟ=ಹುಟ್ಟಿದನು. ಯಸ್ಮಾತ್=ಯಾವ ಕಾರಣದಿಂದ ಜಾಯಮಾನಃ=ಹುಟ್ಟತಕ್ಕ ಮಹಾತ್ಮಾ=ಉತ್ತಮ ಸ್ವರೂಪನಾದ ರುದ್ರನು ಅಶ್ವಧ್ವನಿಂ=ಕುದುರೆಯ ಧ್ವನಿಯಂತೆ ಶಬ್ದವನ್ನು ಚಕ್ರೇ=ಮಾಡಿದನೋ ತಸ್ಮಾತ್=ಆ ಕಾರಣದಿಂದ ನಾಮತಃ= ಹೆಸರಿನಿಂದ ಅಶ್ವತ್ಥಾಮಾ=ಅಶ್ವತ್ಥಾಮನೆಂದು ಪ್ರಸಿದ್ಧನಾದನು. ॥ ೧೦೪ ॥

ಸ ಸರ್ವವಿದ್ಬಲವಾನಸ್ತ್ರವೇತ್ತಾ ಕೃಪಸ್ವಸಾಯಾಂ ದ್ರೋಣವೀರ್ಯೋದ್ಭವೋಽಭೂತ್ ।
ಸುಯೋಧನಸ್ತಚ್ಚತುರ್ಥೇಹ್ನಿ ಜಾತಸ್ತಸ್ಯಾಪರೇದ್ಯುರ್ಭೀಮಸೇನಸ್ಸುಧೀರಃ ॥ ೧೦೫ ॥

ಸಃ=ಆ ಅಶ್ವತ್ಥಾಮನೂ ಸರ್ವವಿತ್=ಸರ್ವಜ್ಞನೂ ಬಲವಾನ್=ಬಲಿಷ್ಠನು ಅಸ್ತ್ರವೇತ್ತಾ=ಅಸ್ತ್ರವನ್ನು ತಿಳಿದವನು ಕೃಪಸ್ವಸಾಯಾಂ = ಕೃಪಾಚಾರ್ಯರ ಸಹೋದರಿಯಲ್ಲಿ ದ್ರೋಣವೀರ್ಯೋದ್ಭವಃ = ದ್ರೋಣಾಚಾರ್ಯರ ವೀರ್ಯದಿಂದ ಉತ್ಪತ್ತಿ ಉಳ್ಳವನು ಅಭೂತ್=ಆದನು. ಸುಯೋಧನಃ=ಸುಯೋಧನು ತಚ್ಚತುರ್ಥೇಹ್ನಿ=ಯುಧಿಷ್ಠಿರನು ಹುಟ್ಟಿದ ನಾಲ್ಕನೇ ದಿನದಲ್ಲಿ ಜಾತಃ=ಹುಟ್ಟಿದನು. ತಸ್ಯ=ಆ ದುರ್ಯೋಧನನ ಅಪರೇದ್ಯುಃ=ಎರಡನೇ ದಿನದಲ್ಲಿ ಸುಧೀರಃ=ಚೆನ್ನಾಗಿ ಧೈರ್ಯವುಳ್ಳ ಭೀಮಃ = ಭೀಮಸೇನನು ಜಾತಃ=ಹುಟ್ಟಿದನು. ॥ ೧೦೫ ॥

ಯದಾ ಸಮಾಸದ್ದ್ವಿತಯೀಬಭೂವ ತದಾರೋಹಿಣ್ಯಾಂ ಬಲದೇವೋಽಭಿಜಾತಃ ।
ಬಲೀಗುಣಾಢ್ಯಃ ಸರ್ವವೇದೀಯ ಏವ ಸೇವಾಖಿನ್ನೋಲಕ್ಷ್ಮಣೋಽಗ್ರೇಹರೇರ್ಭೂತ್ ॥ ೧೦೬ ॥

ಸಃ=ಆ ಭೀಮನು ಯದಾ=ಯಾವಾಗ ಮಾಸ ದ್ವಿತೀಯೇ=ಎರಡು ತಿಂಗಳುಗಳುಳ್ಳವನು. ಬಭೂವ = ಆದನೋ ತದಾ=ಆಗ ಅಗ್ರೇ=ತ್ರೇತಾ ಯುಗದಲ್ಲಿ ರಾಮಾವತಾರದಲ್ಲಿ ಸೇವಾಖಿನ್ನಃ=ಮಾಡಿದ ಬಹುಸೇವೆಯಿಂದ ಬಳಲಿದ ನಾನು ಇನ್ನು ಮುಂದೆಯೂ ಹಾಗೆಯೇ ಮಾಡಲು ಶಕ್ತನಾಗುವುದಿಲ್ಲವೆಂದು ಮನಃ ಖೇದವುಳ್ಳ ಯಃ = ಯಾವ ಲಕ್ಷ್ಮಣಃ=ಲಕ್ಷ್ಮಣನು ಇದ್ದನೋ ಸಏವ=ಅವನೇ ಬಲೀ=ಬಲಿಷ್ಠನು ಗುಣಾಢ್ಯಃ=ಗುಣ ಸಂಪನ್ನನು ಸರ್ವವೇದೀ ಸರ್ವಜ್ಞನು ಬಲದೇವಃ = ಬಲದೇವನಾಮಕನಾಗಿ ರೋಹಿಣ್ಯಾಂ=ರೋಹಿಣಿಯಲ್ಲಿ ಹರೇಃ=ಶ್ರೀ ಕೃಷ್ಣನ ದೆಸೆಯಿಂದ ಅಗ್ರೇ=ಮೊದಲು ಅಭೂತ್=ಹುಟ್ಟಿದನು. ॥ ೧೦೬ ॥

ಯದಾ ಹಿ ಪುತ್ರಾನ್ ವಿನಿಹಂತುಮೇತೌ ಸಹೈವ ಬದ್ಧೌ ಗತಿಶೃಂಖಲಾಯಾಂ ।
ಕಂಸೇನಾಪಾಪೌ ದೇವಕೀಶೂರಪುತ್ರೌ ವಿಯೋಜಿತಾಃ ಶೌರಿರ್ಭಾರ್ಯಾಃಪರಾಶ್ಚ ॥ ೧೦೭ ॥

ಯದಾ=ಯಾವಾಗ ಕಂಸೇನ=ಕಂಸನಿಂದ ಪುತ್ರಾನ್=ದೇವಕಿಯ ಮಕ್ಕಳನ್ನು ವಿನಿಹಂತಂ=ಕೊಲ್ಲುವದಕ್ಕಾಗಿ ಅಪಾಪೌ=ರಾಜದ್ರೋಹಾದಿ ಪಾಪವಿಲ್ಲದ ಏತೌ=ಈದಾವ ದೇವಕೀ ಶೂರಪೃತ್ರೌ=ದೇವಕೀ ವಸುದೇವರು ಸಹೈವ= ಒಟ್ಟಿಗೆ ಗತಿಶೃಂಖಿಲಾಯಾರ = ಗಮನಾನುಕೂಲವಾದ ನಡೆ ಸಂಕೋಲೆಯಲ್ಲಿ ಬದ್ಧೌ = ಕಟ್ಟಲ್ಪಟ್ಟರೋ ತದಾ = ಆಗ ಪರಾಃ = ದೇವಕಿಯಿಂದ ಇತರರಾದ ಶೌರಿಭಾರ್ಯಃ = ರೋಹಿಣಿ ಮೊದಲಾದ ವಸುದೇವನ ಹೆಂಡಂದಿರು ವಿಯೋಜಿತಾಃ = ಸ್ಥಾನಾಂತರದಲ್ಲಿ ಇರಿಸಲ್ಪಟ್ಟರು. ॥ ೧೦೭ ॥

ವಿನಿಶ್ಚಯಾರ್ಥಂ ದೇವಕೀ ಗರ್ಭಜಾನಾಮನ್ಯಾಭಾರ್ಯಾ ಧೃತಗರ್ಭಾಃ ಸಕಂಸಃ ।
ಸ್ಥಾನಾಂತರೇ ಪ್ರಸವೋಯಾವದಾಸಾಂ ಸಂಸ್ಥಾಪಯಾಮಾಸ ಸುಪಾಪ ಬುದ್ಧಿಃ ॥ ೧೦೮ ॥

ಸುಪಾಪಬುದ್ಧಿಃ=ಅತ್ಯಂತ ಪಾಪಿಷ್ಠವಾದ ಬುದ್ಧಿ ಉಳ್ಳ ಸಕಂಸಃ=ಆ ಕಂಸನು ದೇವಕೀಗರ್ಭಜಾನಾಂ=ದೇವಕೀ ದೇವಿಯ ಗರ್ಭದಿಂದ ಹುಟ್ಟಿದ ಮಕ್ಕಳ ವಿನಿಶ್ಚಯಾರ್ಥಂ=ವಿಶೇಷ ನಿಶ್ಚಯಕ್ಕಾಗಿ ಧೃತಗರ್ಭಾಃ=ವಸುದೇವನಿಂದ ಧರಿಸಲ್ಪಟ್ಟ ಗರ್ಭವುಳ್ಳ ಅನ್ಯಾಃ = ದೇವಕಿಯಿಂದ ಇತರರಾದ ಭಾರ್ಯಾಃ = ರೋಹಿಣಿ ಮೊದಲಾದ ಹೆಂಡಂದಿರನ್ನು ಆಸಾಂ = ಈ ವಸುದೇವನ ಹೆಂಡಂದಿರಿಗೆ ಯಾವತ್=ಎಷ್ಟು ಸಮಯದ ವರೆಗೆ ಪ್ರಸವಃ=ಹೆರಿಗೆಯಾಗುವುದೋ ತಾವತ್=ಅಷ್ಟು ಸಮಯದ ತನಕ ಸ್ಥಾನಾಂತರೇ=ಬೇರೆ ಪ್ರದೇಶದಲ್ಲಿ ಸ್ಥಾಪಯಾಮಾಸ=ಇರಿಸಿದನು. ॥ ೧೦೮ ॥

ಹೇತೋರೇತಸ್ಮಾದ್ರೋಹಿಣೀ ನಂದಗೇಹೇ ಪ್ರಸೂತ್ಯರ್ಥಂ ಸ್ಥಾಪಿತಾ ತೇನ ದೇವೀ ।
ಲೇಭೇ ಪುತ್ರಂ ಗೋಕುಲೇ ಪೂರ್ಣಚಂದ್ರಕಾಂತಾನನಂ ಬಲಭದ್ರಂ ಸುಶುಭ್ರಂ ॥ ೧೦೯ ॥

ಏತಸ್ಮಾತ್ ಹೇತೋಃ = ಈ ಕಾರಣದಿಂದ ತೇನ=ಆ ಕಂಸನಿಂದ ನಂದಗೇಹೇ=ನಂದಗೋಪನ ಮನೆಯಲ್ಲಿ ಪ್ರಸೂತ್ಯರ್ಥಂ=ಹಡೆಯುವುದಕ್ಕಾಗಿ ಸ್ಥಾಪಿತಾ=ಇರಿಸಲ್ಪಟ್ಟ ರೋಹಿಣೀದೇವಿ=ರೋಹಿಣೀ ದೇವಿಯು ಪೂರ್ಣಚಂದ್ರಕಾಂತಾನನಂ=ಷೋಡಶಕಲಾಪೂರ್ಣನಾದ ಚಂದ್ರನಂತೆ ಮನೋಹರವಾದ ಮುಖವುಳ್ಳ ಸುಶುಭ್ರಂ=ಶುಕ್ಲವರ್ಣನಾದ ಬಲಭದ್ರಂ=ಬಲಭದ್ರನೆಂಬ ಸುತಂ=ಮಗನನ್ನು ಲೇಭೇ=ಪಡೆದಳು. ॥ ೧೦೯ ॥

ಯದಾ ತ್ರಿಮಾಸಃ ಸ ಬಭೂವ ದೇವಸ್ತದಾವಿರಾಸೀತ್ ಪುರುಷೋತ್ತಮೋಽಜಃ ।
ತೌ ಕೃಷ್ಣಶೇಷಾವಾಪ್ತುಕಾಮೌ ಸುತೌ ಹಿ ತಪಶ್ಚಕ್ರಾತೇ ದೇವಕೀ ಶೂರಪುತ್ರೌ ॥ ೧೧೦ ॥

ಯದಾ=ಯಾವಾಗ ಸ ದೇವಃ=ಆ ಬಲರಾಮನು ತ್ರಿಮಾಸಃ=ಮೂರು ತಿಂಗಳ ವಯಸ್ಸುಳ್ಳವನು ಬಭೂವ=ಆದನೋ ತದಾ=ಆವಾಗ ಅಜಃ=ಉತ್ಪತ್ತಿ ಇಲ್ಲದ ಪುರುಷೋತ್ತಮಃ=ಪುರುಷೋತ್ತಮಃ=ಪುರುಷ ಶ್ರೇಷ್ಠನಾದ ಶ್ರೀಕೃಷ್ಣನು ಆವಿರಾಸೀತ್=ಆವಿರ್ಭವಿಸಿದನು. ದೇವಕೀ ಶೂರಪುತ್ರೌ=ದೇವಕೀ ವಸುದೇವರು ತೌ = ಆದಾವ ಕೃಷ್ಣಶೇಷರನ್ನು ಸುತೌ = ಮಕ್ಕಳನ್ನಾಗಿ ಆಪ್ತುಕಾಮೌ = ಹೊಂದಲಿಕ್ಕೆ ಇಚ್ಛೆ ಉಳ್ಳವರಾಗಿ ತಪಃ = ತಪಸ್ಸನ್ನು ಚಕ್ರಾತೇ = ಮಾಡಿದರು. ॥ ೧೧೦ ॥

ವಿಷ್ಣ್ವಾವೇಶೀ ಬಲವಾನ್ಯೋ ಗುಣಾಧಿಕಃ ಸಮೇಸುತಃ ಸ್ಯಾದಿತಿ ರೋಹಿಣೀ ಚ ।
ತೇಪೇತಪೋಽತೋ ಹರಿಶುಕ್ಲಕೇಶಯುತಃ ಶೇಷೋ ದೇವಕೀರೋಹಿಣೀಜಃ ॥ ೧೧೧ ॥

ರೋಹಿಣೀ = ರೋಹಿಣಿಯು ಯಃ = ಯಾವನು ವಿಷ್ಣ್ವಾವೇಶೀ = ವಿಷ್ಣುವಿನ ಆವೇಶ ಉಳ್ಳ ಬಲವಾನ್ = ಬಲಿಷ್ಠನಾದ ಗುಣಾಧಿಕಃ = ಜ್ಞಾನಾದಿ ಗುಣಗಳಿಂದ ಉತ್ತಮನೋ ಸ = ಆವನು ಮೇ = ನನಗೆ ಸುತಃ = ಮಗನು ಸ್ಯಾತ್ = ಆಗಲಿ ಇತಿ = ಎಂದು ತಪಃ = ತಪಸ್ಸನ್ನು ತೇಪೇ = ಮಾಡಿದಳು. ಅತಃ = ಆ ಕಾರಣದಿಂದ ಶೇಷಃ= ಶೇಷನು ಹರಿಶುಕ್ಲ ಕೇಶಯುತಃ ಸನ್ = ಶ್ರೀ ಹರಿಯು ಶುಕ್ಲಕೇಶದಿಂದ ಕೂಡಿದವನಾಗಿ ದೇವಕೀರೋಹಿಣೀಜಃ = ದೇವಕೀರೋಹಿಣಿಯರಿಂದ ಹುಟ್ಟಿದನು. ॥ ೧೧೧ ॥

ಅವರ್ಧತಾಸೌ ಹರಿಶುಕ್ಲಕೇಶ ಸಮಾವೇಶೀ ಗೋಕುಲೇ ರೌಹಿಣೇಯಃ ।
ಕೃಷ್ಣೋಪಿ ಲೀಲಾ ಲಲಿತಾಃ ಪ್ರದರ್ಶಯನ್ ಬಲದ್ವಿತೀಯೋ ರಮಯಾಮಾಸ ಗೋಷ್ಠಂ ॥ ೧೧೨ ॥

ಹರಿಶುಕ್ಲಕೇಶ ಸಮಾವೇಶೀ = ಶ್ರೀಹರಿಯ ಶುಕ್ಲಕೇಶದ ಸಮಾಚೀನವಾದ ಆವೇಶವುಳ್ಳ ಅಸೌರೌಹಿಣೇಯಃ = ಈ ರೋಹಿಣೀ ಪುತ್ರನಾದ ಬಲರಾಮನು ಗೋಕುಲೇ = ನಂದಗೋಕುಲದಲ್ಲಿ ಅವರ್ಧತ = ಬೆಳೆದನು. ಬಲದ್ವಿತೀಯಃ = ಬಲರಾಮನಿಂದ ಸಹಿತನಾದ ಕೃಷ್ಣೋಪಿ = ಕೃಷ್ಣನೂ ಕೂಡ ಲಲಿತಾಃ = ಮನೋಹರಗಳಾದ ಲೀಲಾಃ = ಕ್ರೀಡೆಗಳನ್ನು ಪ್ರದರ್ಶಯನ್ ಸನ್ = ತೋರಿಸತ್ಕವನಾಗಿ ಗೋಷ್ಠಂ = ಗೋಕುಲದಲ್ಲಿರುವ ಜನರನ್ನು ರಮಯಾಮಾಸ=ಸಂತೋಷ ಪಡಿಸಿದನು. ॥ ೧೧೨ ॥

ಸ ಪ್ರಾಕೃತಂ ಶಿಶುಮಾತ್ಮಾನಮುಚ್ಚೈರ್ವಿಜಾನಂತ್ಯಾ ಮಾತುರಾದರ್ಶನಾಯ ।
ವಿಜೃಂಭಮಾಣೋಽಖಿಲಮಾತ್ಮಸಂಸ್ಥಂ ಪ್ರದರ್ಶಯಾಮಾಸ ಕದಾಚಿದೀಶಃ ॥ ೧೧೩ ॥

ಈಶಃ = ಸ್ವಾಮಿಯಾದ ಸಃ = ಆ ಶ್ರೀಕೃಷ್ಣನು ಆತ್ಮಾನಂ = ತನ್ನನ್ನು ಪ್ರಾಕೃತಂಶಿಶುಂ = ಪ್ರಕೃತಿ ಸಂಬಂಧ ಉಳ್ಳ ಲೌಕಿಕ ಮಗುವನ್ನಾಗಿ ವಿಜಾನಂತ್ಯಾಃ = ತಿಳಿದಿರುವ ಮಾತುಃ = ತಾಯಿಯಾದ ಯಶೋದೆಗೆ ಆದರ್ಶನಾಯಂ = ಆಪ್ರಾಕೃತತತ್ವವನ್ನು ತೋರಿಸುವುದಕ್ಕಾಗಿ ವಿಜೃಂಭಮಾಣಃಸನ್ = ಆಕಳಿಸತಕ್ಕವನಾಗಿ ಆತ್ಮಸಂಸ್ಥಂ = ತನ್ನಲ್ಲಿರತಕ್ಕ ಅಖಿಲಂ = ಸ್ಥಾವರ ಜಂಗಮಾತ್ಮಕ ಜಗತ್ತನ್ನು ಕದಾಚಿತ್ = ಒಮ್ಮೆ ಪ್ರದರ್ಶಯಾಮಾಸ = ತೋರಿಸಿದನು. ॥ ೧೧೩ ॥

ಸಾಂಡಂ ಮಹಾಭೂತ ಮನೋಭಿಮಾನ ಮಹತ್ಪ್ರಕೃತ್ಯಾವೃತಮಬ್ಜಜಾದಿಭಿಃ ।
ಸುರೈಃ ಶಿವೇತೈರ್ನರದೈತ್ಯ ಸಂಘೈರ್ಯುತಂ ದದರ್ಶಾಸ್ಯ ತನೌ ಯಶೋದಾ ॥ ೧೧೪ ॥

ಸಾ ಯಶೋದಾ = ಆ ಯಶೋದೆಯು ಅಸ್ಯ = ಶ್ರೀಕೃಷ್ಣನ ತನೌ = ಶರೀರದ ಮುಖದೊಳಗೆ ಮಹಾಭೂತ ಮನೋಭಿಮಾನ ಮಹತ್ಪ್ರಕೃತ್ಯಾವೃತಂ = ಪಂಚಮಹಾಭೂತಗಳು ಪಂಚಗಂಧಾದಿ ತನ್ಮಾತ್ರೆಗಳು ದಶೇಂದ್ರಿಯಗಳು ಮನಸ್ತತ್ವವು ಬುದ್ಧಿತತ್ವವು ಅಹಂಕಾರ ತತ್ವವು ಮಹತ್ತತ್ವವು ಹೀಗೆ ಇಪ್ಪತ್ತನಾಲ್ಕು ತತ್ವಗಳು ಅವ್ಯಕ್ತಾಖ್ಯ ಪ್ರಕೃತಿ ತತ್ವವೂ ಇವುಗಳಿಂದ ಯಥಾಯೋಗ್ಯವಾಗಿ ಉತ್ತರೋತ್ತರಾಧಿಕ್ಯದಿಂದ ಆವರಿಸಲ್ಪಟ್ಟ ಶಿವೇತೈಃ = ರುದ್ರನಿಂದ ಕೂಡಿದ ಅಬ್ಜಜಾದಿಭಿಃ = ಬ್ರಹ್ಮನೇ ಮೊದಲಾಗಿ ಉಳ್ಳ ಸುರೈಃ = ದೇವತೆಗಳಿಂದ ನರದೈತ್ಯ ಸಂಘೈಃ = ಮನುಷ್ಯರೂ ದೈತ್ಯರೂ ಇವರ ಸಮುದಾಯಗಳಿಂದ ಯುತಂ = ಕೂಡಿದ ಅಂಡಂ = ಬ್ರಹ್ಮಾಂಡವನ್ನು ದದರ್ಶ = ನೋಡಿದಳು. ॥ ೧೧೪ ॥

ನ್ಯಮೀಲಯಚ್ಚಾಕ್ಷಿಣೇಭೀತಭೀತಾ ಜುಗೂಹಚಾತ್ಮಾನಮಥೋ ರಮೇಶಃ ।
ವಪುಃ ಸ್ವಕೀಯಂ ಸುಖಚಿತ್ಸ್ವರೂಪಂ ಪೂರ್ಣಂಸತ್ಸ್ವಜ್ಞಾಪಯಂಸ್ತದ್ವ್ಯದರ್ಶಯತ್ ॥ ೧೧೫ ॥

ಭೀತಭೀತಾ = ಅತ್ಯಂತ ಭಯಗ್ರಸ್ತಳಾದ ಯಶೋದೆಯು ಅಕ್ಷಿಣೀ = ಕಣ್ಣುಗಳನ್ನು ನ್ಯಮೀಲಯತ್ = ಮುಚ್ಚಿಕೊಂಡಳು. ಅಥೋ = ಅನಂತರ ರಮೇಶಃ = ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಆತ್ಮಾನಂ = ತನ್ನ ವ್ಯಾಪ್ತರೂಪವನ್ನು ಜುಗೂಹ = ಮರೆ ಮಾಚಿದನು. ಹಾಗಾದರೆ ಆಲೌಕಿಕ ಸ್ವರೂಪವನ್ನು ಯಾಕೆ ತೋರಿಸಿದನು ಎಂದರೆ—ಸ್ವಕೀಯಂ = ತನ್ನದಾದ ವಪುಃ = ಶರೀರವು ಸುಖಚಿತ್ಸ್ವರೂಪಂ = ಆನಂದ ಜ್ಞಾನಾತ್ಮಕವಾದದ್ದು ಪೂರ್ಣಂ = ಪೂರ್ಣವಾದದ್ದು ಎಂದು ಸತ್ಸ್ವ = ಸಜ್ಜನರಲ್ಲಿ ಜ್ಞಾಪಯನ್ಸನ್ = ತಿಳಿಸತಕ್ಕವನಾಗಿ ತತ್ = ಆವ್ಯಾಪ್ತವಾದ ಸ್ವರೂಪವನ್ನು ಅದರ್ಶಯತ್ = ತೋರಿಸಿದನು. ॥ ೧೧೫ ॥

ಕದಾಚಿತ್ತಂ ಲಾಲಯಂತೀಯಶೋದಾ ವೋಢುಂ ನಾಶಕ್ನೋದ್ಭೂರಿಭಾರಾಧಿಕಾರ್ತಾ ।
ನಿಧಾಯತಂ ಭೂವಿತಲೇ ಸ್ವಕರ್ಮಯದಾಚಕ್ರೇದೈತ್ಯ ಆಗಾತ್ಸ್ಫೋರಃ ॥ ೧೧೬ ॥

ಕದಾಚಿತ್=ಒಮ್ಮೆ ಯಶೋದಾ=ಯಶೋದೆಯಂ ತಂ=ಆ ಕೃಷ್ಣನನ್ನು ಲಾಲಯಂತೀಸತೀ=ಮುದ್ದಾಡಿಸುವವಳಾಗಿ ಭೂರಿಭಾರಾಧಿಕಾರ್ತಾಸತೀ=ಅತಿ ಭಾರದಿಂದ ಅತ್ಯಂತ ಪೀಡಿಸಲ್ಪಟ್ಟವಳಾಗಿ ವೋಢುಂ=ಎತ್ತಲು ನಾಶಕ್ನೋತ್=ಸಮರ್ಥಳಾಗಲಿಲ್ಲ. (ಯಂಶೋದೆಯಃ) ತಂ=ಆ ಕೃಷ್ಣನನ್ನು ಭೂಮಿತಲೇ=ಭೂತಲದಲ್ಲಿ ನಿಧಾಯ=ಇಟ್ಟು ಯದಾ=ಯಾವಾಗ ಸ್ವಕರ್ಮ=ತನಗೆ ವಿಹಿತವಾದ ಗೃಹಕೃತ್ಯವನ್ನು ಚಕ್ರೇ=ಮಾಡಿದಳೋ ತದಾ=ಆಗಸುಘೋರಃ=ಅತ್ಯಂತ ಕ್ರೂರನಾದ ದೈತ್ಯಃ=ದೈತ್ಯನು ಆಗಾತ್ = ಬಂದನು. ॥ ೧೧೬ ॥

ತೃಣಾವರ್ತೋ ನಾಮತಃಕಂಸಭೃತ್ಯಃ ಸೃಷ್ಟ್ವಾತ್ಯುಗ್ರಂ ಚಕ್ರವಾತಂ ಶಿಶುಂತಂ ।
ಆದಾಯಾಗಾದಂತರಿಕ್ಷಂ ಸ ತೇನ ಶಸ್ತಃ ಕಂಠಗ್ರಾಹ ಸಂರುದ್ಧವಾಯುಃ ॥ ೧೧೭ ॥

ನಾಮತಃ = ಹೆಸರಿನಿಂದ ತೃಣಾವರ್ತಃ=ತೃಣಾವರ್ತನೆಂಬ ಕಂಸಭೃತ್ಯಃ=ಕಂಸನ ಭೃತ್ಯನು ಅತ್ಯುಗ್ರಂ=ಅತಿಕ್ರೂರವಾದ ಚಕ್ರವಾತಂ=ಸುಳಿಗಾಳಿಯನ್ನು ಸೃಷ್ಟ್ವಾ=ಮಾಡಿ ತಂ ಶಿಶುಂ=ಆ ಕೃಷ್ಣನನ್ನು ಆದಾಯ=ಹಿಡಿದುಕೊಂಡು ಅಂತರಿಕ್ಷಂ = ಅಂತರಿಕ್ಷವನ್ನು ಕುರಿತು ಅಗಾತ್=ಹೋದನು. ತೇನ = ಆ ಕೃಷ್ಣನಿಂದ ಕಂಠಗ್ರಾಹಸಂರುದ್ಧವಾಯುಃ=ಕುತ್ತಿಗೆಯಲ್ಲಿ ಬಾಹುಗಳ ಗ್ರಹಣದಿಂದ ತಡೆಯಲ್ಪಟ್ಟ ಶ್ವಾಸವಾಯುವುಳ್ಳ ಸಃ=ಆ ತೃಣಾವರ್ತನು ಶಸ್ತಃ = ಸತ್ತನು. ॥ ೧೧೭ ॥

ಪಪಾತ ಕೃಷ್ಣೇನ ಹತಃಶಿಲಾತಲೇ ತೃಣಾವರ್ತಪರ್ವತೋದಗ್ರದೇಹಃ ।
ಸುವಿಸ್ಮಯಂ ಚಾಪುರಘೋಜನಾಸ್ತೇ ತೃಣಾವರ್ತಂ ವೀಕ್ಷ್ಯಸಂಚೂರ್ಣಿತಾಂಗಂ ॥ ೧೧೮ ॥

ಪರ್ವತೋದಗ್ರದೇಹಃ=ಪರ್ವತದಂತೆ ಅತಿ ದೀರ್ಘವಾದ ಶರೀರವುಳ್ಳ ತೃಣಾವರ್ತ = ತೃಣಾವರ್ತನು ಕೃಷ್ಣೇನ= ಶ್ರೀಕೃಷ್ಣನಿಂದ ಹತಃಸನ್=ಕೊಲ್ಲಲ್ಪಟ್ಟವನಾಗಿ ಶಿಲಾತಲೇ=ಬಂಡೆಯಲ್ಲಿ ಪಪಾತ=ಬಿದ್ದನು ಅಥೋ=ಅನಂತರ ತೇಜನಾಃ= ಆ ಬೃಹದ್ವನದಲ್ಲಿರುವ ಜನರು ಸಂಚೂರ್ಣಿತಾಂಗಂ=ಪುಡಿ ಮಾಡಲ್ಪಟ್ಟ ಅವಯವವುಳ್ಳ ತೃಣಾವರ್ತನನ್ನು ವೀಕ್ಷ್ಯ=ನೋಡಿ ಸುವಿಸ್ಮಯಂ=ಅತ್ಯಂತ ಆಶ್ಚರ್ಯವನ್ನು ಆಪುಃ=ಹೊಂದಿದರು. ॥ ೧೧೮ ॥

ಅಕ್ರುಧ್ಯತಾಂ ಕೇಶವೋನುಗ್ರಹಾಯ ಶುಭಂ ಸ್ವಯೋಗ್ಯಾದಧಿಕಂ ನಿಹಂತುಂ ।
ಸಕ್ರುಧ್ಯತಾಂ ನವನೀತಾದಿ ಮುಷ್ಣಂ ಶ್ಚಚಾರ ದೇವೋ ನಿಜಸತ್ಸುಖಾಂಬುಧಿಃ ॥ ೧೧೯ ॥

ನಿಜಸತ್ಸುಖಾಂಬುಧಿಃ=ಸ್ವರೂಪಭೂತವಾದ ನಿರ್ದುಷ್ಟವಾದ ಆನಂದದಿಂದ ಸಮುದ್ರದಂತಿರುವ ದೇವಃ=ಕ್ರೀಡಾದಿ ಗುಣ ವಿಶಿಷ್ಟನಾದ ಸಃಕೇಶವಃ=ಆ ಕೃಷ್ಣನು ಅಕ್ರುಧ್ಯತಾಂ=ಕೋಪವನ್ನು ಮಾಡದಿರುವವರಿಗೆ ಅನುಗ್ರಹಾಯ=ಸ್ವಯೋಗ್ಯ ಪುಣ್ಯವನ್ನು ಕೊಡುವುದಕ್ಕೋಸ್ಕರ ಸಂಕ್ರುಧ್ಯತಾಂ=ಕೋಪಿಸುವವರಿಗೆ ಸ್ವಯೋಗ್ಯಾತ್=ಸ್ವರೂಪ ಯೋಗ್ಯತೆಯಿಂದ ಅಧಿಕಂ=ಹೆಚ್ಚಾದ ಶುಭಂ=ಪುಣ್ಯವನ್ನು ನಿಹಂತುಂ=ನಾಶ ಮಾಡ ವುದಕ್ಕಾಗಿಯೇ ನವನೀತಾದಿ=ಬೆಣ್ಣೆಯೇ ಮೊದಲಾದ ಕ್ಷೀರ ದಧ್ಯಾದಿಗಳನ್ನು ಮುಷ್ಣನ್ ಸನ್=ಕದಿಯುವವನಾಗಿ ಚಚಾರ=ಸಂಚರಿಸಿದನು. ॥ ೧೧೯ ॥

ಯಸ್ಮಿನ್ನಬ್ದೇ ಭಾದ್ರಪದೇ ಸಮಾಸೇ ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ ।
ಉದ್ಯೈತತ್ತಃ ಫಾಲ್ಗುನೇ ಫಲ್ಗುನೋಽಭೂತ್ ಗತೇತತೋ ಮಾದ್ರವತೀ ಬಭಾಷೇ ॥ ೧೨೦ ॥

ಯಸ್ಮಿನ್ನಬ್ದೇ=ಯಾವ ಸಂತ್ಸರದಲ್ಲಿ ಭಾದ್ರಪದೇ ಮಾಸೇ=ಭಾದ್ರಪದ ಮಾಸದಲ್ಲಿ ಗುರುರವ್ಯೋಃ=ಬೃಹಸ್ಪತಿ ಮತ್ತು ಸೂರ್ಯ ಇವರಿಬ್ಬರು ಸಿಂಹಸ್ಥಯೋಃಸತೋಃ=ಸಿಂಹರಾಶಿಯಲ್ಲಿರುತ್ತಿರಲು ಸ ಪರೇಶಃ=ಬ್ರಹ್ಮಾದಿಗಳಿಗೆ ಸ್ವಾಮಿಯಾದ ಆ ಶ್ರೀಕೃಷ್ಣನು ಉದ್ಯೈತ್=ಅವತರಿಸಿದನೋ ತತಃ=ಆ ಭಾದ್ರಪದ ಮಾಸಾನಂತರ ಫಾಲ್ಗುನೇ=ಆರನೇ ಫಾಲ್ಗುನ ಮಾಸದಲ್ಲಿ ಫಲ್ಗುನಃ=ಅರ್ಜುನನು ಅಭೂತ್=ಹುಟ್ಟಿದನು. ತತಃ=ಅನಂತರ ಗತೇಸತಿ=ಸಂವತ್ಸರವು ಹೋಗುತ್ತಿರಲು ಅಂದರೆ ಚೈತ್ರಮಾಸದಲ್ಲಿ ಮಾದ್ರವತೀ = ಮಾದ್ರವತಿಯು ಬಭಾಷೇ = ಪಾಂಡುರಾಜನನ್ನು ಕುರಿತು ಹೇಳಿದಳು. ॥ ೧೨೦ ॥

ಜಾತಾಃ ಸುತಾಸ್ತೇಪ್ರವರಾಃ ಪೃಥಾಯಾ ಮೇಕಾನಪತ್ಯಾಹಮತಃ ಪ್ರಸಾದಾತ್ ।
ತವೈವ ಭೂಯಾಸಮಹಂ ಸುತೇತಾ ವಿಧತ್ಸ್ವ ಕುಂತೀಂ ಮಮ ಮಂತ್ರದಾತ್ರೀಂ ॥ ೧೨೧ ॥

ತೇ=ನಿನಗೆ ಪೃಥಾಯಾಂ=ಕುಂತಿಯಲ್ಲಿ ಪ್ರವರಾಃ=ಶ್ರೇಷ್ಠರಾದ ಸುತಾಃ=ಮಕ್ಕಳು ಜಾತಾಃ=ಹುಟ್ಟಿರುವರು. ಆದ್ದರಿಂದ ನೀವು ಮಕ್ಕಳುಳ್ಳವರು. ಅಹಮೇಕಾ=ನಾನೊಬ್ಬಳು ಅನಪತ್ಯಾ=ಮಕ್ಕಳಿಲ್ಲದವಳು. ಅತಃ=ಆದ್ದರಿಂದ ತವ=ನಿನ್ನ ಪ್ರಸಾದಾದೇವ=ಅನುಗ್ರಹದಿಂದಲೇ ಅಹಂ=ನಾನು ಸುತೇತಾ=ಮಕ್ಕಳಿಂದ ಕೂಡಿದವಳು ಭೂಯಾಸಂ=ಆಗುವೆನು. ಕುಂತೀಂ=ಕುಂತಿಯನ್ನು ಮಮ=ನನಗೆ ಮಂತ್ರದಾತ್ರೀಂ=ಮಂತ್ರೋಪದೇಶ ಕೊಡತಕ್ಕವಳನ್ನಾಗಿ ವಿಧತ್ಸ್ವ=ಮಾಡು. ॥ ೧೨೧ ॥

ಇತೀರಿತಃ ಪ್ರಾಹ ಪೃಥಾಂಸ ಮಾದ್ರ್ಯೈ ದಿಶಸ್ವಮಂತ್ರಂ ಸುತದಂ ವರಿಷ್ಠಂ ।
ಇತ್ಯೂಚಿವಾಂ ಸಂಪತಿಮಾಹಯಾದವೀ ದದ್ಯಾಂತ್ವದರ್ಥೇತು ಸಕೃತ್ಫಲಾಯ ॥ ೧೨೨ ॥

ಇತಿ=ಈ ರೀತಿಯಾಗಿ ಈರಿತಃ=ಮಾದ್ರಿಯಿಂದ ಹೇಳಿಸಿಕೊಳ್ಳಟ್ಟ ಸಃ=ಆ ಪಾಂಡುರಾಜನು ಪೃಥಾಂ=ಕುಂತಿಯನ್ನು ಕುರಿತು ಮಾದ್ರ್ಯೈ=ಮಾದ್ರಿಗೋಸ್ಕರ ಸುತದಂ=ಮಗನನ್ನು ಕೊಡತಕ್ಕ ವರಿಷ್ಠಂ=ಶ್ರೇಷ್ಠವಾದ ಮಂತ್ರಂ=ಮಂತ್ರವನ್ನು ದಿಶಸ್ವ=ಉಪದೇಶ ಕೊಡು ಎಂದು ಪ್ರಾಹ=ಹೇಳಿದನು. ಇತಿ=ಈ ರೀತಿಯಾಗಿ. ಊಚಿವಾಂಸಂ = ಹೇಳತಕ್ಕ ಪತಿಂ = ಗಂಡನನ್ನು ಕುರಿತು, ಯಾದವೀ = ಕುಂತಿಯು ತ್ವದರ್ಥೇ=ನಿನ್ನ ಉಪಕಾರಕ್ಕಾಗಿ ಸಕೃತ್ಫಲಾಯ=ಒಮ್ಮೆಯೇ ಫಲ ಸಿಗುವುದಕ್ಕಾಗಿ ಮಂತ್ರವನ್ನು ದದ್ಯಾಂ=ಉಪದೇಶ ಕೊಡುವೆನು ಇತಿ=ಎಂದು ಆಹ=ಹೇಳಿದಳು. ॥ ೧೨೨ ॥

ಉವಾಚ ಮಾದ್ರ್ಯೈಸುತದಂ ಮನುಂಚ ಪುನಃಫಲಂತೇ ನಭವಿಷ್ಯತೀತಿ ।
ಮಂತ್ರಂ ಸಮಾದಾಯ ಚ ಮದ್ರಪುತ್ರೀ ವ್ಯಚಿಂತಯತ್ ಸ್ಯಾಂನು ಕಥಂ ದ್ವಿಪುತ್ರೀ ॥ ೧೨೩ ॥

(ಯಾದವೀ=ಕುಂತಿಯು) ಮಾದ್ರ್ಯೈ = ಮಾದ್ರಿಗೋಸ್ಕರ ಸುತಂ=ಮಗನನ್ನು ಕೊಡತಕ್ಕ ಮನುಂ = ಮಂತ್ರವನ್ನು ಉವಾಚ=ಹೇಳಿದಳು. (ನೀನು ಒಂದು ಮಗನನ್ನು ಪಡೆದ ಮೇಲೆ) ಪುನಃ=ಮತ್ತೊಮ್ಮೆ ತೇ = ನಿನಗೆ ಫಲಂ=ಆ ಮಂತ್ರದಿಂದ ಪುತ್ರ ಪ್ರಾಪ್ತಿರೂಪವಾದ ಫಲವು ನಭವಿಷ್ಯತಿ=ಆಗುವುದಿಲ್ಲ. ಇತಿ ಚ=ಎಂಬುದಾಗಿಯೂ ಉವಾಚ=ಹೇಳಿದಳು. ಮದ್ರ ಪುತ್ರೀ=ಮದ್ರರಾಜನ ಮಗಳಾದ ಮಾದ್ರಿಯು ಮಂತ್ರಂ=ಮಂತ್ರವನ್ನು ಸಮಾದಾಯ=ಪಡೆದು ದ್ವಿಪುತ್ರೀ=ಎರಡು ಮಕ್ಕಳುಳ್ಳವಳು ಕಥಂ=ಯಾವ ಉಪಾಯದಿಂದ ಅಹಂ=ನಾನು ಸ್ಯಾಂ = ಆಗುವೆನು. ಇತಿ ಈ ರೀತಿಯಾಗಿ ವ್ಯಚಿಂತಯತ್ = ಆಲೋಚಿಸಿದಳು. ॥ ೧೨೩ ॥

ಸದಾವಿಯೋಗೌ ದಿವಿಜೇಷುದಸ್ರೌ ನ ಚೈತಯೋರ್ನಾಮ ಭೇದಃ ಕ್ವಚಿದ್ಧಿ ।
ಏಕಾಭಾರ್ಯಾ ಸ್ಯೈತಯೋರಪ್ಯುಷಾಹಿ ತದಾऽಯಾತಃ ಸಕೃದಾವರ್ತನಾದ್ದ್ವೌ ॥ ೧೨೪ ॥

ದಿವಿಜೇಷು=ದೇವತೆಗಳಲ್ಲಿ ಸದಾ=ಯಾವಾಗಲೂ ದಸ್ರೌ=ಅಶ್ವಿನೀ ದೇವತೆಗಳು ಅವಿಯೋಗೌ=ವಿಯೋಗವಿಲ್ಲದವರು, ಒಟ್ಟಿಗೇ ಇರತಕ್ಕವರು। ಏತಯೋಃ=ಈ ಅಶ್ವಿನೀ ದೇವತೆಗಳಿಗೆ ಕ್ವಚಿತ್=ಎಲ್ಲಿಯೂ ಕೂಡ ನಾಮಭೇದಃ=ನಾಮ ಭೇದವು ನಹಿ=ಇಲ್ಲವಷ್ಟೆ. (ಅಂದರೆ ಇಬ್ಬರಿಗೂ ಒಂದೇ ನಾಮವು) ಏತಯೋಃ=ಈ ಅಶ್ವಿನಿ ದೇವತೆಗಳಿಗೆ ಸಾ=ಆ ಸಕಾರಾಂತ ಶಬ್ದವಾಚ್ಯಳಾಗಿ ಪ್ರಸಿದ್ಧಳಾದ ಉಷಾ = ಉಷಾ ಎಂದು ನಾಮವುಳ್ಳ ಭಾರ್ಯಾ=ಪತಿಯು ಏಕೈವ = ಒಬ್ಬಳೇ ತತ್ = ಆ ಕಾರಣದಿಂದ ದ್ವೌ = ಇಬ್ಬರೂ ಅಶ್ವಿನೀ ದೇವತೆಗಳು ಸಕೃತ್ = ಒಂದಾವರ್ತಿ ಆವರ್ತನಾತ್=ಮಂತ್ರಾವೃತ್ತಿಯಿಂದ ಆಯಾತಃ = ಬರುವರು. ॥ ೧೨೪ ॥

ಇತೀಕ್ಷಂತ್ಯಾಕಾರಿತಾವಶ್ವಿನೌ ತೌ ಶೀಘ್ರಂಪ್ರಾಪ್ತೌ ಪುತ್ರಕೌ ತತ್ಪ್ರಸೂತೌ ।
ತಾವೇವ ದೇವೌ ನಕುಲಃ ಪೂರ್ವಜಾತಃ ಸಹದೇವೋऽಭೂತ್ಪಶ್ಚಿಮಸ್ತೌ ಯಮೌ ಹಿ ।

ಇತಿ=ಈ ರೀತಿಯಾಗಿ ಈಕ್ಷಂತ್ಯಾ=ವಿಚಾರ ಮಾಡತಕ್ಕ ಮಾದ್ರಿಯಿಂದ ಆಕಾರಿತೌ=ಕರೆಯಲ್ಪಟ್ಟ ತೌಅಶ್ವಿನೌ=

ಆ ಅಶ್ವಿನೀ ದೇವತೆಗಳು ಶೀಘ್ರಂ=ಕೂಡಲೇ ಪ್ರಾಪ್ತೌ=ಬಂದರು. ತಾವೇವದೇವೌ=ಯಾರು ಬಂದಿರುವರೋ ಆ ಅಶ್ವಿನೀ ದೇವತೆಗಳೇ ಪುತ್ರಕೌಸಂತೌ=ಮಕ್ಕಳಾಗಿ ತತ್ಪ್ರಸೂತೌ=ಆ ಮಾದ್ರವತಿಯಲ್ಲಿ ಹುಟ್ಟಿದರು. ಅವರ ಮಧ್ಯದಲ್ಲಿ ನಕುಲಃ=ನಕುಲನು ಪೂರ್ವಜಾತಃ=ಮೊದಲು ಹುಟ್ಟಿದವನು. ಪಶ್ಚಿಮಃ=ಕೊನೆಗೆ ಹುಟ್ಟಿದವನು ಸಹದೇವಃ=ಸಹದೇವ ನಾಮಕನು ಅಭೂತ್=ಆದನು. ತೌ=ಆ ನಕುಲ ಸಹದೇವರು ಯಮೌ=ಯಮಳರು. ಒಂದೇ ಗರ್ಭದಲ್ಲಿ ಏಕಕಾಲದಲ್ಲಿ ಹುಟ್ಟಿದವರು. ॥ ೧೨೫ ॥

ಪುನರ್ಮನೋಃ ಫಲವತ್ಪಾಯ ಮಾದ್ರೀ ಸಂಪ್ರಾರ್ಥಯಾಮಾಸಪತಿಂ ತದುಕ್ತಾ ।
ಪೃಥಾsವಾದೀತ್ಕುಟಿಲೈಷಾ ಮದಾಜ್ಞಾಮೃತೇ ದೇವಾವಾಹ್ವಯಾ ಮಾಸ ದಸ್ರೌ ॥ ೧೨೬ ॥

ಮಾದ್ರೀ=ಮಾದ್ರಿಯು ಪುನಃ=ಮತ್ತೊಮ್ಮೆ ಫಲವತ್ಪಾಯ=ಪುತ್ರರೂಪ ಫಲಪ್ರಾಪ್ತಿಗೋಸ್ಕರ ಪತಿಂ=ಗಂಡನಾದ ಪಾಂಡುರಾಜನನ್ನು ಸಂಪ್ರಾರ್ಥಯಾಮಾಸ=ಪ್ರಾರ್ಥಿಸಿದಳು. ತದುಕ್ತಾ=ಆ ಪಾಂಡುವಿನಿಂದ ಹೇಳಿಸಿಕೊಳ್ಳಲ್ಪಟ್ಟ ಕುಂತೀ = ಕುಂತಿಯು ಅವಾದೀತ್=ಹೇಳಿದಳು. ಕುಟಿಲಾ=ಕಪಟ ಉಳ್ಳ ಏಷಾ=ಈ ಮಾದ್ರಿಯು ಮದಾಜ್ಞಾಂ=ನನ್ನ ಅಪ್ಪಣೆಯನ್ನು ಋತೇ=ಹೊರತು ದಸ್ರೌದೇವೌ=ಅಶ್ವಿನೀ ದೇವತೆಗಳಿಬ್ಬರನ್ನು ಆಹ್ವಯಾಮಾಸ=ಕರೆದಳು. ॥ ೧೨೬ ॥

ಅತೋ ವಿರೋಧಂ ಚ ಮದಾತ್ಮಜಾನಾಂ ಕುರ್ಯಾದೇಷೇತ್ಯೇವ ಭೀತಾಂ ನ ಮಾಂ ತ್ವಂ ।
ನಿಯೋಕ್ತುಮರ್ಹಃ ಪುನರೇವ ರಾಜನ್ ಇತೀರಿತೋsಸೌ ವಿರರಾಮ ಕ್ಷಿತೀಶಃ ॥ ೧೨೭ ॥

ಅತಃ=ಆದ್ದರಿಂದ ಏಷ=ಈ ಮಾದ್ರಿಯು ಮದಾತ್ಮಜಾನಾಂ=ನನ್ನ ಮಕ್ಕಳಿಗೆ ವಿರೋಧಂ=ವಿರೋಧವನ್ನು ಕುರ್ಯಾದೇವ=ಮಾಡುವಳೇ ಇತಿ=ಈ ಕಾರಣದಿಂದ ಭೀತಾಂ=ಹೆದರಿದ ಮಾಂ=ನನ್ನನ್ನು ಹೇರಾಜನ್ = ಏಲೋ ರಾಜನೇ ತ್ವಂ = ನೀನು ಪುನಃ = ಮತ್ತೊಮ್ಮೆ ಮಂತ್ರವು ಫಲಿಸುವುದಕ್ಕಾಗಿ ನಿಯೋಕ್ತುಂ = ಆಜ್ಞಾಪಿಸಲು ನಾರ್ಹಃ = ಯೋಗ್ಯನಾಗುವುದಿಲ್ಲ. ಇತಿ = ಈ ರೀತಿಯಾಗಿ ಈರಿತಃ = ಹೇಳಿಸಿಕೊಳ್ಳಲ್ಪಟ್ಟ ಕ್ಷಿತೀಶಃ ಅಸೌ = ಈ ರಾಜನಾದ ಪಾಂಡುವು ವಿರರಾಮ =ಸುಮ್ಮನಾದನು. ॥ ೧೨೭ ॥

ವಿಶೇಷನಾಮ್ನೈವ ಸಮಾಹುತಾಃ ಸುರಾದದ್ಯುಃಸುತಾನಿತ್ಯವಿಶೇಷಿತಂ ತಯೋಃ ।
ವಿಶೇಷ ನಾಮಾಪಿ ಸಮಾಹ್ವಯತ್ತೌ ಮಂತ್ರಾವೃತ್ತಿರ್ನಾಮಭೇದೇsಸ್ಯ ಚೋಕ್ತಾ ॥ ೧೨೮ ॥

ಹೇದೇವ ಬಾ ಎಂದು ಸಾಮಾನ್ಯವಾದ ಪೆಸರಿನಿಂದ ದೇವತೆಗಳನ್ನು ಕರೆದರೆ ಯಾರನ್ನಾ ಕರದದ್ದು ಎಂಬ ಶಂಕೆಯಿಂದ ದೇವತೆಗಳು ಬರುವುದೇ ಇಲ್ಲ. ಆದ್ದರಿಂದ ವಿಶೇಷನಾಮ್ನೈವ = ಇಂದ್ರ, ವಾಯು ಯಮಾದಿ ಅಸಾಧಾರಣ ನಾಮದಿಂದ ಸಮಾಹುತಾ ಏವ ಸುರಾಃ = ಕರೆಯಲ್ಪಟ್ಟ ದೇವತೆಗಳೇ ಸುತಾನ್ = ಮಕ್ಕಳನ್ನು ದದ್ಯುಃ = ಕೊಡುವರು. ಇತಿ = ಈ ಕಾರಣದಿಂದ ಯಯೋಃ = ಯಾವ ಅಶ್ವಿನೀ ದೇವತೆಗಳ ವಿಶೇಷನಾಮಾಪಿ = ಇಂದ್ರಾದಿ ಶಬ್ದಗಳಿಂದ ಅಸಾಧಾರಣವಾದ ದ್ದು. ಇನ್ನೊಬ್ಬರಲ್ಲಿ ಇಲ್ಲವ ಇಬ್ಬರಲ್ಲಿ ಸಾಧಾರಣವಾದ ನಾಮವನ್ನು ಬಿಟ್ಟು ಇಂದ್ರ ಚಂದ್ರಾದಿಗಳಲ್ಲಿರುವಂತೆ ಒಬ್ಬೊಬ್ಬರಿಗೇನೇ ಪ್ರತ್ಯೇಕವಾಗಿ ಅಸಾಧಾರಣವಾದ ನಾಮವು ಇಲ್ಲ. ಅತಃ = ಆದ್ದರಿಂದ ತೌ = ಆ ಅಶ್ವಿನೀ ದೇವತೆಗಳನ್ನು ಸಮಾಹ್ವಯತ್ = ಕರೆದಳು. ಅಸ್ಮ = ಕರೆಯುತಕ್ಕ ದೇವ ಸಮೂಹಕ್ಕೆ ನಾಮಭೇದೇ ಸತ್ಯೇವ = ಇಂದ್ರ ಚಂದ್ರಾದಿಗಳಂತೆ ನಾವ್ಯ ಭೇದವಿದ್ದರೇನೇ ಮಂತ್ರಾವೃತ್ತಿಃ = ಮಂತ್ರಕ್ಕೆ ಪುರರಾಚ್ಚಾರಣೆಯು ಉಕ್ತಾ = ಹೇಳಲ್ಪಟ್ಟಿದೆ. ॥ ೧೨೮ ॥

ಯುಧಿಷ್ಠಿರಾದ್ಯೇಷು ಚತುರ್ಷ್ವಾಯುಃ ಸಮಾವಿಷ್ಟಃ ಫಲ್ಗುನೇsತೋ ವಿಶೇಷಾತ್ ।
ಯುಧಿಷ್ಠಿರೇ ಸೌಮ್ಯರೂಪೇಣ ವಿಷ್ಟೋ ವೀರೇಣರೂಪೇಣ ಧನಂಜಯೇsಸೌ ॥ ೧೨೯ ॥

ವಾಯುಃ = ವಾಯುದೇವರು ಯುಧಿಷ್ಠಿರಾದ್ಯೇಷು = ಭೀಮಸೇನನನ್ನು ಬಿಟ್ಟು ಯುಧಿಷ್ಠಿರನೇ ಮೊದಲಾಗಿ ಉಳ್ಳ ಚತುರ್ಷು = ನಾಲ್ವರಲ್ಲಿ ಸಮಾವಿಷ್ಟಃ = ಪ್ರವಿಷ್ಟರಾದರು. ಅತಃ= ಯುಧಿಷ್ಠಿರ, ನಕುಲ, ಸಹದೇವರ ದೆಸೆಯಿಂದ ಫಲ್ಗುನೇ = ಅರ್ಜುನನಲ್ಲಿ ವಿಶೇಷಾತ್= ವಿಶೇಷಾವೇಶದಿಂದ ವಿಷ್ಟಃ= ಪ್ರವಿಷ್ಟರಾದರು. (ಯಾರಲ್ಲಿ ಯಾವ ರೂಪದಿಂದ

ವಾಯುದೇವರು ಪ್ರವೇಶಿಸಿದರೆಂಬುದನ್ನು ಹೇಳಂತಾರೆ.ಆಸೌ = ಈ ವಾಯೊಂದೇವರು ಸೌಮ್ಯರೂಪೇಣ= ಶಾಂತ ರೂಪದಿಂದ ಯುಧಿಷ್ಠಿರೇ = ಧರ್ಮರಾಜನಲ್ಲಿ ವಿಷ್ಟಃ = ಪ್ರವೇಶಿಸಿದರು. ಧನಂಜಯೇ = ಅರ್ಜುನನಲ್ಲಿ ವೀರೇಣರೂಪೇಣ = ಪರಾಕ್ರಮ ರೂಪದಿಂದ ವಿಷ್ಟಃ = ಪ್ರವೇಶಿಸಿದರು. ॥ ೨೯ ॥

ಶೃಂಗಾರರೂಪಂ ಕೇವಲಂ ದರ್ಶಯಾನೋ ವಿವೇಶವಾಯುರ್ಯಮಜೌ ಪ್ರಧಾನಃ ।
ಶೃಂಗಾರಕೈವಲ್ಯಮಭೀಪ್ಸಮಾನಃ ಪಾಂಡುರ್ಹಿಪುತ್ರಂ ಚಕಮೇ ಚತುರ್ಥಂ ॥ ೧೨೯ ॥

ಪ್ರಧಾನಃ ವಾಯುಃ = ಶ್ರೀ ಮುಖ್ಯಪ್ರಾಣ ದೇವರು ಕೇವಲಂ ಶೃಂಗಾರರೂಪಂ = ಅತ್ಯಂತ ಸುಂದರವಾದ ರೂಪವನ್ನು ದರ್ಶಯಾನಃಸನ್ = ತೋರಿಸತಕ್ಕವರಾಗಿ ಯಮಜೌ = ನಕುಲ ಸಹದೇವರನ್ನು ವಿವೇಶ = ಪ್ರವೇಶಿಸಿದರು. ಪಾಂಡುಃ = ಪಾಂಡುರಾಜನು ಶೃಂಗಾರೈಕೈವಲ್ಯಂ = ಕೇವಲ ಶೃಂಗಾರ ರೂಪವನ್ನು ಅಭೀಪ್ಸಮಾನಸ್ಸನ್ = ಇಚ್ಛಿಸುವವನಾಗಿ ಚತುರ್ಥಂ = ನಾಲ್ಕನೇ ಮಗನನ್ನು ಚಕಮೇ = ಇಚ್ಛಿಸಿದನು. ॥ ೧೩೦ ॥

ಶೃಂಗಾರ ರೂಪೋ ನಕುಲೇ ವಿಶೇಷಾತ್ ಸುನೀತಿರೂಪಃ ಸಹದೇವಂ ವಿವೇಶ ।
ಗುಣೈಃಸಮಸ್ತೈಃ ಸ್ವಯಮೇವ ವಾಯುರ್ಬಭೂವಭೀಮೋ ಜಗದಂತರಾತ್ಮಾ ॥ ೧೩೧ ॥

ವಿಶೇಷಾತ್ = ಸಹದೇವನಲ್ಲಿರುವ ಶೃಂಗಾರ ರೂಪಕ್ಕಿಂತ ವಿಶೇಷಾಕಾರರಾಗಿ ನಕುಲೇ = ನಕುಲನಲ್ಲಿ ಶೃಂಗಾರ ರೂಪಃ = ಸುಂದರ ರೂಪವುಳ್ಳ ವಾಯುದೇವರು ವಿವೇಶ = ಪ್ರವೇಶಿಸಿದರು. ಸುನೀತಿರೂಪಃ = ಒಳ್ಳೆ ನೀತಿ ರೂಪವುಳ್ಳ ವಾಯುದೇವರು ಸಹದೇವಂ = ಸಹದೇವನನ್ನು ವಿವೇಶ = ಪ್ರವೇಶಿಸಿದರು. ಜಗದಂತರಾತ್ಮಾ = ಲೋಕಕ್ಕೆ ಅಂತರ್ನಿಯಾಮಕರಾದ ವಾಯುಃ = ವಾಯುದೇವರು ಸ್ವಯಮೇವ = ತಾನೇ ಸಮಸ್ತೈಃಗುಣೈಃ = ಭಕ್ತಿಜ್ಞಾನಾದಿ ಎಲ್ಲಾ ಗುಣಗಳಿಂದ ಸಹಿತರಾಗಿ ಭೀಮಃ = ಭೀಮ ನಾಮಕರು ಬಭೂವ = ಆದರು. ॥ ೧೩೧ ॥

ಸುಪಲ್ಲವಾಕಾರ ತನುರ್ಹಿಕೋಮಲಃ ಪ್ರಾಯೋಜನ್ಯೈಃ ಪ್ರೋಚ್ಯತೇ ರೂಪಶಾಲೀ ।
ತತಃ ಸುಜಾತೌ ವರವಜ್ರಕಾಯೌ ಭೀಮಾರ್ಜುನಾವಪ್ಯೃತೇ ಪಾಂಡುರೈಚ್ಛತ್ ॥ ೧೩೨ ॥

ಹಿ = ಯಾವ ಕಾರಣದಿಂದ ಸುಪಲ್ಲವಾಕಾರತನುಃ = ಕೋಮಲವಾದ ಚಿಗುರೆಲೆಯ ಆಕಾರದಂತೆ ಆಕಾರವುಳ್ಳ (ಶರೀರವುಳ್ಳ) ಕೋಮಲಃ = ಮೃದುವಾದ ಪುರುಷನು ಪ್ರಾಯಃ = ಹೆಚ್ಚಾಗಿ ಜನ್ಯೈಃ = ಸ್ಥೂಲವಾದ ಜ್ಞಾನವುಳ್ಳ ಜನರಿಂದ ರೂಪಶಾಲೀ = ಶೋಭನ ರೂಪವುಳ್ಳವನು ಎಂದು ಪ್ರೋಚ್ಯತೇ = ಹೊಗಳಲ್ಪಡುತ್ತಾನೋ ತತಃ = ಆದ್ದರಿಂದ ವರವಜ್ರ ಕಾಯೌ = ವಜ್ರದಿಂದಲೂ ಅತಿದೃಢವಾದ ಶರೀರವುಳ್ಳ ಭೀಮಾರ್ಜುನೌ ಋತೇऽಪಿ = ಭೀಮಾರ್ಜುನರನ್ನು ಬಿಟ್ಟು ಸುಜಾತೌ = ಚಿಗುರೆಲೆಯ ಕೋಮಲವಾದ ಶರೀರವುಳ್ಳವರಾಗಿ ಹುಟ್ಟತಕ್ಕ ಮಕ್ಕಳನ್ನು ಪಾಂಡುಃ = ಪಾಂಡುರಾಜನು ಐಚ್ಛತ್ = ಇಚ್ಛಿಸಿದನು. ॥ ೧೩೦ ॥

ಅಪ್ರಾಕೃತಾನಾಂ ತು ಮನೋಹರಂಯದ್ರೂಪಂ ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಂ ।
ತನ್ಮಾರುತೋ ನಕುಲೇ ಕೋಮಲಾಭ ಏವಂ ವಾಯುಃ ಪಂಚರೂಪೋऽತ್ರಚಾಸೀತ್ ॥ ೧೩೩ ॥

ಅಪ್ರಾಕೃತಾನಾಂ=ಅಲೌಕಿಕರಿಗೆ ತು = ವಿಶೇಷವಾಗಿ ಮಹನೋಹರಂ = ಸುಂದರವಾದ ದ್ವಾತ್ರಿಂಶಲ್ಲಕ್ಷಣೋಪೇತಂ= ಮೂವತ್ತೆರಡು ಲಕ್ಷಣಗಳಿಂದ ಕೂಡಿದ ಅಗ್ರ್ಯಂ = ವಜ್ರದಿಂದಲೂ ಕಠಿಣವಾದ ಅಂಗವುಳ್ಳ ಯದ್ರೂಪಂ= ಯಾವ ತನ್ನ ನಿಜರೂಪವೋ ತತ್ = ಆ ರೂಪವನ್ನು ಮಾರುತಃ = ಮುಖ್ಯಪ್ರಾಣದೇವರು ನಕುಲೇ = ನಕುಲನಲ್ಲಿ ಹಿರಣ್ಯಕಶಿಪು ವಿನ ಹೊಟ್ಟೆಯನ್ನು ಸೀಳುವಾಗ ತೋರಿಸಲ್ಪಟ್ಟ ಕಾಠಿನ್ಯವನ್ನು ವ್ಯಕ್ತಪಡಿಸದೆ ರಮಾದೇವಿಯ ಆಲಿಂಗನ ಸಮಯದಲ್ಲಿ ಪೂರ್ವವನ್ನು ತೋರಿಸುವ ನರಸಿಂಹನಂತೆ ಜರಾಸಂಧನ ಕಠಿಸವಾದ ಅಂಗಸಂಧಿಗಳ ಸೀಳುವ ಸಮಯದಲ್ಲಿದ್ದ ಕಾಠಿನ್ಯವನ್ನು ವ್ಯಕ್ತಪಡಿಸದೆ ದ್ರೌಪದಿಯ ಆಲಿಂಗನ ಸಮಯದಲ್ಲಿ ಉಂಟಾದ ಮೂರ್ಧವದಂತೆ ಕೋಮಲಾಭಃಸನ್ = ಕೋಮಲ ಕಾಂತಿ

ಉಳ್ಳವನಾಗಿ ಮಾರ್ದವವನ್ನು ತೋರಿಸಿದನು ಏವಂ=ಈ ಹಿಂದೆ ಹೇಳಿದ ರೀತಿಯಿಂದ ವಾಯುಃ=ವಾಯುಂದೇವರು ಅತ್ರ=ಈ ಕೃಷ್ಣಾವತಾರದಲ್ಲಿ ಪಂಚ ರೂಪಃ=ಭೀಮನಲ್ಲಿ ಸಾಕ್ಷಾತ್ ರೂಪವುಳ್ಳವನೂ ಯುಧಿಷ್ಠಿರಾದಿ ನಾಲ್ವರಲ್ಲಿ ಆವಿಷ್ಟರೂಪವುಳ್ಳವನೆಂಬುದಾಗಿ ಐದೂ ರೂಪವುಳ್ಳವನು ಆಸೀತ್=ಆದರು. ॥ ೧೩೮ ॥

ಅತೀತೇಂದ್ರಾವಿವತೇ ವಿಷ್ಣುಷಷ್ಠಾಃ ಪೂರ್ವೇಂದ್ರೋಸೌಯಜ್ಞನಾಮಾರವೇಶಃ ॥
ಸವೈಕೃಷ್ಣೋವಾಯುರಥ ದ್ವಿತೀಯಃ ಸಭೀಮಸೇನೋ ಧರ್ಮಆಸೀತ್ತೃತೀಯಃ ॥ ೧೩೯ ॥

ವಿಷ್ಣುಷಷ್ಠಾಃ=ಮುಂದೆ ವಿಷ್ಣುವನ್ನು ಪ್ರಥಮ ಇಂದ್ರನೆಂದು ಹೇಳುವವರಿಂದ ವೃತ್ತ್ಯವು ಸಂಖ್ಯೆಯಿಂದ ವಿಷ್ಣುವು ಆರನೆಯನಾಗಿ ಉಳ್ಳ ತೇ=ಆ ಪಾಂಡವರು ಅತೀತೇಂದ್ರಾವಿವ=ಹಿಂದಿನ ಮನ್ವಂತರಗಳಲ್ಲಿರತಕ್ಕ ಇಂದ್ರರೇ ಅಸೌ=ಈದಾವ ಯಜ್ಞನಾಮಾ=ಯಜ್ಞನೆಂದು ಹೆಸರುಳ್ಳ ರಮೇಶಃ=ಲಕ್ಷ್ಮೀಪತಿಯಾದ ಪರಮಾತ್ಮನು ಪೂರ್ವೇಂದ್ರಃ=ಮೊದಲಿನ ಮನ್ವಂತರದ ಇಂದ್ರನು ಸವೈ=ಆ ಯಜ್ಞನಾಮಕನಾದ ಹರಿಯೇ ಕೃಷ್ಣಃ=ಕೃಷ್ಣನಾದನು ಅಥ=ಯಜ್ಞನಾಮಕನು ಪ್ರಥಮದಲ್ಲಿ ಇಂದ್ರನಾದ ಮೇಲೆ ವಾಯುಃ=ಪ್ರಾಣದೇವರು ದ್ವಿತೀಯಃ=ಯಿರಡನೇ ಮನ್ವಂತರದ ರೋಚನನೆಂಬ ಇಂದ್ರನು ಸಃ=ಅವನೇ ಭೀಮಸೇನಃ=ಭೀಮ ಸೇನನಾದನು ಧರ್ಮಃ=ಯಮನು ತೃತೀಯಃ=ಮೂರನೇ ಮನ್ವಂತರದ ಸತ್ಯಜಿತ್ ಎಂಬ ಇಂದ್ರನು ಆಸೀತ್=ಆದನು. ॥ ೧೩೯ ॥

ಯುಧಿಷ್ಠಿರೋsಸಾವಥ ನಾಸತ್ಯದಸ್ರೌ ಕ್ರಮಾತ್ತಾವೇತೌ ಮಾದ್ರವತೀ ಸುತೌಚ ॥
ಪುರಂದರಃ ಷಷ್ಠಉತಾತ್ರ ಸಪ್ತಮಃ ಸಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥ ೧೪೦ ॥

ಅಸೌ=ಈ ಯಮಧರ್ಮನೇ ಯುಧಿಷ್ಠಿರಃ=ಯುಧಿಷ್ಠಿರನು ಅಥ=ಧರ್ಮನು ಇಂದ್ರನಾದ ಮೇಲೆ ನಾಸತ್ಯದಸ್ರೌ=ಅಶ್ವಿನೀದೇವತೆಗಳು ಕ್ರಮಾತ್=ಕ್ರಮದಿಂದ ಅಂದರೆ ಒಬ್ಬನು ನಾಲ್ಕನೇ ಮನ್ವಂತರದ ಇಂದ್ರನು ಮತ್ತೊಬ್ಬನು ಐದನೇ ಮನ್ವಂತರದ ಇಂದ್ರನು ತಾವೇತೌ=ಆ ಇದಾವ ಅಶ್ವಿನಿ ದೇವತೆಗಳು ಕ್ರಮಾತ್=ಮೂಸುಂಪಾವತಾರ ಯೋಗ್ಯಕ್ರಮದಿಂದ ನಕುಲ ಸಹದೇವರೆಂಬುದಾಗಿ ಮಾದ್ರವತೀಸುತೌ=ಮಾದ್ರವತಿಯ ಮಕ್ಕಳಾದರು ಅತ್ರ=ಈ ಇಂದ್ರರಲ್ಲಿ ಪುರಂದರಃ=ಪುರಂದರನು ಷಷ್ಠಃ=ಆರನೆಯ ಸಂಖ್ಯೆಯಿಂದ ಆರನೆಯ ಮನ್ವಂತರದ ಮುಂದ್ರುಮ್ನವೆಂಬ ಇಂದ್ರನು ಸಪ್ತಮಉತ=ಏಳನೆಯವನೂ ಕೂಡ ಸಏಕಃ=ಆರನೆಯ ಮತ್ತು ಏಳನೆಯ ಈ ಎರಡು ಮನ್ವಂತರಗಳಲ್ಲಿಯೂ ಪುರಂದರನೊಬ್ಬನೇ ಇಂದ್ರನಾದನ್ನು ಸಏವಫಲ್ಗುನಃ=ಆ ಪುರಂದರನೇ ಅರ್ಜುನನು ಏತೇ=ಈ ವಿಷ್ಣ್ವಾದಿಗಳು ಆರು ಜನರು ಇಂದ್ರಾಃ=ಇಂದ್ರರು. ॥ ೧೪೦ ॥

ಕ್ರಮಾತ್ಸಂಸ್ಕಾರಾನ್ ಕ್ಷತ್ರಿಯಾಣಾಮು ವಾಪ್ಯತೇsವರ್ಧಂತ ಸ್ವತವಸೋ ಮಹಿತ್ವನಾ ॥
ಸರ್ವೇಸರ್ವಜ್ಞಾಃ ಸರ್ವಧರ್ಮೋಪಪನ್ನಾಃ ಸರ್ವೇಭಕ್ತಾಃ ಕೇಶವೇsತ್ಯಂತಯುಕ್ತಾಃ ॥ ೧೪೧ ॥

ಸ್ವ-ತವಸಃ=ಸ್ವಭಾವದಿಂದಲೇ ವಿಸ್ತಾರವುಳ್ಳ ಭೂಮಿಯಲ್ಲಿ ಕುಂತೀಮಾದ್ರಿಯರಿಂದ ಹುಟ್ಟಿರುವ ತೇ=ಆ ಪಂಚ ಪಾಂಡವರು ಕ್ರಮಾತ್=ಜ್ಯೇಷ್ಠ ಕ್ರಮದಿಂದ ಕ್ಷತ್ರಿಯಾಣಾಂ ಸಂಸ್ಕಾರಾನ್=ಕ್ಷತ್ರಿಯರಿಗೆ ಯೋಗ್ಯಗಳಾದ ಜಾತಕರ್ಮಾದಿ ಸುಸ್ಕಾರಗಳನ್ನು ಆವಾಪ್ಯ=ಹೊಂದಿ ಮಹಿತ್ವನಾ=ಮಹಿಮೆಯಿಂದ ಅವರ್ಧಂತ=ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿದರು. ಸರ್ವೇ=ಎಲ್ಲಾ ಪಾಂಡವರೂ ಸರ್ವಜ್ಞಾಃ ಎಲ್ಲವನ್ನೂ ತಿಳಿದವರು ಸರ್ವಧರ್ಮೋಪಪನ್ನಾಃ=ತಮಗೆ ವಿಹಿತಗಳಾದ ವಿಷ್ಣುವಿಗೆ ಪ್ರೀತಿಯನ್ನುಂಟು ಮಾಡತಕ್ಕ ಧರ್ಮಗಳಿಂದ ಕೂಡಿದವರು ಸರ್ವೇ=ಎಲ್ಲರೂ ಕೇಶವೇ=ಶ್ರೀ ಹರಿಯಲ್ಲಿ ಭಕ್ತಾಃ=ಮಾಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹವುಳ್ಳವರು ಕೇಶವೇ=ಶ್ರೀ ಹರಿಯಲ್ಲಿ ಅತ್ಯಂತ ಯುಕ್ತಾಃ=ಅತಿಶಯಿತವಾದ ಮನೋಯೋಗವುಳ್ಳವರು. ॥ ೧೪೧ ॥

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ ಶ್ರೀ ಮನ್ಮಹಾಭಾರತ
ತಾತ್ಪರ್ಯನಿರ್ಣಯೇ ಶ್ರೀ ಕೃಷ್ಣಾವತಾರ ದೇವಾಂಶಾವತರಣಂ
ನಾಮದ್ವಾದಶೋಧ್ಯಾಯಃ ॥ ೧೨ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಶ್ರೀ ಗುರುಭ್ಯೋನಮಃ

॥ ಶ್ರೀ ಮದ್ಭಗವದ್ಗೀತಾ ಮಧ್ವಾಂತರ್ಗತ ಶ್ರೀ ರಾಮಕೃಷ್ಣ ವೇದವ್ಯಾಸಾತ್ಮಕ ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ ॥

ಹದಿನೂರನೇ ಅಧ್ಯಾಯವು

ಗರ್ಗಃ ಶೂರಸುತೋಕ್ತ್ಯಾವ್ರಜಮಾಯಾತ್ ಸಾತ್ವತಾಂಪುರೋಧಾಃ ಸಃ ॥
ಚಕ್ರೇ ಕ್ಷತ್ರಿಯ ಯೋಗ್ಯಾನ್ಸಂಸ್ಕಾರಾನ್ ಕೃಷ್ಣರೋಹಿಣೀ ಸೂನ್ವೋಃ ॥ ೧ ॥

ಸಾತ್ವತಾಂ=ಯಾದವ ವಿಶೇಷರಿಗೆ ಪುರೋಧಾಃ=ಪುರೋಹಿತರಾದ ಗರ್ಗಃ=ಗರ್ಗಾಚಾರ್ಯರು ಶೂರಸುತೋಕ್ತ್ಯಾ=ಶೂರನ ಮಗನಾದ ವಸುದೇವನ ರಾಮಕೃಷ್ಣರಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಬೇಕು ಎಂಬ ಮಾತಿನಿಂದ ಹೇಳಿಸಿಕೊಳ್ಳಲ್ಪಟ್ಟವರಾಗಿ ವಜ್ರಂ = ನಂದಗೋಕುಲವನ್ನು ಕುರಿತು ಆಯಾತ್ = ಬಂದರು ಸಃ=ಆ ಗರ್ಗಾಚಾರ್ಯರು ಕೃಷ್ಣ ರೋಹಿಣೀ ಸೂನ್ವೋಃ=ಕೃಷ್ಣ ಮತ್ತು ರೋಹಿಣಿಯ ಮಗನಾದ ಬಲರಾಮರಿಗೆ ಕ್ಷತ್ರಿಯ ಯೋಗ್ಯಾನ್ = ಕ್ಷತ್ರಿಯರಿಗೆ ಯೋಗ್ಯಗಳಾದ ಸಂಸ್ಕಾರಾನ್=ಜಾತಕರ್ಮಾದಿ ಸಂಸ್ಕಾರಗಳನ್ನ ಚಕ್ರೇ=ಮಾಡಿದರು. ॥ ೧ ॥

ಊಚೇನಂದ ಸುತೋಽಯಂ ತವ ವಿಷ್ಣೋರ್ನಾವಮೋ ಗುಣೈಃ ಸರ್ವೈಃ ॥
ಸರ್ವೇಚೈತತ್ರಾತಾಃ ಸುಖಮಾಪ್ಸ್ಯಂತ್ಯುನ್ನತಂ ಭವತ್ಪೂರ್ವಾಃ ॥ ೨ ॥

ಹೇ ನಂದ=ಎಲೋ ನಂದ ಗೋಪನೇ ಅಯಂ=ಎದುರಿನಲ್ಲಿರುವ ತವ=ನಿನ್ನ ಸುತಃ=ಮಗನಾದ ಕೃಷ್ಣನು ಸರ್ವೈಃ =ಎಲ್ಲಾ ಗುಣೈಃ=ಗುಣಗಳಿಂದ ವಿಷ್ಣೋಃ=ನಾರಾಯಣನಿಂದ ಅಧಮಃ=ಅಧಮನು ನ=ಅಲ್ಲ ನಾರಾಯಣನೇ ಆಗಿದ್ದಾನೆ ಏತತ್ರಾತಾಃ=ಈ ಕೃಷ್ಣನಿಂದ ರಕ್ಷಿಸಲ್ಪಟ್ಟ ಭವತ್ಪೂರ್ವಾಃ=ನೀನೇ ಮೊದಲಾಗಿ ಉಳ್ಳ ಸರ್ವೇ=ಎಲ್ಲರೂ ಉನ್ನತಂ= ಉತ್ತಮವಾದ ಸುಖಂ=ಸಂತೋಷವನ್ನು ಆಪ್ಸ್ಯಂತಿ = ಹೊಂದುವಿರಿ ॥ ೨ ॥

ಇತ್ಯುಕ್ತಃ ಸಮುವೋದ ಪ್ರಯಯೌಗರ್ಗೋಽಪಿ ಕೇಶವೋಽಥಾದ್ಯಃ ॥
ಸ್ವಪದೈರಗ್ರಜಯುಕ್ತಶ್ಚಕ್ರೇ ಪುಣ್ಯಂ ವ್ರಜನ್ ವ್ರಜೋದ್ದೇಶಂ ॥ ೩ ॥

ಇತಿ=ಈ ರೀತಿಯಾಗಿ ಉಕ್ತಃ=ಹೇಳಿಸಿಕೊಳ್ಳಲ್ಪಟ್ಟ ಸಃ=ಆ ನಂದಗೋಪನು ಮುವೋದ=ಸಂತೋಷ ಪಟ್ಟನು ಗರ್ಗೋಪಿ=ಗರ್ಗಾಚಾರ್ಯರೂ ಕೂಡ ಪ್ರಯಯೌ=ಹೋದರು ಅಥ=ಆನಂತರ ಆದ್ಯಃ=ಆದಿ ಪುರುಷನಾದ ಕೇಶವಃ= ಬ್ರಹ್ಮ ರುದ್ರ ಪ್ರೇರಕನಾದ ಶ್ರೀ ಕೃಷ್ಣನು (ವ್ರಜನ್‌ಸನ್=ಅತ್ತಿತ್ತ ಸಂಚರಿಸುವವನಾಗಿ) ಅಗ್ರಜಯುಕ್ತಃಸನ್=ಅಣ್ಣನಿಂದ ಕೂಡಿದವನಾಗಿ ವ್ರಜನ್‌ಸನ್ = ಅತ್ತಿತ್ತ ಸಂಚರಿಸುವವನಾಗಿ ಸ್ವಪದೈಃ=ತನ್ನ ಪಾದ ವಿನ್ಯಾಸಗಳಿಂದ ವ್ರಜೋದ್ದೇಶಂ=ನಂದ ಗೋಕುಲದ ಪ್ರದೇಶವನ್ನು ಪುಣ್ಯಂ=ಪುಣ್ಯಪ್ರದವನ್ನಾಗಿ ಚಕ್ರೇ=ಮಾಡಿದನು. ॥ ೩ ॥

ಸಕದಾಚಿತ್ ಶಿಶುಭಾವಂ ಕುರ್ವಂತ್ಯಾಮಾತುರಾತ್ಮನೋ ಭೂಯಃ ॥
ಅಪನೇತುಂ ಪರಮೇಶೋ ಮೃದಂ ಜಘಾಸೇಕ್ಷತಾಂ ವಯಸ್ಯಾನಾಂ ॥ ೪ ॥

ಪರಮೇಶಃ=ಉತ್ತಮ ಸ್ವಾಮಿಯಾದ ಸಃ=ಆ ಕೃಷ್ಣನು ಶಿಶುಭಾವಂ=ಕೃಷ್ಣನು ಬಾಲಕನು ಎಂಬ ಬುದ್ಧಿಯನ್ನು ಕುರ್ವಂತ್ಯಾಃ=ಮಾಡತಕ್ಕ ಆತ್ಮನಃ=ತನ್ನ ಮಾತುಃ=ತಾಯಿಯಾದ ಯಶೋದೆಗೆ ಭೂಯಃ=ಮತ್ತು ಶಿಶುಭಾವಾಂ ಅಪನೇ ತುಂ=ಕೃಷ್ಣನು ಬಾಲಕನು ಎಂಬ ಭ್ರಾಂತಿಯನ್ನು ನಾಶಮಾಡುವುದಕ್ಕಾಗಿ ವಯಸ್ಯಾನಾಂ ಸಮಾನ ವಯಸ್ಸುಳ್ಳ ಬಾಲಕರ ಈಕ್ಷತಾಂಸತಾಂ=ನೋಡುತ್ತಿರುವಾಗಲೇ ಮೃದಂ = ಮಣ್ಣನ್ನು ಜಘಾಸ=ತಿಂದನು. ॥ ೪ ॥

ಮಾತ್ರೋಪಾಲಬ್ಧ ಈ ಶೋಮುಖ ವಿವೃತಿಮಕರ್ನಾಂಬ ಮೃದ್ಭಕ್ಷಿತಾಹಂ
ಪಶ್ಯೇತ್ಯಾಸ್ಯಾಂತರೇತು ಪ್ರಕೃತಿ ವಿಕೃತಿ ಯುಕ್ಯಾ ಜಗತ್ಪರ್ಯ ಪಶ್ಯತ್ ॥
ಇತ್ಥಂ ದೇವೋsಪ್ಯಚಿಂತ್ಯಾಮುಪರದುರಧಿಗಾಂ ಶಕ್ತಿ ಮುಚ್ಚಾಂ ಪ್ರದರ್ಶ್ಯ
ಪ್ರಾಯೋಜ್ಞಾತಾತ್ಮತತ್ತ್ವಂ ಪುನರಪಿ ಭಗವನಾವೃಣೋದಾತ್ಮಶಕ್ತ್ಯಾ ॥ ೫ ॥

ಮಾತ್ರಾ=ತಾಯಿಯಾದ ಯಶೋದೆಯಿಂದ ಉಪಾಲಬ್ಧಃ=ಬೆದರಿಸಿಕೊಳ್ಳಲ್ಪಟ್ಟ ಈಶಃ=ಸ್ವಾಮಿಯಾದ ಶ್ರೀ ಕೃಷ್ಣನು ಹೇ ಅಂಬ=ಎಲೋ ತಾಯಿಯೇ ಅಹಂ=ನಾನು ಮೃದ್ಭಕ್ಷಿತಾ=ಮಣ್ಣು ತಿಂದವನು ನ=ಅಲ್ಲ ಅಸ್ಯಾಂತರೇತು = ಬಾಯಿಯಲಿ ಮಧ್ಯದಲ್ಲಾದರೂ ಪಶ್ಯ=ನೋಡು ಇತಿ=ಎಂದು ಹೇಳಿ ಮುಖವಿವೃತಿಂ=ಬಾಯಿಯ ತೆರೆಯುವಿಕೆಯನ್ನು ಅಕಃ= ಮಾಡಿದನು. ಸಾ=ಆ ಯಶೋದೆಯು ಪ್ರಕೃತಿ ವಿಕೃತಿ ಯುಕ್=ಮೂಲಪ್ರಕೃತಿ ಅದರ ವಿಕಾರವಾದ ಮಹದಾದಿತತ್ವವೂ ಇವುಗಳಿಂದ ಕೂಡಿದ ಜಗತ್=ಲೋಕವನ್ನು ಪರ್ಯಪಶ್ಯತ್ = ನೋಡಿದಳು. ಭಗವಾನ್=ಪಡ್ಗುಣ್ಯೈಶ್ವರ್ಯ ಸಂಪನ್ನರಾದ ದೇವಃ=ಕ್ರೀಡಾದಿಗುಣ ವಿಶಿಷ್ಟನಾದ ಶ್ರೀ ಕೃಷ್ಣನು ಇತ್ಥಂ=ಈ ರೀತಿಯಾಗಿ ಅಚಿಂತ್ಯಾಂ=ಇನ್ನೊಬ್ಬರಿಂದ ಸ್ಮರಿಸಲು ಅಶಕ್ಯವಾದ ಅಪರದುರಧಿಗಾಂ=ತನ್ನಿಂದ ಇತರರಾದ ರಮಾ ಬ್ರಹ್ಮಾದಿಗಳಿಂದಲೂ ತಿಳಿಯಲು ಶಕ್ಯವಾದ ಉಚ್ಚಾಂ=ಶ್ರೇಷ್ಠವಾದ ಶಕ್ತಿಂ=ಸ್ವರೂಪ ಶಕ್ತಿಯನ್ನು ಪ್ರದರ್ಶ್ಯ = ತೋರಿಸಿ ಪ್ರಾಯಃ = ಬಹಳವಾಗಿ ಜ್ಞಾತಾತ್ಮತತ್ವಂ = ತಿಳಿಯಲ್ಪಟ್ಟ ತನ್ನ ಸ್ವರೂಪವುಳ್ಳ ಯಶೋದೆಯನ್ನು ಆತ್ಮಶಕ್ತ್ಯಾ=ತನ್ನ ವೈಷ್ಣವ ಮಾಯೆಯಿಂದ ಪುನರಪಿ= ಮತ್ತೂ ಹಿಂದಿನಂತೆಯೇ ಆವೃಣೋತ್ = ಆವರಿಸಿದನು ಮಗನ ಮೇಲಿನ ಸ್ನೇಹದಿಂದ ಕೂಡಿದವಳನ್ನಾಗಿ ಮಾಡಿದನು. ॥ ೫ ॥

ಇತಿಪ್ರಭುಸ್ಯಲೀಲಯಾ ಹರಿರ್ಜಗದ್ವಿಡಂಬಯನ್ ॥
ಚಚಾರಗೋಷ್ಠಮಂಡಲೇsಪ್ಯನಂತ ಸೌಖ್ಯಚಿದ್ಘನಃ ॥ ೬ ॥

ಅನಂತಸೌಖ್ಯ ಚಿದ್ಘನಃ=ಅಪರಿಮಿತ ಆನಂದ ಜ್ಞಾನಿಗಳಿಂದ ಪೂರ್ಣನಾದ ಪ್ರಭುಃ = ಸಮರ್ಥನಾದ ಹರಿಃ =ಪಾಪ ನಾಶಕನಾದ ಶ್ರೀ ಕೃಷ್ಣನು ಇತಿ = ಈ ರೀತಿಯಾಗಿ ಕ್ರೀಡಯಾ = ಆಟಗಳಿಂದ ಜಗತ್ = ಲೋಕವನ್ನು ವಿಡಂಬಯನ್ ಸನ್ =ಅನುಕರಿಸುವವನಾಗಿ ಗೋಷ್ಠಮಂಡಲೇ = ಗೋಕುಲದ ಪ್ರದೇಶದಲ್ಲಿ ಚಚಾರ = ಸಂಚರಿಸಿದನು. ॥ ೬ ॥

ಕದಾಚಿದೀಶ್ವರಸ್ತನಂ ಪಿಬನ್ಯಶೋದಯಾ ಪಯಃ ॥
ಸೃತಂ ನಿಧಾತುಮುಜ್ಝಿತೋ ಬಭಂಜ ದಧ್ಯಮತ್ರಕಂ ॥ ೭ ॥

ಕದಾಚಿತ್ = ಒಮ್ಮೆ ಈಶ್ವರಃ = ಸಮರ್ಥನಾದ ಶ್ರೀಕೃಷ್ಣನು ಸ್ತನಂ = ಮೊಲೆಹಾಲನ್ನು ಪಿಬನ್ ಸನ್ =ಕುಡಿಯುತಕ್ಕವನಾಗಿ ಸೃತಂ = ಪಾತ್ರೆಯಿಂದ ಉಕ್ಕಿ ಬಂದ ಪಯಃ = ಹಾಲನ್ನು ನಿಧಾತುಂ = ಪಾತ್ರೆಯಲ್ಲಿ ಹಾಕಲು ಯಶೋದಯಾ = ಯಶೋದೆಯಿಂದ ಉಜ್ಝಿತಃಸನ್ = ಬಿಡಲ್ಪಟ್ಟವನಾಗಿ ದಧ್ಯಮತ್ರಕಂ = ಕಡೆಯುವ ಮೊಸರಿನ ಪಾತ್ರೆಯನ್ನು ಬಭಂಜ =ಪುಡಿ ಪುಡಿ ಮಾಡಿದನು. ॥ ೭ ॥

ಪ್ರಮಥ್ಯಮಾನದಧ್ನ್ಯರು ಪ್ರಜಾತ ವಿಂದು ಸನ್ನಿಭಂ ॥
ನವಂ ಹಿ ನೀತ ಮಾದದೇ ರಹೋ ಜಘಾಸ ಚೇಶಿತಾ ॥ ೮ ॥

ಈಶಿತಾ = ಸಮರ್ಥನಾದ ಶ್ರೀ ಕೃಷ್ಣನು ಪ್ರಮಥ್ಯಮಾನದಧ್ನ್ಯರುಪ್ರಜಾತಂ = ಚೆನ್ನಾಗಿ ಮಥನ ಮಾಡಿದ ಮೊಸರಿನಿಂದ ಬಹಳವಾಗಿ ಉಂಟಾದ ಚಂದ್ರನಂತೆ ಬೆಳ್ಳಗಾದ ನವಂ ನೀತಂ = ಬೆಣ್ಣೆಯನ್ನು ಆದದೇ = ತೆಗೆದುಕೊಂಡನು ಹಿ = ಪ್ರಸಿದ್ಧ ರಹಃ = ಏಕಾಂತದಲ್ಲಿ ಜಘಾಸ = ತಿಂದನು. ॥ ೮ ॥

ಪ್ರಜಾಯತೇ ಹಿ ಯತ್ಕುಲೇ ಯಥಾ ಯುಗಂ ಯಥಾವಯಃ ॥
ತಥಾಪ್ರನರ್ತನಂ ಭವೇದ್ವಿವೌಕಸಾಂ ಸಮುದ್ಭವೇ ॥ ೯ ॥

ಇತಿ ಸ್ವಧರ್ಮಮುತ್ತಮಂ ದಿವೌ ಕಸಾಂ ಪ್ರದರ್ಶಯನ್ ।
ಅಧರ್ಮಪಾವಕೋsಪಿಸನ್ ವಿಡಂಬತೇ ಜನಾರ್ದನಃ ॥ ೧೦ ॥

ಜನಾರ್ಧನಃ=ಉತ್ಪತ್ತಿ ಇಲ್ಲದ ಸಂಸಾರನಾಶಕನಾದ ಶ್ರೀಕೃಷ್ಣನು ದಿವೌಕಸಾಂ=ದೇವತೆಗಳಿಗೆ ಸಮಂದ್ಭವೇಸತಿ= ಭೂಲೋಕದಲ್ಲಿ ಅವತಾರವು ಪ್ರಾಪ್ತವಾಗುತ್ತಿರಲು ಯಥಾಯುಗಂ = ಎಂತಹ ಯುಗವೋ ಯಂಥಾವಯಃ=ಎಂತಹವಯಸ್ಸೋ ಯಥಾ ಕುಲಂ=ಎಂತಹ ಕುಲವೋ ತಥಾ=ಆ ಯುಗಕುಲ ವಯಸ್ಸಿಗನುಸಾರವಾಗಿ ಪ್ರವರ್ತನಂ=ಆಚರಣೆಯು ಭವೇತ್= ಆಗತಕ್ಕದ್ದು ಇತಿ=ಈ ಅಭಿಪ್ರಾಯದಿಂದ ದಿವೌಕಸಾಂ ದೇವತೆಗಳಿಗೆ ಉತ್ತಮಂ = ಶ್ರೇಷ್ಠವಾದ ಸ್ವಧರ್ಮಂ=ತನಗೆ ಪ್ರೀತಿ ಯನ್ನುಂಟುಮಾಡುವ ಧರ್ಮವನ್ನು ಪ್ರದರ್ಶಯನ್ ಸನ್=ತೋರಿಸತಕ್ಕವನಾಗಿ ಅಧರ್ಮಪಾವಕೋsಪಿಸನ್=ಶಾಸ್ತ್ರನಿಷಿದ್ಧ ವಾದ ಕರ್ಮವನ್ನು ಸುಡುವುದರಲ್ಲಿ ಅಗ್ನಿಯಂತಿರುವವನಾದರೂ ಯತ್ಕುಲೇ=ಯಾವ ಕುಲದಲ್ಲಿ ಯಾವ ಯುಗದಲ್ಲಿ ಯಾವ ವಯಸ್ಸಿನಿಂದ ಕೂಡಿದವನಾಗಿ ಪ್ರಜಾಯತೇ=ಹುಟ್ಟುತ್ತಾನೋ ತಥಾ=ಆ ಕುಲ, ಯುಗಗಳಿಗೆ ಅನುಸಾರವಾಗಿ ವಿಡಂಬತೇ = ಲೋಕವನ್ನು ಅನುಕರಿಸುತ್ತಾನೆ. ॥ ೧೦ ॥

ಅವಃ– ಹಿಂದೆ ಹೇಳಿದ ಅರ್ಥವನ್ನೇ ವಿವರಿಸುತ್ತಾರೆ.

ನೃತಿರ್ಯಗಾದಿ ರೂಪಕಃ ಸಬಾಲ್ಯ ಯೌವನಾದಿಯತ್ ।
ಕ್ರಿಯಾಶ್ಚತತ್ತದುದ್ಭವಾಃ ಕರೋತಿ ಶಾಶ್ವತೋsಪಿ ಸನ್ ॥ ೧೧ ॥

ನೃತಿರ್ಯಗಾದಿ ರೂಪಕಃ=ರಾಮಕೃಷ್ಣ ಮೊದಲಾದ ಮನುಷ್ಯರಲ್ಲಿ ಅವತರಿಸಿದ ರೂಪಗಳು ಮತ್ಸ್ಯ ಕೂರ್ಮ ಮೊದಲಾದ ತಿರ್ಯಕ್ ಪ್ರಾಣಿಗಳಲ್ಲಿ ಅವತರಿಸಿದ ರೂಪಗಳು ಹಯಗ್ರೀವ, ನರಸಿಂಹ ಮೊದಲಾದ ರೂಪಗಳೂ ಇವು ಗಳುಳ್ಳ ಸ=ಆ ನಾರಾಯಣನು ಶಾಶ್ವತೋಪಿಸನ್ = ಯಾವಾಗಲೂ ಒಂದೇ ರೀತಿ ಇರುವವನಾದರೂ ಕೂಡ ಬಾಲ್ಯಯೌವ ನಾದಿ=ಬಾಲ್ಯ, ಯೌವನ, ಕೃಶೋರವೇ ಮೊದಲಾದ ಯತ್=ಯಾವ ವಯಸ್ಸಿನ ಅವಸ್ಥೆಯೋ ತತ್ತದುದ್ಭವಾಃ=ಆಯಾವ ವಯಸ್ಸಿನ ಅವಸ್ಥಾವಿಶೇಷಗಳಲ್ಲಿ ಉಂಟಾಗುವ ಕ್ರಿಯಾಃ=ಕರ್ಮಗಳನ್ನು ಕರೋತಿ=ಮಾಡುತ್ತಾನೆ. ॥ ೧೧ ॥

ಸವಿಪ್ರರಾಜಗೋಪಕ ಸ್ವರೂಪಕಸ್ತದುದ್ಭವಾಃ ।
ತದಾ ತದಾ ವಿಚೇಷ್ಟತೇ ಕ್ರಿಯಾಃ ಸುರಾನ್ ವಿಶಿಕ್ಷಯನ್ ॥ ೧೨ ॥

ಯದಾ ಯದಾ=ಯಾವಾಗ ಯಾವಾಗ ಸಃ=ಆ ನಾರಾಯಣನು ವಿಪ್ರರಾಜ ಗೋಪಕ ಸ್ವರೂಪಕಃ=ವ್ಯಾಸ, ಪರಶುರಾಮಾದಿ ಬ್ರಾಹ್ಮಣ ಸ್ವರೂಪಗಳೂ ರಾಮಾದಿರಾಜ ರೂಪಗಳೂ ಕೃಷ್ಣನೆಂಬ ಗೋಪಾಲಕರ ಸ್ವರೂಪವೂ ಇವು ಗಳುಳ್ಳವನು ಆಗುತ್ತಾನೋ ತದಾ ತದಾ=ಆಗಾಗ ತದುದ್ಭವಾಃ=ಆಯಾವ ಜಾತಿಗಳಲ್ಲಿ ಉಂಟಾಗುವ ಕ್ರಿಯಾಃ=ಕರ್ಮಗಳನ್ನು ಸುರಾನ್=ದೇವತೆಗಳನ್ನು ವಿಶಿಕ್ಷಯನ್ ಸನ್=ಶಿಕ್ಷಿಸತಕ್ಕವನಾಗಿ ವಿಚೇಷ್ಟತೇ=ಮಾಡುತ್ತಾನೆ. ॥ ೧೨ ॥

ತಥಾಪ್ಯನನ್ಯದೇವತಾಸಮಂ ನಿಜಂ ಬಲಂ ಪ್ರಭುಃ ।
ಪ್ರಕಾಶಯನ್ ಪುನಃ ಪುನಃ ಪ್ರದರ್ಶಯತ್ಸಜೋಗುಣಾನ್ ॥ ೧೩ ॥

ತಥಾಪಿ=ಆಯಾವ ಜಾತಿಗಳಿಗೆ ಅನುಗುಣಗಳಾದ ಕ್ರಿಯೆಗಳನ್ನು ಮಾಡಿ ಶಿಕ್ಷಿಸತಕ್ಕವನಾದರೂ ಕೂಡ ಪ್ರಭುಃ = ಸಮರ್ಥನಾದ ಅಜಃ=ಉತ್ಪತ್ತಿ ಇಲ್ಲದ ಶ್ರೀ ಕೃಷ್ಣನು ನಿಜಂ ಬಲಂ=ತನ್ನ ಸಾಮರ್ಥ್ಯವನ್ನು ಅನನ್ಯದೇವತಾ ಸಮಂ=ಇತರ ದೇವತೆಗಳಿಗೆ ಸಮವಲ್ಲದ್ದನ್ನಾಗಿ ಪ್ರಕಾಶಯನ್ ಸನ್=ಪ್ರಕಾಶ ಪಡಿಸುವವನಾಗಿ ಪುನಃ ಪುನಃ = ಮತ್ತೂ ಮತ್ತು ಗುಣಾನ್= ಸರ್ವೋತ್ತಮತ್ವ, ಸರ್ವಜ್ಞತ್ವ, ಸರ್ವಶಕ್ತಿತ್ವಾದಿ ಗುಣಗಳನ್ನು ಪ್ರದರ್ಶಯತಿ=ತೋರಿಸುತ್ತಾನೆ. ॥ ೧೩ ॥

ಅಥಾತ್ತಯುಷ್ಮಿವೀಕ್ಷ್ಯತಾಂ ಸ್ವಮಾತರಂ ಜಗದ್ಗುರುಃ ।
ಸ ಪುಪ್ಲುವೇ ತಮನ್ನಗಾನ್ಮನೋವಿದೂರ ಮಂಗನಾ ॥ ೧೪ ॥

ಆಥ=ಮೊಸರಿನ ಭಾಂಡವನ್ನು ಒಡೆದ ಮೇಲೆ ಜಗದ್ಗುರುಃ=ಲೋಕಕ್ಕೆ ಉಪದೇಶವನ್ನು ಮಾಡುವ ಸಃ=ಆ ಶ್ರೀಕೃಷ್ಣನು ಆತ್ತಯಷ್ಟಿಂ=ಕೈಯ್ಯಲ್ಲಿ ಹಿಡಿಯಲ್ಪಟ್ಟಕೋಲಂಳ್ಳ ತಾಂ=ಆದಾವ ಸ್ವಮಾತರಂ=ತನ್ನ ತಾಯಿಯಾದ ಯಶೋದೆಯಂನ್ನು ಈಕ್ಷ್ಯ=ನೋಡಿ ಪುಪ್ಲುವೇ=ಓಡಿದನು. ಅಂಗನಾ=ಯಶೋದೆಯು ಮನೋವಿದೂರಂ ಯೋಗಿಗಳ ಮನ ಸ್ಸಿಗೂ ಸಿಲುಕದ ತಂ=ಆ ಕೃಷ್ಣನನ್ನು ಅನ್ವಗಾತ್= ಅನುಸರಿಸಿ ಹೋದಳು. ॥ ೧೪ ॥

ಪುನಃ ಸವಿಾಕ್ಷ್ಯತಚ್ಛ್ರಮಂ ಜಗಾಮ ತತ್ಕರಗ್ರಹಂ ।
ಪ್ರಭುಃ ಸ್ವಭಕ್ತವಶ್ಯತಾಂ ಪ್ರಕಾಶಯನ್ನುರುಕ್ರಮಃ ॥ ೧೫ ॥

ಉರುಕ್ರಮಃ=ಉತ್ಕೃಷ್ಟ ಪರಾಕ್ರಮವುಳ್ಳ ಅಥವಾ ಬಹುದೂರ ಪಾದವಿಕ್ಷೇಪವುಳ್ಳ ಪ್ರಭುಃ=ಸಮರ್ಥನಾದ ಶ್ರೀಕೃಷ್ಣನು ಪುನಃ=ಅನಂತರ ತಚ್ಛ್ರಮಂ=ಆ ತಾಯಿಯಂ ಆಯಾಸವನ್ನು ಈಕ್ಷ್ಯ=ನೋಡಿ ಸ್ವಭಕ್ತವಶ್ಯತಾಂ=ತನ್ನ ಭಕ್ತರ ಅಧೀನತ್ವವನ್ನು ಪ್ರಕಾಶಯನ್ ಸನ್=ಪ್ರಕಾಶ ಪಡಿಸುವವನಾಗಿ ತತ್ಕರ ಗ್ರಹಂ=ಅವಳ ಕೈಯಿಂದ ಗ್ರಹಣವನ್ನು ಜಗಾಮು= ಹೊಂದಿದನು. ಅಂದರೆ ಅವಳ ಕೈಗಳಿಗೆ ಸಿಲುಕಿದನು. ॥ ೧೫ ॥

ಸದಾವಿಮುಕ್ತವಿೀಶ್ವರಂ ನಿಬದ್ಧುಮಂಜಸಾದದೇ ।
ಯದೈವ ದಾಮ ಗೋಪಿಕಾ ನತತ್ಪುಪೂರ ತಂ ಪ್ರತಿ ॥ ೧೬ ॥

ಗೋಪಿಕಾ=ಯಶೋದೆಯು ಸದಾ=ಯಾವಾಗಲೂ ವಿವಿಕ್ತಂ=ಬಂಧರಹಿತನಾದ ಈಶ್ವರಂ=ಸ್ವಾಮಿಯಾದ ಶ್ರೀಕೃಷ್ಣನನ್ನು ನಿಬದ್ಧುಂ=ಚೆನ್ನಾಗಿ ಕಟ್ಟುವುದಕ್ಕಾಗಿ ದಾಮ=ಹಗ್ಗವನ್ನು ಯದೈವ=ಯಾವಾಗಲೇ ಆದದೇ=ಹಿಡಿದಳೋ ತದಾ=ಆಗ ತತ್=ಆ ಹಗ್ಗವು ತಂಪ್ರತಿ=ಆ ಕೃಷ್ಣನನ್ನು ಕುರಿತು ನಪುಪೂರ=ಪೂರ್ಣವಾಗಲಿಲ್ಲ. ॥ ೧೬ ॥

ಸಮಸ್ತದಾಮಸಂಚಯಃ ಸುಸಂಧಿತೋಽಪ್ಯಪೂರ್ಣತಾಂ ।
ಯಯೌವನಂತ ವಿಗ್ರಹೇ ಶಿಶುತ್ವಸಂ ಪ್ರದರ್ಶಕೇ ॥ ೧೭ ॥

ಸಮಸ್ತದಾಮಂ ಸಂಚಯಃ=ನಂದಗೋಕುಲದಲ್ಲಿರುವ ಎಲ್ಲಾ ಹಗ್ಗಗಳ ಸಮೂಹವು ಸುಸಂಧಿತೋಽಪಿ=ಒಂದಕೊಂದು ಗಂಟುಹಾಕಿಕೂಡಿಸಲ್ಪಟ್ಟರೂ ಕೂಡ ಶಿಶುತ್ವಸಂಪ್ರದರ್ಶಕೇ=ಬಾಲ್ಯವನ್ನು ತೋರಿಸತಕ್ಕ ಅನಂತವಿಗ್ರಹೇ=ಪರಿಮಿತಿ ಇಲ್ಲದ ಕೃಷ್ಣನ ಶರೀರದಲ್ಲಿ ಅಪೂರ್ಣತಾಂ ಯಯೌ=ಪೂರ್ಣತ್ವವನ್ನು ಹೊಂದಲಿಲ್ಲ ॥ ೧೭ ॥

ಅಬಂಧಯೋಗ್ಯತಾಂ ಪ್ರಭುಃ ಪ್ರದರ್ಶ್ಯಲೀಲಯಾ ಪುನಃ ।
ಸ ಏಕವತ್ಸಪಾಶಕಾಂತರಂ ಗತೋಽಖಿಲಂ ಭರಃ ॥ ೧೮ ॥

ಸುತಸ್ಯಮಾತ್ರ ವಶ್ಯತಾಂ ಪದರ್ಶ್ಯಧರ್ಮವಿೀಶ್ವರಃ ।
ಬಭಂಜ ತೌದಿವಿಸ್ಪೃಶೌ ಯಮಾರ್ಜುನೌ ಸುರಾತ್ಮಜೌ ॥ ೧೯ ॥

ಅಖಿಲಂಭರಃ=ಜಗತ್ತನ್ನು ಹೊಟ್ಟೆಯಲ್ಲಿ ಧರಿಸಿರುವ ಪ್ರಭುಃ=ಸಮರ್ಥನಾದ ಸಃ=ಆ ಶ್ರೀಕೃಷ್ಣನು ಅಬಂಧಯೋಗ್ಯತಾಂ=ತಾನು ಬಂಧನಕ್ಕೆ ಯೋಗ್ಯನಲ್ಲವೆಂಬುದನ್ನು ಪ್ರದರ್ಶ್ಯ=ತೋರಿಸಿ ಪುನಃ=ಮತ್ತು ಸುತಸ್ಯ=ಮಗನಿಗೆ ಮಾತೃವಶ್ಯತಾಂ=ತಾಯಿಯ ಅಧೀನತ್ವರೂಪವಾದ ಧರ್ಮಂ=ಧರ್ಮವನ್ನು ಪ್ರದರ್ಶ್ಯ= ತೋರಿಸಿ ಏಕವತ್ಸ ಪಾಶಕಾಂತರಂ=ಒಂದು ಕರುವನ್ನು ಕಟ್ಟಲು ಬೇಕಾದ ಹಗ್ಗದ ಮಧ್ಯಭಾಗವನ್ನು ಗತಃ=ಹೊಂದಿದನು ಅಂದರೆ ಒಂದು ಕರುವನ್ನು ಕಟ್ಟಲು ಬೇಕಾಗುವ ಹಗ್ಗದಿಂದ ಬಂಧನವನ್ನು ಹೊಂದಿದನು. ಈಶ್ವರಃ=ಸ್ವಾಮಿಯಾದ ಶ್ರೀ ಕೃಷ್ಣನು ಸುರಾತ್ಮಜೌ=ಹಿಂದೆ ಕುಬೇರನ ಮಕ್ಕಳಾದ ದಿವಿಸ್ಪೃಶೌ=ಸಹಸ್ರಧನುಸ್ಸು ಪರಿಮಿತವಾದ ಎತ್ತರವಾದ ಪ್ರದೇಶವನ್ನು ಮುಟ್ಟುವ ಸೌ=ಆ ಪ್ರಸಿದ್ಧರಾದ ಯಮಾರ್ಜುನ್=ಯಮಳರಾದ ಸರಹ ವೃಕ್ಷಗಳನ್ನು ಬಭಂಜ = ಕಿತ್ತನು. ॥ ೧೮ ॥ ೧೯ ॥

ಪುರಾಧುನಿಶ್ಚಮುಸ್ತಥಾಪಿ ಪೂತನಾಸಮನ್ವಿತೌ ।
ಅನೋಕ್ಷ ಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ ॥
ತಯಾವರೋಽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ॥ ೨೦ ॥

ಪೂತನಾಸಮನ್ವಿತೌ=ಪೂತನಿಯೆಂಬ ರಾಕ್ಷಸಿಯಿಂದ ಕೂಡಿರುವ ಅನೋಕ್ಷ ಸಂಯುತೌ=ಶಕಟಾಕ್ಷನೆಂಬ ಅಸುರನಿಂದ ಕೂಡಿದ ಧುನಿಃ=ಧುನಿ ಎಂಬ ಅಸುರನು ತಥಾ=ಹಾಗೆಯೇ ಚಮುರಪಿ=ಚಮು ಎಂಬ ಅಸುರನೂ ಕೂಡ ಪುರಾ=ಹಿಂದೆ ಶಿವಾಂಪ್ರತಿ=ಪಾರ್ವತಿಯನ್ನು ಕುರಿತು ತಪಃ=ತಪಸ್ಸನ್ನು ಪ್ರಚಕ್ರತುಃ=ಮಾಡಿದರು. ತಯಾ=ಆ ಪಾರ್ವತಿಯಿಂದ ಚತುರ್ಷು ಚ=ನಾಲ್ವರಲ್ಲಿಯೂ ಕೂಡ ಅವಧ್ಯತಾವರಃ=ನಾಶರಾಹಿತ್ಯ ರೂಪವಾದ ವರವು ಪ್ರಯೋಜಿತಃ=ಕೊಡಲ್ಪಟ್ಟಿತು. ॥ ೨೦ ॥

ಅನಂತರಂ ತೃಣೋದ್ಭ್ರವಿಸ್ತಪೋಽಚರದ್ವರಂ ಚತವಮ್ ।
ಅವಾಪ ತೇ ತ್ರಯೋ ಹತಾಃ ಶಿಶುಸ್ವರೂಪ ವಿಷ್ಣುನಾ ॥ ೨೧ ॥

ಅನಂತರಂ=ಧುನ್ಯಾದಿಗಳು ವರವನ್ನು ಪಡೆದ ನಂತರ ತೃಣೋದ್ಭ್ರವಿಃ=ಹುಲ್ಲನ್ನು ಮೇಲಕ್ಕೆ ಹಾರಿಸುವುದರಿಂದ ತೃಣವರ್ತನೆಂಬ ಅಸುರನು ತಪಃ=ಪಾರ್ವತಿಯನ್ನು ಕುರಿತು ತಪಸ್ಸನ್ನು ಅಚರತ್=ಮಾಡಿದನು. ತಂ ವರಂಚ=ಆ ಅವಧ್ಯತ್ವ ರೂಪವಾದ ವರವನ್ನೂ ಕೂಡ ಅವಾಪ=ಹೊಂದಿದನು. ಶಿಶುಸ್ವರೂಪವಿಷ್ಣುನಾ=ಬಾಲಕನ ಸ್ವರೂಪದಂತೆ ಸ್ವರೂಪವುಳ್ಳ ಶ್ರೀಕೃಷ್ಣನಿಂದ ತೇತ್ರಯಃ=ಪೂತನಾ, ಶಟಕಾಕ್ಷ, ತೃಣಾವರ್ತರೆಂಬ ಮೂವರು ಹತಾಃ=ಕೊಲ್ಲಲ್ಪಟ್ಟರು. ॥ ೨೧ ॥

ಧುನಿಶ್ಚಮುಶ್ಚತೌ ತರೂ ಸಮಾಶ್ರಿತೌ ನಿಷೂದಿತೌ ।
ತರುಪ್ರ ಭಂಗತೋಽಮುನಾ ತರೂ ಚ ಶಾಪ ಸಂಭವೌ ॥ ೨೨ ॥

ಶಾಪ ಸಂಭವೌ=ನಾರದರ ಶಾಪದಿಂದ ಉತ್ಪತ್ತಿಯುಳ್ಳ ತರೂ=ನಲಕೂಬರ ಮಣಿಗ್ರೀವ ಸ್ವರೂಪರಾದ ವೃಕ್ಷಗಳು ನಿಷೂದಿತೌ=ಕೀಳಲ್ಪಟ್ಟವು. ಅಮುನಾ=ಈ ಶ್ರೀಕೃಷ್ಣನಿಂದ ತರುಪ್ರಭಂಗತಃ=ವೃಕ್ಷಗಳ ಕೀಳುವಿಕೆಯು ನಿಮಿತ್ತದಿಂದ ತರೂರೂ ಸಮಾಶ್ರಿತೌ=ಸರಳವೃಕ್ಷಗಳಲ್ಲಿ ಆಶ್ರಯಿಸಿಕೊಂಡಿರುವ ಧುನಿಃಚ ಮುಶ್ಚತೌ=ಧುನಿ ಮತ್ತು ಚಮು ಎಂಬ ಇಬ್ಬರು ದಾನವರು ನಿಷೂದಿತೌ=ಕೊಲ್ಲಲ್ಪಟ್ಟರು. ॥ ೨೨ ॥

ಪುರಾಹಿ ನಾರದಾಂತಿಕೇ ದಿಗಂಬರೌ ಶಶಾಪ ಸಃ ।
ಧನೇಶ ಪುತ್ರಕೌ ದ್ರುತಂ ತರುತ್ವಮಾಪ್ನುತಂತ್ವಿತಿ ॥ ೨೩ ॥

ಪುರಾ=ಹಿಂದೆ ಸಃ=ಆ ನಾರದರು ನಾರದಾಂತಿಕೇ=ನಾರದನಾದ ತನ್ನ ಸಮೀಪದಲ್ಲಿ ದಿಗಂಬರೌ=ವಸ್ತ್ರವನ್ನು ಪರಿತ್ಯಾಗ ಮಾಡಿದ ಧನೇಶಪುತ್ರಕೌ=ಕುಬೇರನ ಮಕ್ಕಳಾದ ನಲಕೂಬರ ಮಣಿಗ್ರೀವರನ್ನು ದ್ರುತಂ=ಕೂಡಲೇ ತು=ಬಹಳ ಕಾಲದವರೆಗೆ ತರುತ್ವಂ = ವೃಕ್ಷವಾಗಿರುವಿಕೆಯನ್ನು ಯುವಾಂ=ನೀವಿಬ್ಬರು ಆಪ್ನುತಂ=ಪೊಂದುವಿರಿ ಇತಿ=ಈ ರೀತಿಯಾಗಿ ಶಶಾಪ=ಶಾಪಕೊಟ್ಟರು. ॥ ೨೩ ॥

ತತೋಹಿ ತೌ ನಿಜಾಂ ತನುಂ ಹರೇಃ ಪ್ರಸಾದತಃ ಶುಭೌ ।
ಅವಾಪತುಃ ಸ್ತುತಿಂ ವಿಭೋರ್ವಿಧಾಯ ಜಗ್ಮತುರ್ಗೃಹಂ ॥ ೨೪ ॥

ತತಃ=ಅನಂತರ ತೌ=ಆ ನಲಕೂಬರ ಮಣಿಗ್ರೀವರು ಹರೇಃ = ಶ್ರೀಕೃಷ್ಣನ ಪ್ರಸಾದತಃ=ಅನುಗ್ರಹದಿಂದ ಶುಭೌ ಸಂತೌ=ಶಾಪದಿಂದ ಮುಕ್ತರಾಗಿ ನಿಜಾಂತನುಂ=ತಮ್ಮ ಮೂಲ ರೂಪವನ್ನು ಅವಾಪತುಃ=ಹೊಂದಿದರು. ವಿಭೋಃ=

ಸಮರ್ಥನಾದ ಶ್ರೀಕೃಷ್ಣನ ಸ್ತುತಿಂ = ಸ್ತೋತ್ರವನ್ನು ವಿಧಾಯ = ಮಾಡಿ ಗೃಹಂ = ತಮ್ಮ ದೇವತಾಸ್ಥಾನವನ್ನು ಜಗ್ಮತುಃ = ಹೊಂದಿದರು. ॥ ೨೪ ॥

ನಲಕೂಬರ ಮಣಿಗ್ರೀವೌ ಮೋಚಯಿತ್ವಾಚ ಶಾಪತಃ ।
ವಾಸುದೇವೋsಥ ಗೋಪಾಲೈರ್ವಿಸ್ಮಿತೈರಭಿವೀಕ್ಷಿತಃ ॥ ೨೫ ॥

ವಾಸುದೇವಃ = ಶ್ರೀಕೃಷ್ಣನು ನಲಕೂಬರಮಣಿಗ್ರೀವೌ = ನಲಕೂಬರ ಮಣಿಗ್ರೀವರನ್ನು ಶಾಪತಃ = ನಾರದರ ಶಾಪದಿಂದ ಮೋಚಯಿತ್ವಾ = ಬಿಡಿಸಿ ಅಥ = ಅವರು ಹೋದ ನಂತರ ವಿಸ್ಮಿತೈಃ = ಆಶ್ಚರ್ಯದಿಂದ ಕೂಡಿದ ಗೋಪಾಲೈಃ = ಗೋಪಾಲಕರಿಂದ ಅಭಿವೀಕ್ಷಿತಃ = ಕಾಣಿಸಿ ಕೊಳ್ಳಲ್ಪಟ್ಟನು. ॥ ೨೫ ॥

ವೃಂದಾವನಂ ಯಿಯಾಸುಃ ಸನ್ನಂದ ಸೂನುರ್ಬೃಹದ್ವನೇ ।
ಸಸರ್ಜ ರೋಮ ಕೂಪೇಭ್ಯೋ ವ್ಯಕಾನ್ ವಾಘ್ರಸಮಾನ್ಬಲೇ ॥ ೨೬ ॥

ನಂದಸೂನುಃ = ನಂದನ ಮಗನಾದ ಶ್ರೀಕೃಷ್ಣನು ವೃಂದಾವನಂ = ವೃಂದಾವನವೆಂಬ ಪ್ರದೇಶವನ್ನು ಯಿಯಾಸುಸ್ಸನ್ ಹೋಗಲಿಕ್ಕೆ ಇಚ್ಛೆ ಉಳ್ಳವನಾಗಿ ಬೃಹದ್ವನೇ = ಮಹಾವನದಲ್ಲಿ ರೋಮಂಕೂಪೇಭ್ಯಃ = ತನ್ನ ರೋಮಗಳ ರಂಧ್ರಗಳಿಂದ ಬಲೇ = ಸಾಮರ್ಥ್ಯ ವಿಷಯದಲ್ಲಿ ವ್ಯಾಘ್ರ ಸಮಾನ್ = ಹುಲಿಗಳಿಗೆ ಸದೃಶಗಳಾದ ವ್ಯಕಾನ್ = ತೋಳಗಳನ್ನು ಸಸರ್ಜ = ಸೃಷ್ಟಿ ಮಾಡಿದನು. ॥ ೨೬ ॥

ಅನೇಕ ಕೋಟಿಸಂಘೈ್ಟಸ್ತೈಃ ಪೀಡ್ಯಮಾನಾವ್ರಜಾಲಯಾಃ ।
ಯಯುರ್ವೃಂದಾವನಂ ನಿತ್ಯಾನಂದಮಾದಾಯ ನಂದಜಂ ॥ ೨೭ ॥

ಅನೇಕಕೋಟಿಸಂಘೈಃ = ಬಹುಕೋಟಿಗಳ ಸಮೂಹವುಳ್ಳ ತೈಃ = ಆ ತೋಳಗಳಿಂದ ಪೀಡ್ಯಮಾನಾಃ = ಪೀಡಿಸಿಕೊಳ್ಳಲ್ಪಡತಕ್ಕ ವ್ರಜಾಲಯಾಃ = ಗೋಕುಲದಲ್ಲಿ ಮಂದಿರವುಳ್ಳ ಗೋಪಾಲಕರು ನಿತ್ಯಾನಂದಂ = ಯಾವಾಗಲೂ ಸುಖವುಳ್ಳ ನಂದಜಂ = ನಂದಗೋಪನ ಮಗನಾದ ಕೃಷ್ಣನನ್ನು ಆದಾಯ = ಕರೆದುಕೊಂಡು ವೃಂದಾವನಃ = ವೃಂದಾವನವನ್ನು ಕುರಿತು ಯಯುಃ = ಹೋದರು. ॥ ೨೭ ॥

ಇಂದಿರಾಪತಿರಾನಂದಪೂರ್ಣೋ ವೃಂದಾವನೇ ಪ್ರಭುಃ ।
ನಂದಯಾಮಾಸ ನಂದಾದಿನುದ್ದಾಮತರ ಚೇಷ್ಟಿತೈಃ ॥ ೨೮ ॥

ಆನಂದಪೂರ್ಣಃ = ಸುಖದಿಂದ ತುಂಬಿರುವ ಪ್ರಭುಃ = ಸಮರ್ಥನಾದ ಇಂದಿರಾಪತಿಃ = ಲಕ್ಷ್ಮೀಪತಿಯಾದ ಶ್ರೀಕೃಷ್ಣನು ವೃಂದಾವನೇ = ವೃಂದಾವನದಲ್ಲಿ ಉದ್ದಾಮತರ ಚೇಷ್ಟಿತೈಃ = ಅತ್ಯುತ್ಕೃಷ್ಟಗಳಾದ ತನ್ನ ವ್ಯಾಪಾರಗಳಿಂದ ನಂದಾದೀನ್ = ನಂದಗೋಪನೇ ಮೊದಲಾಗಿ ಉಳ್ಳವರನ್ನು ನಂದಯಾಮಾಸ = ಸಂತೋಷ ಪಡಿಸಿದನು. ॥ ೨೮ ॥

ಸ ಚಂದ್ರತೋ ಹಸತ್ಕಾಂತ ವದನೇ ನೇಂದುವರ್ಚಸಾ ।
ಸಹಿತೋ ರೌಹಿಣೇಯೇನ ವತ್ಸಪಾಲೋ ಬಭೂವಹ ॥ ೨೯ ॥

ಚಂದ್ರತಃ = ಚಂದ್ರನನ್ನು ಹಸತ್ಕಾಂತವದನೇನ = ತಿರಸ್ಕರಿಸುವ ಮನೋಹರವಾದ ಮುಖವುಳ್ಳ ಇಂದುವರ್ಚಸಾ = ಚಂದ್ರನ ಕಾಂತಿಯಂತೆ ಕಾಂತಿಯುಳ್ಳ ರೌಹಿಣೇಯೇನ = ರೋಹಿಣಿಯ ಮಗನಾದ ಬಲರಾಮನಿಂದ ಸಹಿತಃ = ಯುಕ್ತನಾದ ಸಃ = ಆ ಶ್ರೀಕೃಷ್ಣನಂ ವತ್ಸಪಾಲಃ = ಕರುಗಳನ್ನು ಮೇಯಿಸತಕ್ಕವನು ಬಭೂವ = ಆದನು. ॥ ೨೯ ॥

ದೈತ್ಯಂ ಸ ವತ್ಸತನುಮುಪ್ರಮುಯಃಪ್ರಗೃಹ್ಯ ಕಂಸಾನುಗಂಹರವರಾದಪರೈರವಧ್ಯಂ ।
ಪ್ರಕ್ಷಿಪ್ಯ ವೃಕ್ಷಶಿರಸಿ ನ್ಯಹನದ್ಬಕೋsಪಿ ಕಂಸಾನುಗೋsಥ ವಿಭುಮುಚ್ಯುತಮಾಸಸಾದ ॥ ೩೦ ॥

ಅಪ್ರಮೇಯಃ=ಅನ್ಯರಲ್ಲಿ ಉತ್ತಮತ್ವ ಜ್ಞಾನವಿಲ್ಲದವನು ಮತ್ತು ಜ್ಞಾನರೂಪನಾದ ಸಃ=ಆ ಶ್ರೀಕೃಷ್ಣನು ಕಂಸಾನುಗಂ = ಕಂಸನ ಭೃತ್ಯನಾದ ಹರವರಾತ್ = ರುದ್ರನ ವರದಿಂದ ಅಪರೈಃ = ಇತರರಿಂದ ಅವಧ್ಯಂ=ಕೊಲ್ಲಲು ಅಶಕ್ಯನಾದ ವತ್ಸತನುಂ=ಕರುಗಳ ಶರೀರದಂತೆ ಶರೀರವುಳ್ಳ ದೈತ್ಯಂ=ವತ್ಸಾಸುರನೆಂಬ ದೈತ್ಯನನ್ನು ಪ್ರಗೃಹ್ಯ=ಹಿಂದಿನ ಕಾಲುಗಳನ್ನು ಹಿಡಿದು ವೃಕ್ಷಶಿರಸಿ=ಮರದ ಮೇಲಕ್ಕೆ ಪ್ರಕ್ಷಿಪ್ಯ=ಎಸೆದು ನ್ಯಹನತ್=ಕೊಂದನು ಅಥ=ಅನಂತರ ಕಂಸಾನುಗಃ = ಕಂಸನ ಭೃತ್ಯನಾದ ಬಕೋಪಿ=ಬಕಾಸುರನೂ ಕೂಡ ಅಚ್ಯುತಂ=ನಾಶರಹಿತನಾದ ವಿಭುಂ=ವ್ಯಾಪ್ತನಾದ ಶ್ರೀಕೃಷ್ಣನನ್ನು ಆಸಸಾದ=ಹೊಂದಿದನು. ॥ ೩೦ ॥

ಸ್ಕಂದ ಪ್ರಸಾದ ಕವಚಃ ಸ ಮುಖೇಚಕಾರ ಗೋವಿಂದಮಗ್ನಿವದಮುಂಪ್ರದಹಂತಮುಚ್ಚೈಃ ।
ಚಚ್ಛರ್ದ ತುಂಡಶಿರಸೈವನಿಹಂತುಮೇನಮಾಯಾಂತಮೀಕ್ಷ್ಯಜಗೃಹೇsಸ್ಯ ಸ ತುಂಡಮೀಶಃ ॥ ೩೧ ॥

ಸ್ಕಂದ ಪ್ರಸಾದ ಕವಚಃ = ಷಣ್ಮುಖನ ಅನುಗ್ರಹವೆಂಬ ಕವಚವುಳ್ಳ ಸಃ=ಆ ಬಕಪಕ್ಷಿರೂಪನಾದ ದೈತ್ಯನು ಗೋವಿಂದಂ=ವೇದಪ್ರತಿಪಾದ್ಯನಾದ ಶ್ರೀ ಕೃಷ್ಣನನ್ನು ಮುಖೇ = ಬಾಯಿಯಲ್ಲಿ ಚಕಾರ=ಮಾಡಿದನು. ಸಃ=ಆ ಬಕಾಸುರನು ಉಚ್ಚೈಃ = ಚೆನ್ನಾಗಿ ಅಗ್ನಿವತ್=ಬೆಂಕಿಯಂತೆ ಪ್ರದಹಂತಂ=ಸುಡತಕ್ಕ ಏನಂ=ಈ ಶ್ರೀ ಕೃಷ್ಣನನ್ನು ಚಚ್ಛರ್ದ=ವಾಂತಿ ಮಾಡಿದನು ಅಂದರೆ ಬಾಯಿಯಿಂದ ಹೊರಗೆ ಹಾಕಿದನು ಈಶಃ=ಸ್ವಾಮಿಯಾದ ಶ್ರೀಕೃಷ್ಣನು ತುಂಡಶಿರಸೈವ=ಕೊಕ್ಕಿನ ತುದಿಯಿಂದಲೇ ನಿಹಂತುಂ=ಕೊಲ್ಲಲು ಆಯಾಂತಂ=ಬರತಕ್ಕ ಏನಂ=ಈ ಬಕಾಸುರನನ್ನು ಈಕ್ಷ್ಯ=ನೋಡಿ ಅಸ್ಯ=ಈ ಬಕಾಸುರನ ತುಂಡಂ=ಕೊಕ್ಕನ್ನು ಜಗೃಹೇ=ಹಿಡಿದನು. ॥ ೩೧ ॥

ತುಂಡದ್ವಯಂ ಯದುಪತಿಃ ಕರಪಲ್ಲವಾಭ್ಯಾಂ ಸಂಗೃಹ್ಯಚಾಶುವಿದದಾರಹ ಪಕ್ಷಿದೈತ್ಯಂ ॥
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ಸಾಯಂಯಯೌ ವ್ರಜಭುವಂ ಸಹಿತೋsಗ್ರಜೇನ ॥ ೩೨ ॥

ಯದುಪತಿಃ=ಯಾದವರಿಗೆ ಸ್ವಾಮಿಯಾದ ಶ್ರೀಕೃಷ್ಣನು ಕರಪಲ್ಲವಾಭ್ಯಾಂ=ಚಿಗುರು ಎಲೆಗಳಂತಿರುವ ಕೋಮಲಗಳಾದ ಕೈಗಳಿಂದ ತುಂಡದ್ವಯಂ=ಎರಡು ಕೊಕ್ಕುಗಳನ್ನು ಸಂಗೃಹ್ಯ=ಹಿಡಿದು ಆಶು=ಕೂಡಲೇ ಪಕ್ಷಿದೈತ್ಯಂ=ಬಕಪಕ್ಷಿಯ ರೂಪವುಳ್ಳ ದೈತ್ಯನನ್ನು ವಿದದಾರ=ಸೀಳಿದನು ಕುಸುಮವರ್ಷಿಭಿಃ=ಪುಷ್ಪವೃಷ್ಟಿಯನ್ನು ಮಾಡತಕ್ಕ ಬ್ರಹ್ಮಾದಿಭಿಃ=ಬ್ರಹ್ಮನೇ ಮೊದಲಾಗಿ ಉಳ್ಳ ದೇವತೆಗಳಿಂದ ಈಡ್ಯಮಾನಃಸನ್=ಸ್ತೋತ್ರ ಮಾಡಿಸಿಕೊಳ್ಳಲ್ಪಡುವವನಾಗಿ ಸಾಯಂ = ಸಾಯಂಕಾಲದಲ್ಲಿ ಅಗ್ರಜೇನ=ಅಣ್ಣನಾದ ಬಲರಾಮನಿಂದ ಸಹಿತಃಸನ್=ಕೂಡಿದವನಾಗಿ ವ್ರಜಭುವಂ=ನಂದಗೋಕುಲವನ್ನು ಕುರಿತು ಯಯೌ=ಹೋದನು. ॥ ೩೨ ॥

ಏವಂ ಸ ದೇವವರವಂದಿತ ಪಾದಪದ್ಮೋ ಗೋಪಾಲಕೇಷುವಿಹರನ್ ಭುವಿಷಷ್ಠಮಬ್ದಂ ॥
ಪ್ರಾಪ್ತೋಗವಾಮಖಿಲ ಪೋsಪಿಸ ಪಾಲಕೋsಭೂತ್ ವೃಂದಾವನಾತರಗಸಾಂದ್ರಲತಾವಿತಾನೇ ॥ ೩೩ ॥

ಏವಂ=ಈ ರೀತಿಯಾಗಿ ದೇವ ವರವಂದಿತ ಪಾದಪದ್ಮಃ=ದೇವಶ್ರೇಷ್ಠರಾದ ಬ್ರಹ್ಮಾದಿಗಳಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕ ಕಮಲದಂತಿರುವ ಪಾದಗಳುಳ್ಳ ಸಃ = ಆ ಶ್ರೀಕೃಷ್ಣನು ಗೋಪಾಲಕೇಷು=ಗೋವುಗಳನ್ನು ರಕ್ಷಿಸುವ ಗೊಲ್ಲರಲ್ಲಿ ವಿಹರನ್ಸನ್=ಕ್ರೀಡಿಸುವವನಾಗಿ ಷಷ್ಠ=ಆರನೆಯ ಅಬ್ದಂ=ವರ್ಷವನ್ನು ಪ್ರಾಪ್ತಃ=ಹೊಂದಿದನು ಸಃ = ಆ ಶ್ರೀಕೃಷ್ಣನು ಅಖಿಲಪಃ ಅಪಿ=ಎಲ್ಲರನ್ನೂ ರಕ್ಷಿಸತಕ್ಕವನಾದರೂ ಕೂಡ ವೃಂದಾವನಾತರಗಸಾಂದ್ರಲತಾವಿತಾನೇ = ವೃಂದಾವನದ ಮಧ್ಯದಲ್ಲಿರುವ ನಿಬಿಡಗಳಾದ ಬಳ್ಳಿಗಳಿಂದ ವಿಸ್ತೀರ್ಣವಾದ ಪ್ರದೇಶದಲ್ಲಿ ಗವಾಂ=ಗೋವುಗಳ ಪಾಲಕಃ=ರಕ್ಷಕನು ಅಭೂತ್=ಆದನು ॥ ೩೩ ॥

ಜ್ಯೇಷ್ಠಂ ವಿಹಾಯ ಸ ಕದಾಚಿದಚಿಂತ್ಯಶಕ್ತಿರ್ಗೋಪಗೋಗಣಯುತೋ ಯಮುನಾತಟೇಷು ।
ರೇವೇಭವಿಷ್ಯದನುವೀಕ್ಷ್ಯ ಹಿ ಗೋಪ ದುಃಖಂ ತದ್ಭೋಧನಾಯ ನಿಜಮಗ್ರಜಮೇಷುಸೋsಧಾತ್ ॥ ೩೪ ॥

ಅಚಿಂತ್ಯಶಕ್ತಿಃ=ಇನ್ನೊಬ್ಬರಿಂದ ತಿಳಿಯಂಲಂ ಅಶಕ್ಯವಾದ ಸಾಮರ್ಥ್ಯವುಳ್ಳ ಸಃ=ಆ ಶ್ರೀಕೃಷ್ಣನು ಕದಾಚಿತ್=ಒಮ್ಮೆ ಜ್ಯೇಷ್ಠಂ=ಅಣ್ಣನಾದ ಬಲರಾಮನನ್ನು ವಿಹಾಯ=ಬಿಟ್ಟು ಗೋಗೋಪ ಗೋಗಣಯುತಃಸನ್=ಗೋವುಗಳನ್ನು ರಕ್ಷಿಸತಕ್ಕ ಗೊಲ್ಲರೂ, ಗೋವುಗಳ ಸಮೂಹವೂ ಇವುಗಳಿಂದ ಕೂಡಿದವನಾಗಿ ಯಮುನಾ ತಟೇಷು=ಯಮುನಾನದಿಯ ದಡಗಳಲ್ಲಿ ರೇಮೇ=ಕ್ರೀಡಿಸಿದನು. ಅಣ್ಣನನ್ನು ಬಿಟ್ಟು ಹೋದ ಕಾರಣವನ್ನು ಹೇಳುತ್ತಾರೆ. ಸಃ=ಆ ಕೃಷ್ಣನೆನ್ನು ಭವಿಷ್ಯತ್=ಮುಂದೆ ಉಂಟಾಗುವ ಗೋಪದುಃಖಿ=ಗೋಪಾಲರ ದುಃಖಿವನ್ನು ಅನುವೀಕ್ಷ್ಯ=ನೋಡಿ ತದ್ಬೋಧನಾಯ=ಆ ಗೊಲ್ಲರಿಗೆ ಶ್ರೀಕೃಷ್ಣನ ಸಾಮರ್ಥ್ಯವನ್ನು ತಿಳಿಸುವುದಕ್ಕೋಸ್ಕರ ಏಷು=ಈ ಗೊಲ್ಲರಲ್ಲಿ ಅಗ್ರಜಂ=ಅಣ್ಣನಾದ ಬಲರಾಮನನ್ನು ಅಧಾತ್=ಇಟ್ಟನಂ. ॥ ೩೪ ॥

ತಂ ಬ್ರಹ್ಮಣೋವರಬಲಾದುರಗಂತ್ವವಧ್ಯಂ ಸರ್ವೈರಾವಾರ್ಯ್ಯ ವಿಷವೀರ್ಯ್ಯಮೃತೇ ಸುಪರ್ಣಾತ್ ॥
ವಿಜ್ಞಾಯ ತದ್ವಿಷ ವಿಷೂದಿತ ವಾರಿಪಾನ ಸನ್ನಾನ್ಪಶೂನಪಿ ವಯಸ್ಯ ಜನಾನ್ ಸ ಆವೀತ್ ॥ ೩೫ ॥

ಸಃ=ಆ ಶ್ರೀಕೃಷ್ಣನು ಬ್ರಹ್ಮಣಃ=ಚತುರ್ಮುಖನ ವರಬಲಾತ್=ವರದಸಾಮರ್ಥ್ಯದಿಂದ ಸರ್ವೈಃ=ಎಲ್ಲರಿಂದಲೂ ಅವಧ್ಯಂ = ನಾಶರಹಿತನಾದ ಸುಪರ್ಣಾತ್=ಗರುಡನಿಂದ ಋತೇ=ಹೊರತು ಅವಾರ್ಯ್ಯವಿಷವೀರ್ಯ್ಯಂ=ತಡೆಯಲು ಅಸಾಧ್ಯವಾದ ವಿಷದ ಸಾಮರ್ಥ್ಯವುಳ್ಳ ಉರಗಂ=ಕಾಲಿಯ ನಾಗನನ್ನು ವಿಜ್ಞಾಯ=ಯಮುನಾ ಜಲದಲ್ಲಿರತಕ್ಕವನೆನ್ನಾಗಿ ತಿಳಿದು ತದ್ವಿಷವಿಷೂದಿತವಾರಿಪಾನಸನ್ನಾನ್=ಆ ಕಾಲಿಯನ ವಿಷದಿಂದ ದುಷ್ಟವಾದ ನೀರಿನ ಕುಡಿಯುವಿಕೆಯಿಂದ ಮೂರ್ಛಿತಗಳಾದ ಪಶುಂಗಳನ್ನೂ ವಯಸ್ಯ ಜನಾನಪಿ=ಸಮಾನವಯಸ್ಸುಳ್ಳ ಜನರನ್ನೂ ಕೂಡ ಆವೀತ್=ರಕ್ಷಿಸಿದನು. ॥ ೩೫ ॥

ತದ್ದೃಷ್ಟಿದಿವ್ಯಸುಧಯಾ ಸಹಸಾಭಿವೃಷ್ಟಾಃ ಸರ್ವೇsಪಿ ಜೀವಿತಮುವಾಪುರಥೋಚ್ಚ ಶಾಖಿಂ ।
ಕೃಷ್ಣಃ ಕದಂಬಮಧಿರುಹ್ಯ ತತೋsತಿ ತುಂಗಾದಾಸ್ಫೋಟ್ಯ ಗಾಢರಶ ನೋನ್ಯಪತದ್ವಿಷೋದೇ ॥ ೩೬ ॥

ತದ್ದೃಷ್ಟಿದಿವ್ಯಸುಧಯಾ = ಆ ಶ್ರೀಕೃಷ್ಣನ ದರ್ಶನವೆಂಬ ಅಲೌಕಿಕವಾದ ಅಮೃತದಿಂದ ಅಭಿವೃಷ್ಟಾಃ=ಅಭಿಷಿಕ್ತರಾದ ಸರ್ವೇಪಿ=ಎಲ್ಲಾ ಪಶುಗಳೂ ಗೊಲ್ಲರೂ ಕೂಡ ಸಹಸಾ=ಆಕಸ್ಮಿಕವಾಗಿ ಜೀವಿತಂ=ಜೀವನವನ್ನು ಅವಾಪುಃ=ಹೊಂದಿದರು. ಅಥೋ = ಅನಂತರ ಕೃಷ್ಣಃ=ಶ್ರೀಕೃಷ್ಣನು ಉಚ್ಚ ಶಾಖಿಂ=ಎತ್ತರಗಳಾದ ಗೆಲ್ಲುಗಳುಳ್ಳ ಕದಂಬಂ=ಕದಂಬವೆಂಬ ಮರವನ್ನು ಅಧಿರುಹ್ಯ=ಏರಿ ಗಾಢರಶನಸ್ಯನ್=ಧೃಢವಾದ ಕಟಬಂಧನವುಳ್ಳವನಾಗಿ ಆಸ್ಫೋಟ್ಯ=ಕೈಗಳಿಂದ ಭುಜಗಳನ್ನು ತಟ್ಟಿ ಅತಿತುಂಗಾತ್=ಅತ್ಯಂತ ಎತ್ತರವಾದ ತತಃ=ಆ ಕದಂಬ ವೃಕ್ಷದ ದೆಸೆಯಿಂದ ವಿಷೋದೇ=ವಿಷಮಿಶ್ರಿತವಾವ ಆ ನೀರಿನಲ್ಲಿ ನ್ಯಪತಕ್=ಹಾರಿದನು. ॥ ೩೬ ॥

ಸಾರ್ಪಹೃದಃ ಪುರುಷಸಾರನಿಪಾತವೇಗ ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ ॥
ಪರ್ಯಕ್ಪ್ಲುತೋವಿಷಕಷಾಯ ವಿಭೀಷಣೋರ್ಮಿಭೀಮೋಧನುಶ್ಶತಮನಂತ ಬಲಸ್ಯ ಕಿಂ ತತ್ ॥ ೩೭ ॥

ಪುರುಷಸಾರನಿಪಾತವೇಗ ಸಂಕ್ಷೋಭಿತೋರಗ ವಿಷೋಚ್ಛ್ವಸಿತಾಂಬುರಾಶಿಃ=ಪುರುಷ ಶ್ರೇಷ್ಠನಾದ ಶ್ರೀ ಕೃಷ್ಣನ ಹಾರುವಿಕೆಯ ವೇಗದಿಂದ ಚೆನ್ನಾಗಿ ಕಳವಳಗೊಂಡ ಸರ್ಪದ ವಿಷದಿಂದ ಮೇಲಕ್ಕೆ ಅಭಿವೃದ್ಧವಾದ ನೀರಿನ ಸಮೂಹವುಳ್ಳ ವಿಷಕಷಾಯಂ ವಿಭೀಷಣೋರ್ಮಿಭೀಮಃ=ವಿಷದ ಕುದಿಯುವಿಕೆಯಿಂದ ಭಯಂಕರಗಳಾದ ತೆರೆಗಳಿಂದ ಭಯವನ್ನುಂಟುಮಾಡತಕ್ಕ ಸಾರ್ಪಹೃದಃ=ಸರ್ಪದಿಂದ ಆಶ್ರಿತವಾದ ಯಮುನಾ ಮಡುವು ಧನುಶ್ಶತಂ=ನೂರು ಧನುಸ್ಸು ಪರ್ಯಂತರ ಅಂದರೆ 480 ಮೊಳದಷ್ಟು ಪರ್ಯಕ್ಪ್ಲುತಃ=ಸುತ್ತಲೂ ಮೇಲಕ್ಕೆ ಹಾರಿತು ಅನಂತ ಬಲಸ್ಯ=ಅಪರಿಮಿತ ಸಾಮರ್ಥ್ಯವುಳ್ಳ ಶ್ರೀಕೃಷ್ಣನಿಗೆ ತತ್=ನೂರು ಧನುಸ್ಸು ಪರ್ಯಂತರ ನೀರು ಹಾರಿತು ಎನ್ನುವುದು ಕಿಂ=ಏನು ಆಶ್ಚರ್ಯವು ನಾಲ್ಕು ಮೊಳಕ್ಕೆ ಒಂದು ದಂಡವು ಹನ್ನೆರಡು ದಂಡಗಳಿಗೆ ಒಂದು ಧನುಸ್ಸು ನೂರು ಧನುಸ್ಸುಗಳಿಗೆ 480 ಮೊಳಗಳು. ॥ ೩೭ ॥

ತಂಯಾಮುನ ಹ್ರದವಿಲೋಲಕನೂಪ್ಯನಾಗಃ ಕಾಲ್ಯೋನಿಜೈಃ ಸಮುದಶತ್ಯಹ ವಾಸುದೇವಂ॥
ಭೋಗೈರ್ಬಬಂಧ ಚ ನಿಜೇಶ್ವರಮೇನ ಮಜ್ಞಃ ಸೇಹೇತವಿಶಲುತಭಕ್ತಿಮತೋsಪರಾಧಂ ॥ ೩೮ ॥

ಕಾಲೋ್ಯನಾಗಃ = ಕಾಲಿಯ ಸರ್ಪನು ಯಾಮುನಹ್ರದವಿಲೋಲಕಂ=ಯಮುನಾ ಸಂಬಂಧಿಯಾದ ಮಡುವನ್ನು ಕದಡಿಸತಕ್ಕ ತಂ ವಾಸುದೇವಂ=ಆ ವಸುದೇವನ ಮಗನಾದ ಶ್ರೀಕೃಷ್ಣನನ್ನು ನಿಜೈಃ=ತನ್ನವರಾದ ಹಾವುಗಳಿಂದ ಸಹ= ಕೂಡಿಕೊಂಡು ಆಪ್ತ=ಹೊಂದಿ ಸಮದಶತ್=ಕಚ್ಚಿದನು. ಅಜ್ಞಃ=ಪರಮಾತ್ಮನೆಂಬ ಜ್ಞಾನವಿಲ್ಲದ ಕಾಲಿಯನು ನಿಜೇಶ್ವರಂ =ತನಗೆ ಸ್ವಾಮಿಯಾದ ಏನಂ=ಈ ಶ್ರೀಕೃಷ್ಣನನ್ನು ಭೋಗೈಃ=ತನ್ನ ಬಾಲ ಮೊದಲಾದ ಅವಯವಗಳಿಂದ ಬಬಂಧ=ಕಟ್ಟಿ ಹಾಕಿದನು ಈಶಃ ಉತ=ಸಮರ್ಥನಾದಾಗ್ಯೂ ಶ್ರೀಕೃಷ್ಣನು ಭಕ್ತಿಮತಃ=ಭಕ್ತಿಉಳ್ಳ ಕಾಲಿಯನ ಅಪರಾಧಂ=ಅಪರಾಧವನ್ನು ಸೇಹೇ=ಸಹಿಸಿದನು. ॥ ೩೮ ॥

ಉತ್ಪಾತವೀಕ್ಷ್ಯತುತದಾಖಿಲಗೋಪಸಂಘ ಸ್ತತ್ರಾಜಗಾಮ ಹಲಿನಾಪ್ರತಿಬೋದಿತೋsಪಿ ॥
ದೃಷ್ಟ್ವಾನಿಜಾಶ್ರಯಜನಸ್ಯ ಬಹೋಃ ಸುದುಃಖಂ ಕೃಷ್ಣಃ ಸ್ವಭಕ್ತಮಪಿನಾಗಮಮುಂ ಮಮರ್ದ ॥೩೯ ॥

ಹಲಿನಾ=ಹಲಾಯುಧವುಳ್ಳ ಬಲರಾಮನಿಂದ ಪ್ರತಿಬೋಧಿತೋಪಿ = ಶ್ರೀಕೃಷ್ಣನ ಸಾಮರ್ಥ್ಯವನ್ನು ಹೇಳಿ ತಿಳಿಸಲ್ಪಟ್ಟರೂ ಕೂಡ ಅಖಿಲಗೋಪಸಂಘಃ ಎಲ್ಲಾ ಗೋಪರ ಸಮುದಾಯವು ತದಾ = ಆಗ ಉತ್ಪಾತಂ = ಅನಿಷ್ಟವನ್ನು ಈಕ್ಷ್ಯ = ನೋಡಿ ತತ್ರಂ = ಆ ಸರ್ಪವಿದ್ದ ಸ್ಥಳಕ್ಕೆ ಆ ಜಗಾಮ = ಬಂದಿತು. ಕೃಷ್ಣಃ = ಶ್ರೀಕೃಷ್ಣನಂ ಬಹೋಃ=ಬಹಳ ಸಂಖ್ಯೆಉಳ್ಳ ನಿಜಾಶ್ರಯಸ್ಯ=ತನ್ನನ್ನು ಆಶ್ರಯಿಸಿರುವ ಭಕ್ತ ಜನದ ಸುದುಃಖಂ = ಬಹುದುಃಖವನ್ನು ದೃಷ್ಟ್ವಾ = ನೋಡಿ ಸ್ವಭಕ್ತಮಪಿ = ತನ್ನ ಭಕ್ತನಾದರೂ ಕೂಡ ಅಮುಂನಾಗಂ=ಈ ಕಾಲಿಯನನ್ನು ಮಮರ್ದ=ಮರ್ದಿಸಿದನು. ॥ ೩೯ ॥

ತಸ್ಯೋನ್ನತೇಷು ಸಫಣೇಷು ನನರ್ತಕೃಷ್ಣೋ ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ।
ಆತೋರ್ಮುಖೈರುರುವಮನ್ ರುಧಿರಂಸನಾಗೋ ನಾರಾಯಣಂ ತಮರಣಂ ಮನಸಾ ಜಗಾಮ ॥೪೦॥

ಕುಸುಮವರ್ಷಿಭಿಃ=ಪುಷ್ಪವೃಷ್ಟಿಯನ್ನು ಮಾಡತಕ್ಕ ಬ್ರಹ್ಮಾದಿಭಿಃ=ಬ್ರಹ್ಮನೇ ಮೊದಲಾಗಿ ಉಳ್ಳ ದೇವತೆಗಳಿಂದ ಈಡ್ಯಮಾನಃ =ಸ್ತೊತ್ರಮಾಡಿಸಿ ಕೊಳ್ಳಲ್ಪಡತಕ್ಕ ಸಃ ಕೃಷ್ಣ=ಆ ಶ್ರೀಕೃಷ್ಣನು ತಸ್ಯ=ಆ ಕಾಲಿಯನ ಉನ್ನತೇಷು=ಎತ್ತರಗಳಾದ ಫಣೇಷು= ಹೆಡೆಗಳಲ್ಲಿ ನನರ್ತ=ಕುಣಿದನು. ಸನಾಗಃ=ಆ ಕಾಲಿಯನು ಆರ್ತಃಸನ್=ದುಃಖಿತನಾಗಿ ಮುಖೈಃ=ವದನಗಳಿಂದ ಉರು=ಬಹಳವಾದ ರುಧೀರಂ=ರಕ್ತವನ್ನು ವಮನ್ಸನ್ = ವಾಂತಿ ಮಾಡತಕ್ಕವನಾಗಿ ತಂ ನಾರಾಯಣಂ=ಭಕ್ತರಕ್ಷಕನೆಂದು ಪ್ರಸಿದ್ಧನಾದ ಆ ಗುಣಪೂರ್ಣನಾದ ಹರಿಯನ್ನು ಮನಸಾ=ಮನಸ್ಸಿನಿಂದ ಅರಣಂ=ಮೊರೆಯನ್ನು ಜಗಾಮ ಹೊಂದಿದನು. ॥ ೪೦ ॥

ತಚ್ಛಿತ್ರತಾಂಡವ ವಿರುಗ್ಣ ಫಣೌತಪತ್ರಂ ರಕ್ತಂ ವಮಂತ ಮುರುಸನ್ನಧಿಯಂ ನಿತಾಂ ತಂ ।
ದೃಷ್ಟ್ವಾ ಹಿ ರಾಜವುಪಸೇದುರಮುಷ್ಯಪತ್ನ್ಯೋ ನೇಮುಶ್ಚ ಸರ್ವಜಗದಾದಿಗುರುಂಭುವೀಶಂ ॥ ೪೧ ॥

ಅಮುಷ್ಯ=ಈ ಕಾಲಿಯನ ಪತ್ನ್ಯಃ = ಹೆಂಡಂದಿರು ತಚ್ಚಿತ್ರ ತಾಂಡವ ವಿರುಗ್ಣಫಣೌತಪತ್ರಂ = ಆ ಶ್ರೀ ಕೃಷ್ಣನ ಆಶ್ಚರ್ಯಕರವಾದ ನರ್ತನದಿಂದ ಭಗ್ನಗಳಾದ ಫಣಗಳೆಂಬ ಛತ್ರವುಳ್ಳ ಉರು = ಬಹಳವಾಗಿ ರಕ್ತಂ= ರಕ್ತವನ್ನು ವಮಂತಂ ವಾಂತಿ ಮಾಡತಕ್ಕ ನಿತಾಂ ತಂ = ಚೆನ್ನಾಗಿ ಸನ್ನಿಧಿಯಂ = ನಷ್ಟವಾದ ಬುದ್ಧಿಯುಳ್ಳ ಅಹಿರಾಜಂ = ಸರ್ಪರಾಜನನ್ನು ದೃಷ್ಟ್ವಾ = ನೋಡಿ ಉಪಸೇದು = ಕೃಷ್ಣನ ಸವಿೂಪವನ್ನು ಹೊಂದಿದರು. ಅಮುಷ್ಯ ಪತ್ನ್ಯ = ಕಾಲಿಯನ ಹೆಂಡಂದಿರು ಸರ್ವಜಗದಾದಿಗುರುಂ = ಎಲ್ಲಾ ರುದ್ರಾದಿ ಜಗತ್ತಿಗೆ ಉತ್ಪಾದಕನಾದ ಬ್ರಹ್ಮನಿಗೆ ಗುರುವಾದ ಈಶಂ = ಸ್ವಾಮಿಯಾದ ಶ್ರೀಕೃಷ್ಣನನ್ನು ಭುವಿನೇಮುಃ = ಭೂಮಿಯಲ್ಲಿ ಸಾಷ್ಟಾಂಗ ನಮಸ್ಕರಿಸಿದರು. ॥ ೪೧ ॥

ದುರ್ಘಟಾರ್ಥಪ್ರಕಾಶಿಕಾಃ– ಎಲ್ಲಾ ಜಗತ್ತಿಗೆ ಮೂಲಗುರುವಾದ ದುಷ್ಟನಿಗ್ರಹಕ್ಕೋಸ್ಕರ ಭೂಮಿಯಲ್ಲಿ ಅವತರಿಸಿದ ಸ್ವಾಮಿಯಾದ ಶ್ರೀಕೃಷ್ಣನನ್ನು ನಮಸ್ಕರಿಸಿದರು. ದುಷ್ಟನಿಗ್ರಹಾರ್ಹಂ ಎಂಬ ಶಬ್ದವನ್ನು ಅಧ್ಯಾಹಾರ ಮಾಡಿ ಅರ್ಥ ಬರೆದಿರುತ್ತಾರೆ.

ತಾಭಿಸ್ತುತಸ್ಯಭಗವಾನಮುನಾಚ ತಸ್ಮೈ ದತ್ವಾಭಯಂ ಯಮು ಸಹೋದರ ವಾರಿತೋsಮುಂ ।
ಉತ್ಸೃಜ್ಯ ನಿರ್ವಿಷಜಲಾಂ ಯಮುನಾಂ ಚಕಾತ ಸಂಸ್ತ್ಯಾಯ ಮಾನ ಚರಿತಃ ಸುರಸಿದ್ಧ ಸಾಧ್ಯೈಃ ॥೪೨॥

ತಾಭಿಃ=ಆ ನಾಗಪತ್ನಿಯರಿಂದ ಅಮುನಾಚ=ಈ ಕಾಲಿಯನಿಂದಲೂ ಕೂಡ ಸ್ತುತಃ=ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಸ ಭಗವಾನ್=ಆ ಶ್ರೀಕೃಷ್ಣನು ತಸ್ಮೈ =ಆ ಕಾಲಿಯನಿಗೋಸ್ಕರ, ಅಭಯಂ = ಗರುಡನಿಂದ ನಿನಗೆ ಭಯವಿಲ್ಲವೆಂಬುದಾಗಿ ಅಭಯವನ್ನು ದತ್ವಾ = ಕೊಟ್ಟು ಸುರಸಿದ್ಧಸಾಧ್ಯೈಃ = ದೇವತೆಗಳೂ, ಸಿದ್ಧರೂ, ಸಾಧ್ಯರೂ ಇವರಿಂದ ಸಂಸ್ತುತಃ ಮಾನಚರಿತಃಸನ್ = ಚೆನ್ನಾಗಿ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟ ಕರ್ಮ ಉಳ್ಳವನಾಗಿ ಅಮುಂ = ಈ ಕಾಲಿಯನನ್ನು ಯಮುನಾ ಸಹೋದರ ವಾರಿತಃ = ಯಮುನ ತಂಗಿಯಾದ ಯಮುನಾ ನದಿಯ ನೀರಿನಿಂದ ಉತ್ಸೃಜ್ಯ = ಹೊರಡಿಸಿ ಯಮುನಾಂ = ಯಮುನಾನದಿಯನ್ನು ನಿರ್ವಿಷಜಲಾಂ = ವಿಷವಿಲ್ಲದ ನೀರುಳ್ಳದ್ದನ್ನಾಗಿ ಚಕಾರ = ಮಾಡಿದನು. ॥ ೪೨ ॥

ಗೋಪೈರ್ಬಲಾದಿ ಭಿರುದೀರ್ಣತರಪ್ರಮೋದೈಃ ಸಾರ್ಧಂ ಸಮೇತ್ಯ ಭಗವಾನರವಿಂದನೇತ್ರಃ ।
ತಾಂ ರಾತ್ರಿಮತ್ರನಿವಸನ್ನಮುನಾ ತಟೇಸ ದಾವಾಗ್ನಿಮುದ್ಧತಬಲಂ ಚ ಪಪೌವ್ರಜಾರ್ಥೇ ॥ ೪೩ ॥

ಅರವಿಂದ ನೇತ್ರಃ = ಕಮಲದಂತೆ ಕಣ್ಣುಗಳುಳ್ಳ ಭಗವಾನ್ = ಪಡ್ಗುಣೈಶ್ವರ್ಯ ಸಂಪನ್ನರಾದ ಸಃ = ಆ ಕೃಷ್ಣನು ಉದೀರ್ಣತರ ಪ್ರಮೋದೈಃ = ಅತ್ಯುತ್ಕೃಷ್ಟವಾದ ಸಂತೋಷ ಉಳ್ಳ ಬಲಾದಿಭಿಃ = ಬಲರಾಮನೇ ಮೊದಲಾಗಿ ಉಳ್ಳ ಗೋಪೈಃ = ಗೋಪಾಲಕರಿಂದ ಸಾರ್ಧಂ = ಕೂಡಿಕೊಂಡು ಸಮೇತ್ಯ = ದಡವನ್ನು ಹೊಂದಿ ಅತ್ರ = ಈಯಮುನಾ ತೀರದಲ್ಲಿ ತಾಂರಾತ್ರಿಂ = ಆ ರಾತ್ರಿಯಲ್ಲಿ ನ್ಯವಸನ್ಸನ್ = ವಾಸಮಾಡತಕ್ಕವನಾಗಿ ಯಮುನಾತಟೇ = ಯಮುನೆಯ ತೀರದಲ್ಲಿ ಉದ್ಧತಬಲಂ = ಅತಿಶಯಿತ ಸಾಮರ್ಥ್ಯವುಳ್ಳ ಅಂದರೆ ವ್ಯಾಪ್ತವಾದ ದಾವಾಗ್ನಿಂ = ಕಾಡುಕಿಚ್ಚನ್ನು ವ್ರಜಾರ್ಥೇ= ನಂದಗೋಕುಲದ ರಕ್ಷಣೆಗೋಸ್ಕರ ಪಪೌ = ಪಾನ ಮಾಡಿದನು. ॥ ೪೩ ॥

ಇತ್ಥಂ ಸುರಾ ಸುರ ಗಣೈರವಿಚಿಂತ್ಯದಿವ್ಯಕರ್ಮಾಣಿ ಗೋಕುಲಗತೇsಗಣಿತೋರುಶಕ್ತೌ ।
ಕುರ್ವತ್ಯಜೇ ವ್ರಜ ಭುವಾಮಭವದ್ವಿನಾಶ ಉಗ್ರಾಭಿಧಾದಸುರತಸ್ತರುರೂಪತೋsಲಂ ॥ ೪೪ ॥

ತದ್ಗಂಧತೋ ನೃಪಶುಮುಖ್ಯಸಮಸ್ತ ಭೂತಾನ್ಯಾಪುರ್ಮೃತಿಂಬಹಲರೋಗನಿಪೀಡಿತಾನಿ ।
ಧಾತುರ್ವರಾಜ್ಜಗದಭಾವಕೃತೈಕಬುದ್ಧಿರ್ವಧ್ಯೋನಚಿದಸೌತರುರೂಪದೈತ್ಯಃ ॥ ೪೫ ॥

ಇತ್ಥಂ = ಈ ರೀತಿಯಾಗಿ ಗೋಕುಲಗತೇ = ಗೋಕುಲದಲ್ಲಿರತಕ್ಕ ಅಗಣಿತೋರುಶಕ್ತೌ = ಅಪರಿಮಿತಗಳಾದ ಉತ್ಕೃಷ್ಟ ಸಾಮರ್ಥ್ಯವುಳ್ಳ ಅಜೇ = ಉತ್ಪತ್ತಿ ಇಲ್ಲದ ಶ್ರೀಕೃಷ್ಣನು ಸುರಾಸುರಗಣೈಃ = ದೇವತೆಗಳೂ ದೈತ್ಯರೂ ಇವರ ಸಮೂಹಗಳಿಂದ ಅವಿಚಿಂತ್ಯ ದಿವ್ಯಕರ್ಮಾಣಿ = ಚಿಂತಿಸಲೂ ಅಶಕ್ಯಗಳಾದ ಅಲೌಕಿಕಗಳಾದ ಕೆಲಸಗಳನ್ನು ಕುರ್ವತಿ ಸತಿ = ಮಾಡುತ್ತಿರಲು ತರುರೂಪತಃ = ವೃಕ್ಷ ಸ್ವರೂಪವುಳ್ಳ ಉಗ್ರಾಭಿಧಾತ್ = ಉಗ್ರನೆಂದು ಹೆಸರುಳ್ಳ ಅಸುರತಃ = ದೈತ್ಯನಿಂದ ವ್ರಜಭುವಾಂ = ನಂದಗೋಕುಲದಲ್ಲಿರುವ ಎಲ್ಲಾ ಪ್ರಾಣಿಗಳಿಗೂ ಅಲಂ = ಚೆನ್ನಾಗಿ ವಿನಾಶಃ = ನಾಶವು ಅಭವತ್ = ಉಂಟಾಯಿತು. ॥ ೪೪ ॥

ನಾಶದ ರೀತಿಯನ್ನು ಹೇಳುತ್ತಾರೆ.

ಬಹಲರೋಗನಿಪೀಡಿತಾನಿ = ಅನೇಕ ವಿಧ ರೋಗಗಳಿಂದ ಪೀಡಿಸಲ್ಪಟ್ಟ ನೃಪಶಂ ಮುಖ್ಯ ಸಮಸ್ತಭೂತಾನಿ = ಮನುಷ್ಯರೂ ಪಶುಗಳೇ ಪ್ರಧಾನವಾಗಿ ಉಳ್ಳ ಎಲ್ಲಾ ಪ್ರಾಣಿಗಳೂ ತದ್ಗಂಧತಃ = ಆ ವೃಕ್ಷದ ಪರಿಮಳದಿಂದ ಮೃತಿಂ = ಮರಣವನ್ನು ಆಪುಃ = ಹೊಂದಿದವು. ಧಾತುಃ ಬ್ರಹ್ಮನ, ವರಾತ್ = ವರದಿಂದ ಜಗದಭಾವಕೃತೈಕಬುದ್ಧಿಃ=ಜಗತ್ತಿನ ನಾಶದಲ್ಲಿ ಮಾಡಲ್ಪಟ್ಟ ನಿಶ್ಚಿತ ಬುದ್ಧಿ ಉಳ್ಳ ಅಸೌ = ತರುರೂಪದೈತ್ಯಃ = ಈ ವೃಕ್ಷಸ್ವರೂಪವುಳ್ಳ ಉಗ್ರಾಸುರನು ಕೇನಚಿತ್ = ಯಾವನಿಂದಲೂ ವಧ್ಯೋನ = ಕೊಲ್ಲಲು ಯೋಗ್ಯನಲ್ಲ. ॥ ೪೫ ॥

ಸಂಕರ್ಷಣೇsಪಿ ತದುದಾರವಿಷಾನುವಿಷ್ಟೇ ಕೃಷ್ಣೋನಿಜ ಸ್ಪರ್ಶತಸ್ತಮಪೇತ ರೋಗಂ ।
ಕೃತ್ವಾ ಬಭಂಜ ವಿಷ ವೃಕ್ಷಮಮುಂ ಬಲೇನ ತಸ್ಯಾನು ಗೈಃ ಸಹ ತದಾಕೃತಿಭಿಃ ಸಮಸ್ತೈಃ ॥ ೪೬ ॥

ಸಂಕರ್ಷಣೋಪಿ = ಬಲರಾಮನೂ ಕೂಡ, ತದುದಾರವಿಷಾನುವಿಷ್ಟೋಸತಿ = ಆ ವಿಷ ವೃಕ್ಷದ ಉತ್ಕೃಷ್ಟ ವಿಷದಿಂದ ಪ್ರವಿಷ್ಟನಾಗುತ್ತಿರಲು ಕೃಷ್ಣಃ = ಶ್ರೀಕೃಷ್ಣನು ನಿಜ ಸ್ಪರ್ಶತಃ = ತನ್ನ ಆಲಿಂಗನದಿಂದ ತಂ=ಆ ಬಲರಾಮನನ್ನು ಅಪೇತ ರೋಗಂ—ಹೋಗಲ್ಪಟ್ಟ ವಿಷದಿಂದ ಉಂಟಾದ ರೋಗವುಳ್ಳವನನ್ನಾಗಿ ಕೃತ್ವಾ = ಮಾಡಿ ತದಾಕೃತಿಭಿಃ = ಆ ವೃಕ್ಷದ ಆಕಾರ ವುಳ್ಳ ಸಮಸ್ತೈಃ=ಎಲ್ಲಾ ತಸ್ಯಾನುಗೈಃ ಆ ಉಗ್ರಾಸುರನ ಭೃತ್ಯದಿಂದ ಸಹ=ಕೂಡಿಕೊಂಡು ಬಲೇನ = ಸಾಮರ್ಥ್ಯದಿಂದ ಯುಕ್ತಂ=ಕೂಡಿದ ವಿಷವೃಕ್ಷಂ = ವಿಷವುಳ್ಳ ಮರದ ಸ್ವರೂಪನಾದ ಅಮುಂ = ಈ ಉಗ್ರಾಸುರನನ್ನು ಬಭಂಜ = ಕೊಂದನು. ॥ ೪೬ ॥

ದೈತ್ಯಾಂಶ್ಚ ಗೋವಪುಷ ಆತ್ತವರಾನ್ವಿರಿಂಚಾತ್ ಮೃತ್ಯೂಜ್ಜಿತಾನಪಿನಿಪಾತ್ಯದದಾಹವೃಕ್ಷಾನ್ ।
ವಿಕ್ರೀಡ್ಯರಾಮಸಹಿತೋ ಯಮುನಾ ಜಲೇಸ ವೀರೋಗವನಾಶುಕೃತವಾನ್ ವ್ರಜಮಬ್ಜನಾಭಃ ॥ ೪೭ ॥

ವಿರಿಂಚಾತ್=ಬ್ರಹ್ಮನಿಂದ ಆತ್ತವರಾನ್=ಹೊಂದಲ್ಪಟ್ಟ ವರವುಳ್ಳ ಮೃತ್ಯೂಜ್ಜಿತಾನ್=ಮರಣರಹಿತರಾದ ಗೋವಪುಷಃ=ಗೋವಿನ ಸ್ವರೂಪವುಳ್ಳ ದೈತ್ಯಾನ್=ದೈತ್ಯರನ್ನೂ ವೃಕ್ಷಾಂಚ=ಮರಗಳನ್ನೂ ಕೂಡ ನಿಪಾತ್ಯ=ಕೆಡವಿ ದದಾಹ=ಸುಟ್ಟನು. ಅಬ್ಜನಾಭಃ=ಕಮಲವು ನಾಭಿಯಲ್ಲಿ ಉಳ್ಳ ಸಃ=ಆ ಕೃಷ್ಣನು ಯಮುನಾಜಲೇ=ಯಮುನಾ ನದಿಯ ನೀರಿನಲ್ಲಿ ರಾಮಸಹಿತಃಸನ್=ಬಲರಾಮನಿಂದ ಕೂಡಿದವನಾಗಿವಿಕ್ರೀಡ್ಯವಿಹರಿಸಿ ವ್ರಜಂ=ನಂದಗೋಕುಲವನ್ನು ಆಶು= ಕೂಡಲೇ ನೀರೋಗಂ—ರೋಗವಿಲ್ಲದ್ದನ್ನಾಗಿ ಕೃತವಾನ್=ಮಾಡಿದನು. ॥ ೪೭ ॥

ಸಪ್ತೋತ್ಕ್ಷಣೋತಿ ಬಲವೀರ್ಯಯುತಾನದಮ್ಯಾನ್ ಸರ್ವೈರ್ಗಿರೀಶವರತೋದಿತಿಜಪ್ರಧಾನಾನ್ ।
ಹತ್ವಾ ಸುತಾಮಲಭದಾಶು ವಿಭುರ್ಯಶೋದಾ ಭ್ರಾತುಃ ಸ ಕುಂಭ ಕಸಮಾಹ್ವಯಿನೋsಪಿನೀಲಾಂ ॥ ೪೮ ॥

ವಿಭುಃ=ವ್ಯಾಪ್ತನಾದ ಸಃ=ಆ ಶ್ರೀಕೃಷ್ಣನು ಗಿರೀಶವರತಃ=ರುದ್ರನ ವರದಿಂದ ಸರ್ವೈಃ=ಎಲ್ಲರಿಂದಲೂ ಅದಮ್ಯಾನ್=ನಿಗ್ರಹ ಮಾಡಲು ಅಶಕ್ಯಗಳಾದ ಅತಿಬಲವೀರ್ಯಯುತಾನ್=ಅತ್ಯಂತ ಸಾಮರ್ಥ್ಯ ಪರಾಕ್ರಮಗಳಿಂದ ಕೂಡಿದ ದಿತಿಜಪ್ರಧಾನಾನ್=ದೈತ್ಯಶ್ರೇಷ್ಠನಾದ ಸಪ್ತ=ಏಳು ಸಂಖ್ಯಾಕಗಳಾದ ಉತ್ಕ್ಷಣಃ = ಎತ್ತುಗಳನ್ನು ಹತ್ವಾ=ಕೊಂದು ಯಶೋದಾಭ್ರಾತುಃ=ಯಶೋದೆಯ ಸಹೋದರನಾದ ಕಂಭಕಸಮಾಹ್ವಯಿನಃ=ಕುಂಭಕನೆಂದು ಹೆಸರುಳ್ಳ ಗೋಪಾಲಕನ ಸುತಾಂ = ಮಗಳಾದ ನೀಲಾಂ=ನೀಲಾದೇವಿಯನ್ನು ಆಶು=ಕೂಡಲೇ ಅಲಭತ್=ಹೊಂದಿದನು. ॥ ೪೮ ॥

ಯಾ ಪೂರ್ವಜನ್ಮನಿ ತಪಃ ಪ್ರಥಮೈವ ಭಾರ್ಯಾಭೂಯಾಸಮಿತ್ಯಜರದಸ್ಯ ಹಿ ಸಂಗಮೋಮೇ ।
ಸ್ಯಾತ್ಕೃಷ್ಣ ಜನ್ಮನಿ ಸಮಸ್ತ ವರಾಂಗನಾಭ್ಯಃ ಪೂರ್ವಂತ್ವಿತಿಸ್ಮ ತದಿಮಾಂಪ್ರಥಮಂ ಸಆಪ ॥ ೪೯ ॥

ಯಾ=ಯಾವ ನೀಲೆಯಂ ಹಿ=ಯಾವ ಕಾರಣದಿಂದ ಪೂರ್ವಜನ್ಮನಿ=ಹಿಂದಿನ ಜನ್ಮದಲ್ಲಿ ಅಸ್ಯ=ಈ ಶ್ರೀಕೃಷ್ಣನಿಗೆ ಪ್ರಥಮೈವಭಾರ್ಯಾ=ಮೊದಲಿನ ಹೆಂಡತಿಯು ಭೂಯಾಸಂ=ಆಗುವೆನು. ಇತಿ=ಎಂದು ತಪಃ=ತಪಸ್ಸನ್ನು ಅಚರತ್=ಮಾಡಿದಳೋ ಕೃಷ್ಣಜನ್ಮನಿ=ಕೃಷ್ಣಾವತಾರದಲ್ಲಿ ಸಮಸ್ತವರಾಂಗನಾಭ್ಯಃ=ಎಲ್ಲಾ ರುಗ್ಮಿಣ್ಯಾದಿಉತ್ತಮಸ್ತ್ರೀಯರಿಂದ ಪೂರ್ವಂ=ಮೊದಲೇ ಮೇ=ನನಗೆ ಸಂಗಮಃ=ಕೃಷ್ಣನ ಸಂಗವು ಸ್ಯಾ=ವಿಶೇಷಾಕಾರವಾಗಿ ಸ್ಯಾತ್=ಆಗತಕ್ಕದ್ದು. ಇತಿ=ಎಂಬುದಾಗಿಯೂ ತಪಃ=ಅಚರತ್=ತಪಸ್ಸನ್ನು ಮಾಡಿದಳೋ ತತ್=ಆ ಕಾರಣದಿಂದ ಸಃ=ಆ ಶ್ರೀಕೃಷ್ಣಂ ಪ್ರಥಮಂ=ಎಲ್ಲಾ ಸ್ತ್ರೀಯರಿಂದಲೂ ಮೊದಲೇ ಇಮಾಂ=ಈ ನೀಲಾದೇವಿಯನ್ನು ಆಪ=ಹೊಂದಿದನು. ॥ ೪೯ ॥

ಅಗ್ರೇದ್ವಿಜತ್ವತ ಉಪಾವಹದೇಷ ನೀಲಾಂ ಗೋಪಾಂಗನಾ ಅಪಿ ಪುರಾವರ ಮಾಪಿರಿಯತ್ ।
ಸಂಸ್ಕಾರತಃ ಪ್ರಥಮಮೇವ ಸುಸಂಗಮೋನೋ ಭೂಯಾತ್ತವೇತಿಪರಮಾಪ್ಯರಸಃ ಪುರಾಯಾಃ ॥ ೫೦ ॥

ಯತ್=ಯಾವ ಕಾರಣದಿಂದ ಯಾಃ=ಯಾವ ಪುರಾ=ಹಿಂದೆ ಪರಮಾಪ್ಸರಸಃ=ಉತ್ತಮ ಅಪ್ಸರ ಸ್ತ್ರೀಯರೋ ತಾಃ=ಆದಾವ ಗೋಪಾಂಗನಾಅಪಿ = ಗೋಪ ಸ್ತ್ರೀಯರೂ ಕೂಡ ಸಂಸ್ಕಾರತಃ=ಉಪನಯನ ಸಂಸ್ಕಾರದಿಂದ ಪ್ರಥಮಂ ಮೇವ=ಮೊದಲೇ ತವ=ನಿನ್ನ ಸಂಸಂಗಮಃ=ಶೋಭನ ಸಂಬಂಧವು ನಃ=ನಮಗೆ ಭೂಯಾತ್=ಆಗಲಿ ಇತಿ=ಎಂಬುದಾಗಿ

ಭಗವತಃ ಸಕಾಶಾತ್=ಪರಮಾತ್ಮನ ದೆಸೆಯಿಂದ ವರಂ=ವರವನ್ನು ಆಪಿರೇ=ಹೊಂದಿರುವರೋ ತಸ್ಮಾತ್=ಆ ಕಾರಣದಿಂದ ದ್ವಿಜತ್ವತಃ=ಉಪನಯನದಿಂದ ಅಗ್ರೇ=ಮೊದಲು ಏಷಃ=ಶ್ರೀಕೃಷ್ಣನು ನೀಲಾಂ=ನೀಲಾದೇವಿಯನ್ನು ಉಪಾವಹತ್=ಮದುವೆ ಮಾಡಿಕೊಂಡನಂ. ॥ ೫೦ ॥

ತತಾಪ್ರಭಕೃಷ್ಣಮವದನ್ ಸ ಬಲಂ ವಯಸ್ಸಾಃ ಪಕ್ವಾನಿತಕಲಸುಫಲಾನ್ಯನು ಭೋಜಯೇತಿ ।
ಇತ್ಯರ್ಥಿತಃ ಸ ಬಲ ಆಪ ಸ ತಾಲವೃಂಪಂ ಗೋಪ್ಯೈರ್ದುರಾಸದ ಮತೀವ ಹಿ ಧೇನುಕೇನ ॥ ೫೧ ॥

ಅಥ=ಅನಂತರ ತತ್ರ=ಆ ಗೋಕುಲದಲ್ಲಿ ವಯಸ್ಸಾಃ = ಸಮಾನ ವಯಸ್ಸುಳ್ಳವರು ಪಕ್ವಾವ = ಹಣ್ಣಾದ ತಾಲ ಸುಫಲಾನಿ=ತಾಳ ವೃಕ್ಷದ ಒಳ್ಳೆಯ ಹಣ್ಣುಗಳನ್ನು ಅನುಭೋಜಯತ್=ತಿನ್ನಿಸು ಇತಿ=ಎಂಬುದಾಗಿ ಸಬಲಂ=ಬಲರಾಮನಿಂದ ಕೂಡಿದ ಕೃಷ್ಣಂ=ಶ್ರೀ ಕೃಷ್ಣನನ್ನು ಅವದನ್=ಹೇಳಿದರು. ಇತಿ=ಈ ರೀತಿಯಾಗಿ ಅರ್ಥಿತಃ = ಪ್ರಾರ್ಥಿಸಿಕೊಳ್ಳಲ್ಪಟ್ಟ ಸಬಲಃ=ಬಲರಾಮನಿಂದ ಕೂಡಿದ ಸಃ = ಆ ಕೃಷ್ಣನು ಧೇನುಕೇನ=ಧೇನುಕಾಸುರ ನಿಮಿತ್ತದಿಂದ ಗೋಪ್ಯೈಃ=ಗೊಲ್ಲರಿಂದ ಅತೀವ=ಅತ್ಯಂತವಾಗಿ ದುರಾಸದಂ=ಹೊಂದಲು ಅಶಕ್ಯವಾದ ತಾಲವೃಂದಂ=ತಾಲವೃಕ್ಷಗಳ ಸಮೂಹವುಳ್ಳ ತಾಲವನವನ್ನು ಆಪ=ಹೊಂದಿದನು. ॥ ೫೨ ॥

ವಿಘ್ನೇಶ್ವರತೋವರಮವಾಪ್ಯಸುದುಷ್ಟದೈತ್ಯೋ ದೀರ್ಘಾಯುರುತ್ತಮಬಲಃ ಕದನಪ್ರಿಯೋಽಭೂತ್ ।
ನಿತ್ಯೋದ್ಧತಃ ಸ ಉತರಾಮವೇಕ್ಷ್ಯತಾಲವೃಂದಾತ್ಫಲಾನಿಗಲಿಯಂತ ಮಥಾಭ್ಯಧಾವತ್ ॥ ೫೩ ॥

ಸುದಷ್ಟದೈತ್ಯಃ=ಅತಿದುಷ್ಟನಾದ ಧೇನುಕಾಸುರನೆಂಬ ದೈತ್ಯನಂ ವಿಘ್ನೇಶತಃ=ವಿನಾಯಕನಿಂದ ವರಂ=ವರವನ್ನು ಅವಾಪ್ಯ=ಹೊಂದಿ ದೀರ್ಘಾಯುಃ=ಬಹುಕಾಲ ಆಯುಸ್ಸುಳ್ಳವನೂ ಉತ್ತಮಬಲಃ=ಉತ್ತಮವಾದ ಸಾಮರ್ಥ್ಯವುಳ್ಳವನೂ ಉತ=ಮತ್ತು ಕದನಪ್ರಿಯಃ=ಯುದ್ಧದಲ್ಲಿ ಪ್ರೀತಿ ಉಳ್ಳವನೂ ಅಭೂತ್=ಆದನು. ಅಥ=ವನವನ್ನು ಪ್ರವೇಶಮಾಡಿದ ನಂತರ ನಿತ್ಯೋದ್ಧತಃ=ಯಾವಾಗಲೂ ಗರ್ವಿಷ್ಠನಾದ ಸಃ=ಆ ಧೇನುಕಾಸುರನು ತಾಲಾವೃಂದಾತ್=ತಾಲಾವೃಕ್ಷಗಳ ಸಮೂಹ ದೆಸೆಯಿಂದ ಫಲಾನಿ=ಹಣ್ಣುಗಳನ್ನು ಗಲಯಂತಂ=ಬೀಳಿಸುವಂತೆ ರಾಮಂ=ಬಲರಾಮನನ್ನು ಅಪೇಕ್ಷ್ಯ=ನೋಡಿ ಅಭ್ಯಧಾವತ್=ಓಡಿ ಹೋದನು. ॥ ೫೩ ॥

ತಸ್ಯ ಪ್ರಹಾರ ಮಭಿಕಾಂಕ್ಷತ ಆಶು ಪೃಷ್ಠಪಾದೌಪ್ರಗೃಹ್ಯ ತೃಣರಾಜಶಿರೋಹರತ್ ಸಃ ।
ತಸ್ಮಿನ್ಹತೇ ಖರತರೇಖರರೂಪದೈತ್ಯೇ ಸರ್ವೇಖರಾಶ್ಚಖರತಾಲವನಾಂತರಸ್ಥಾಃ ॥
ಪ್ರಾಪುಃ ಖರಸ್ವರತರಾಃ ಖರರಾಕ್ಷಸಾರಿಂ ಕೃಷ್ಣಂ ಬಲೇನ ಸಹಿತಂ ನಿಹತಾಶ್ಚತೇನ ॥ ೫೪ ॥

ಸಃ=ಆ ಬಲರಾಮನು ಪ್ರಹಾರಂ=ಪಾದಗಳಿಂದ ಹೊಡೆತವನ್ನು ಅಭಿಕಾಂಕ್ಷತಃ=ಇಚ್ಛಿಸುತಕ್ಕ ತಸ್ಯ=ಆ ಧೇನುಕಾಸುರನ ಪೃಷ್ಠಪಾದೌ=ಹಿಂಬದಿಯ ಕಾಲುಗಳನ್ನು ಆಶು=ಕೂಡಲೇ ಪ್ರಗೃಹ್ಯ=ಹಿಡಿದು ತೃಣರಾಜಶಿರಃ=ತಾಲವೃಕ್ಷದ ಮೇಲ್ಭಾಗವನ್ನು ಅಹರತ್=ಛೇದಿಸಿದನು. ಖರತರೇ=ಅತ್ಯಂತ ಕ್ರೂರನಾದ ಖರರೂಪದೈತ್ಯೇ=ಕತ್ತೆಯ ರೂಪವುಳ್ಳ ದೈತ್ಯನಾದ ತಸ್ಮಿನ್=ಆ ಧೇನುಕಾಸುರನು ಹತೇಸತಿ=ಸಾಯುತ್ತಿರಲು ಖರತಾಲವನಾಂತರಸ್ಥಾಃ=ಖರತಾಲವನದ ಮಧ್ಯದಲ್ಲಿರುವ ಖರಸ್ವರತರಾಃ=ಅತ್ಯಂತ ಕ್ರೂರವಾದ ಧ್ವನಿವುಳ್ಳ ಸರ್ವೇ=ಎಲ್ಲಾ ಖರಾಶ್ಚ=ಧೇನುಕನ ಸಂಬಂಧಿಗಳಾದ ಕತ್ತೆಗಳು ಕೂಡ ಖರರಾಕ್ಷಸಾರಿಂ = ಕತ್ತೆಯ ರೂಪವುಳ್ಳ ರಾಕ್ಷಸರಿಗೆ ಶತ್ರುವಾದ ಬಲೇನ=ಬಲರಾಮನಿಂದ ಸಹಿತಂ=ಕೂಡಿದ ಕೃಷ್ಣಂ= ಶ್ರೀಕೃಷ್ಣನನ್ನು ಪ್ರಾಪುಃ=ಹೊಂದಿದವು. ತೇನ=ಆ ಶ್ರೀಕೃಷ್ಣನಿಂದ ನಿಹತಾಶ್ಚ=ಕೊಲ್ಲಲ್ಪಟ್ಟವು. ॥ ೫೪ ॥

ಸರ್ವಾನ್ನಿಹತ್ಯಖರರೂಪಧರಾನ್ ಸ ದೈತ್ಯಾನ್ ವಿಘ್ನೇಶ್ವರಸ್ಯವರತೋಽನ್ಯಜನೈರವಧ್ಯಾನ್ ।
ಪಕ್ವಾನಿತಾಲಸುಫಲಾನಿ ನಿಜೇಷುಚಾದಾದ್ದುರ್ವಾರ ಪೌರುಷಗುಣೋದ್ಭರಿತೋರಮೇಶಃ ॥ ೫೫ ॥

ದುರ್ವಾರಪೌರುಷಗುಣೋದ್ಭರಿತಃ=ಇನ್ನೊಬ್ಬರಿಂದ ತಡೆಯಲು ಅಶಕ್ಯವಾದ ಪರಾಕ್ರಮವುಳ್ಳ ಗುಣಪೂರ್ಣನಾದ ರಮೇಶಃ=ಲಕ್ಷ್ಮೀಪತಿಯಾದ ಶ್ರೀಕೃಷ್ಣನು ವಿಘ್ನೇಶ್ವರಸ್ಯ=ಗಣಪತಿಯ ವರತಃ=ವರದಿಂದ ಅನ್ಯಜನೈಃ=ಇತರ ಜನರಿಂದ

ಅವಧ್ಯಾನ್=ಕೊಲ್ಲಲಂ ಅಶಕ್ಯರಾದ ಖರರೂಪಧರಾನ್=ಕತ್ತೆಗಳರೂಪ ಧರಿಸಿರಂವ ಸರ್ವಾನ್=ಎಲ್ಲಾ ದೈತಾನ್=ದೈತ್ಯರನ್ನು ನಿಹತ್ಯ=ಕೊಂದು ಪಕ್ವಾನಿ=ಹಣ್ಣಾದ ತಾಲ ಸುಫಲಾನಿ=ತಾಲವೃಕ್ಷದ ಒಳ್ಳೆಯಂ ಫಣ್ಣಿಗಳನ್ನು ನಿಜೇಪು=ತನ್ನವರಲ್ಲಿ ಅದಾತ್=ಕೊಟ್ಟನಂ. ॥ ೫೪ ॥

ಪಕ್ಷದ್ವಯೇನ ವಿಹರತ್ಸಥ ಗೋಪಕೇಷು ದೈತ್ಯಃಪ್ರಲಂಬಇತಿ ಕಂಸವಿಸೃಷ್ಟಆಗಾತ್ ।
ಕೃಷ್ಣಸ್ಯ ಪಕ್ಷಿಷು ಜಯತ್ಸು ಸ ರಾಮಮೇತ್ಯಾಪಾಪಃಪರಾಜಿತ ಉವಾಹ ತಮುಗ್ರರೂಪಃ ॥ ೫೫ ॥

ಪಕ್ಷದ್ವಯೇನ=ಕೃಷ್ಣರಾಮರನ್ನು ನಾಯಕರನ್ನಾಗಿ ಮಾಡಿಕೊಂಡು ಕೆಲವರು ಕೃಷ್ಣನ ಪಕ್ಷದವರಂ ಕೆಲವರು ರಾಮನ ಪಕ್ಷದವರು ಎಂಬುದಾಗಿ ಎರಡು ಪಂಗಡದಿಂದ ಗೋಪಕೇಷು=ಗೋಪಾಲಕರು ವಿಹರತ್ಸು ಸತ್ಸು=ಸೋತವರಂ ಗೆದ್ದವರನ್ನು ಹೊರಬೇಕು ಎಂಬುದಾಗಿ ಆಟವಾಡುತ್ತಿರಲು ಕಂಸವಿಸೃಷ್ಟಃ=ಕಂಸನಿಂದ ಕಳುಹಿಸಲ್ಪಟ್ಟ ಪ್ರಲಂಬ ಇತಿ=ಪ್ರಲಂಬನೆಂದ ಪ್ರಸಿದ್ಧನಾದ ದೈತ್ಯಃ=ದೈತ್ಯನು ಆಗಾತ್=ಬಂದನು. ಕೃಷ್ಣಸ್ಯ=ಕೃಷ್ಣನ ಪಕ್ಷಿಷು=ಪಕ್ಷದಲ್ಲಿರತಕ್ಕವರಂ ಜಯತ್ಸು ಸತ್ಸು=ಗೆಲ್ಲುತ್ತಿರಲು ಪರಾಜಿತಃ=ಪರಾಜಯವನ್ನು ಹೊಂದಿದ ಪಾಪಃ=ಪಾಪಿಷ್ಟನಾದ ಉಗ್ರರೂಪಃ=ಕ್ರೂರಸ್ವರೂಪವುಳ್ಳ ಸಃ=ಆ ಪ್ರಲಂಬಾಸುರನನ್ನು ಆಥ=ಪರಾಜಯವನ್ನು ಹೊಂದಿದ ನಂತರ ತಂ ರಾಮಂ=ಆ ಬಲರಾಮನನ್ನು ಉವಾಹ=ಹೊತ್ತು ಕೊಂಡನು. ॥ ೫೫ ॥

ಭೀತೇನ ರೋಹಿಣಿಸುತೇನ ಹರಿಸ್ತುತೋಽಸೌ ಸ್ವಾವಿಷ್ಟತಾ ಮುಪದಿದೇಶ ಬಲಾಭಿಪೂರ್ತ್ಯೈ ।
ತೇನೈವ ಪೂರಿತಬಲೋಽಂಬರಚಾರಿಣಂ ತಂ ಪಾಪಂ ಪ್ರಲಂ ಬಮುಷ್ಟಿಹತಂ ಚಕಾರ ॥ ೫೬ ॥

ಭೀತೇನ=ಹೆದರಿದ ರೋಹಿಣಿಸುತೇನ=ರೋಹಿಣಿಯ ಮಗನಾದ ಬಲರಾಮನಿಂದ ಸ್ತುತಃ=ಸ್ತೋತ್ರ ಮಾಡಿಸಿ ಕೊಳ್ಳಲ್ಪಟ್ಟ ಅಸೌಹರಿಃ = ಈ ಶ್ರೀಕೃಷ್ಣನು ಬಲಾಭಿಪೂರ್ತ್ಯೈ=ಬಲರಾಮನಿಗೆ ಸಾಮರ್ಥ್ಯವು ಪೂರ್ಣವಾಗುವುದಕ್ಕಾಗಿ ಸ್ವಾವಿಷ್ಟತಾಂ = ನಾನು ನಿನ್ನಲ್ಲಿ ಶುಕ್ಲಕೇಶರೂಪದಿಂದ ಪ್ರವಿಷ್ಟನಾಗಿದ್ದೇನೇ ನೀನು ಹೆದರಬೇಡ ಎಂದು ತನ್ನ ಆದೇಶವನ್ನು ಉಪದೇಶ=ಬಲರಾಮನನ್ನು ಕುರಿತು ಹೇಳಿದನು. ತೇನೈವ=ಆ ಆವೇಶ ನಿಮಿತ್ತದಿಂದಲೇ ಪೂರಿತಬಲಃ=ಪೂರ್ಣವಾದ ಸಾಮರ್ಥ್ಯವುಳ್ಳ ಬಲರಾಮನು ಅಂಬರಚಾರಿಣಂ=ಆಕಾಶದಲ್ಲಿ ಸಂಚರಿಸುವ ಪಾಪಂ=ಪಾಪಿಷ್ಟನಾದ ತಂಪ್ರಲಂಬಂ=ಆ ಪ್ರಲಂಬಾಸುರನನ್ನು ಮುಷ್ಟಿಹತಂ=ಮುಷ್ಟಿಯಿಂದ ಸಂಹೃತನನ್ನಾಗಿ ಚಕಾರ=ಮಾಡಿದನು. ॥ ೫೬ ॥

ತಸ್ಮಿನ್ಹತೇ ಸುರಗಣೌಬಲದೇವನಾಮುರಾಮುಸ್ಯಚಕ್ರು ರತಿತೃಪ್ತಿಯುತಾಹರಿಶ್ಚ ।
ವಹ್ನಿಂ ಪಪೌ ಪುನಃಪಿ ಪ್ರದಹಂತಮುಚ್ಚೈರ್ಗೋಪಾಂಶ್ಚ ಗೋಗಣಮಗಣ್ಯಗುಣೌರ್ಣವೋಪಾತ್ ॥೫೭॥

ತಸ್ಮಿನ್=ಆ ಪ್ರಲಂಬಾಸುರನು ಹತೇಸತಿ=ಕೊಲ್ಲಲ್ಪಡಂತಿರಲಂ ಸುರಗಣಾಃ = ದೇವತೆಗಳ ಸಮೂಹಗಳು ಅತಿತೃಪ್ತಿಯುತಾಸ್ತಂತಃ=ಅತ್ಯಂತ ಸಂತೋಷದಿಂದ ಕೂಡಿದವರಾಗಿ ರಾಮಸ್ಯ=ರಾಮನಿಗೆ ಬಲದೇವನಾಮ=ಬಲದೇವನೆಂಬ ಹೆಸರನ್ನು ಚಕ್ರುಃ=ಮಾಡಿದರು ಹರಿಶ್ಚ=ಶ್ರೀಕೃಷ್ಣನಾದರೂ ಪುನರಪಿ=ಮತ್ತೊಮ್ಮೆಯೂ ಕೂಡ ಉಚ್ಚೈಃ=ಚೆನ್ನಾಗಿ ಪ್ರದಹಂತಂ ಸುಡತಕ್ಕ ದಹ್ನಿಂ=ಕಾಡ ಅಗ್ನಿಯನ್ನು ಪಪೌ=ಪಾನ ಮಾಡಿದನಂ ಅಗಣ್ಯಗುಣಊರ್ಣವಃ=ಅಪರಿಮಿತಗಳಾದ ಗುಣಗಳಿಂದ ಸಮುದ್ರದಂತಿರುವ ಶ್ರೀಕೃಷ್ಣನು ಗೋಪಾಂಶ್ಚ=ಗೋಪಾಲಕರನ್ನೂ ಗೋಗಣಂಚ=ಗೋವುಗಳ ಸಮುದಾಯವನ್ನೂ ಕೂಡ ಅಪಾತ್=ರಕ್ಷಿಸಿದನಂ. ॥ ೫೭ ॥

ಕೃಷ್ಣಂ ಕದಾಚಿದತಿದೂರಗತಂ ವಯಸ್ಯಾ ಊಚುಃ ಕ್ಷುಧಾರ್ದಿತತರಾ ವಯಮಿತ್ಯುದಾರಂ ।
ಸೋಽಪ್ಯಾಹ ಸತ್ರಮಿಮಿಪ್ರಗಣೌಶ್ಚರಂತಿ ತಾನ್ಯಾಚತೇತಿ ಪರಿಪೂರ್ಣಸಮಸ್ತಕಾಮಃ ॥ ೫೮ ॥

ಕದಾಚಿತ್=ಒಮ್ಮೆ ವಯಸ್ಯಾಃ=ಸಮಾನ ವಯಸ್ಕರಾದ ಗೊಲ್ಲರು ವಯಂ=ನಾವು ಕ್ಷುಧಾ=ಹಸಿವೆಯಿಂದ ಅರ್ದಿತತರಾಃ=ಅತ್ಯಂತ ಪೀಡಿತರಾಗಿದ್ದೇವೆ. ಇತಿ=ಎಂಬುದಾಗಿ ಉದಾರಂ=ಭಕ್ತಾಭೀಷ್ಟವನ್ನು ಕೊಡತಕ್ಕ ಅತಿದೂರಗತಂ=ಅತ್ಯಂತ

ದೊರದಲ್ಲಿರತಕ್ಕ ಕೃಷ್ಣಂ=ಶ್ರೀಕೃಷ್ಣನನ್ನು ಊಚುಃ = ಹೇಳಿದರಂ. ಪರಿಪೂರ್ಣಸಮಸ್ತಕಾಮಃ=ಪರಿಪೂರ್ಣಗಳಾದ ಎಲ್ಲಾ ಅಭೀಷ್ಟಗಳುಳ್ಳ ಸೋಽಪಿ=ಆಕೃಷ್ಣನಾದರೂ ಇಹ=ಈ ವನದಲ್ಲಿ ವಿಪ್ರಗಣಾಃ=ಬ್ರಾಹ್ಮಣರ ಸಮೂಹಗಳು ಸತ್ರಂ=ಅನೇಕ ಜನರು ಸೇರಿ ಮಾಡತಕ್ಕ ಯಾಗವನ್ನು ಚರಂತಿ=ಮಾಡುತ್ತಾರೆ. ತಾನ್=ಆ ಬ್ರಾಹ್ಮಣರನ್ನು ಯಾಚತ=ಬೇಡಿರಿ ಇತಿ=ಎಂದು ಅಹ=ಹೇಳಿದನು. ॥ ೫೮ ॥

ತಾನ್ವಾಕ್ಯ ಕಾಮಮನವಾಪ್ಯ ಪುನರ್ಭಗೋಪಾಃ ಕೃಷ್ಣಂ ಸಮೀಯುರಥತಾನವದತ್ಯದೇವಃ ।
ಪತ್ನೀಃಸಮರ್ಥಯತ ಮದ್ವಚನಾದಿತಿ ಸ್ಮಚಕ್ರುಶ್ಚ ತೇ ತದಪಿತಾ ಭಗವಂತಮಾಪುಃ ॥ ೫೯ ॥

ಗೋಪಾಃ=ಗೋಪಾಲರಂ ತಾನ್=ಆ ಬ್ರಾಹ್ಮಣರನ್ನು ಪ್ರಾಪ್ಯ = ಹೊಂದಿ ಕಾಮಂ=ಅಭೀಷ್ಟವನ್ನು ಅನವಾಪ್ಯ = ಹೊಂದದೆ ಕೃಷ್ಣಂ = ಕೃಷ್ಣನನ್ನು ಸಮೀಯು=ಹೊಂದಿದರು. ಅಥ=ಅನಂತರ ದೇವಃ=ಕ್ರೀಡಾದಿಗುಣ ವಿಶಿಷ್ಟನಾದ ಸಃ= ಆ ಶ್ರೀಕೃಷ್ಣನಂ ಪುನಶ್ಚ=ಮತ್ತೊಮ್ಮೆ ತಾನ್=ಆ ಗೊಲ್ಲರನ್ನು ಮದ್ವಚನಾತ್=ನಾನು ಬಂದಿದ್ದೇನೆ ಎಂಬ ಮಾತಿನಿಂದ ಪತ್ನೀಃ=ಬ್ರಾಹ್ಮಣರ ಹೆಂಡಂದಿರನ್ನು ಸಮರ್ಥಯತ=ಪ್ರಾರ್ಥಿಸಿರಿ ಇತಿ = ಎಂದು ಅವದತ್=ಹೇಳಿದನಂ. ತೇ=ಆ ಗೊಲ್ಲರು ತದಪಿ=ಆ ಅನ್ನಯಾಚನವನ್ನು ಕೂಡ ಚಕ್ರುಃ=ಮಾಡಿದರು. ತಾಃ ಅಪಿ=ಆ ಸ್ತ್ರೀಯರು ಕೂಡ ಭಗವಂತಂ=ಶ್ರೀಕೃಷ್ಣನನ್ನು ಆಪುಃ = ಹೊಂದಿದರು. ॥ ೫೯ ॥

ತಾಃಷಡ್ವಿಧಾನ್ನ ಪರಿಪೂರ್ಣಕರಾಃ ಸಮೇತಾಃ ಪ್ರಾಪ್ತಾ ವಿಸೃಜ್ಯ ಪತಿಪುತ್ರ ಸಮಸ್ತಬಂಧೂನ್ ।
ಆತ್ಮಾರ್ಚನೈಕಪರಮಾ ವಿಸಸರ್ಜ ಕೃಷ್ಣ ಏಕಾಪತಿಪ್ರವಿಧೃತಾ ಪದಮಾಪವಿಷ್ಣೋಃ ॥ ೬೦ ॥

ಷಡ್ವಿಧಾನ್ನ ಪರಿಪೂರ್ಣಕರಾಃ=ಷಡ್ರಸೋಪೇತವಾದ ಅನ್ನದಿಂದ ಪೂರ್ಣಗಳಾದ ಕೈಗಳುಳ್ಳ ತಾಃ=ಆ ಬ್ರಾಹ್ಮಣರ ಪತ್ನಿಯಂರು ಸಮೇತಾಃ ಸತ್ಯಃ=ಮಿಲಿತರಾಗಿ ಪತಿಪುತ್ರ ಸಮಸ್ತ ಬಂಧೂನ್=ಗಂಡಂದಿರು ಮಕ್ಕಳು ಮೊದಲಾದ ಎಲ್ಲಾ ಬಂಧುಗಳನ್ನೂ ವಿಸೃಜ್ಯ=ಬಿಟ್ಟು ಪ್ರಾಪ್ತಾಃ=ಶ್ರೀಕೃಷ್ಣನ ಸಮೀಪಕ್ಕೆ ಬಂದರು. ಆತ್ಮಾರ್ಚನೈಕ ಪರಮಾಃ=ತನ್ನನ್ನು ಪೂಜಿಸುವುದರಲ್ಲಿ ಮಗ್ನಿಳ್ಳ ತಾತ್ಪರ್ಯವುಳ್ಳ ವಿಪ್ರಪತ್ನಿಯರನ್ನು ಕೃಷ್ಣಃ=ಶ್ರೀ ಕೃಷ್ಣನು ವಿಸಸರ್ಜ=ಬಿಟ್ಟನು. ಪತ್ಯಾ=ತನ್ನ ಗಂಡನಿಂದ ಪ್ರವಿಧೃತಾ=ಹೋಗಬೇಡವೆಂದು ತಡೆಯಲ್ಪಟ್ಟ ಏಕಾ=ಒಬ್ಬಳು ವಿಷ್ಣೋಃಪದಂ=ಯೋಗದಿಂದ ಶರೀರವನ್ನು ಬಿಟ್ಟು ಪರಮಾತ್ಮನ ಸ್ಥಾನವನ್ನು ಆಪ=ಹೊಂದಿದಳು. ॥ ೬೦ ॥

ಭುಕ್ತ್ವೇಥ ಗೋಪಸಹಿತೋ ಭಗವಾಂಸ್ತದನ್ನಂ ರೇಮೇಚಗೋಕುಲಮವಾಪ್ಯಸಮಸ್ತನಾಥಃ ।
ಆಜ್ಞಾತಿಲಂಘನಕೃತೇಃ ಸ್ವಕೃತಾಪರಾಧಾತ್ ಪಶ್ಚಾತ್ಸುತಪ್ತಮನಸೋಽಭವಂಶ್ವವಿಪ್ರಾಃ ॥ ೬೧ ॥

ಅಥ=ಅನಂತರ ಸಮಸ್ತನಾಥ=ಎಲ್ಲರಿಗೂ ಸ್ವಾಮಿಯಾದ ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನಂ ಗೋಪಸಹಿತಃಸನ್=ಗೋಪಾಲರಿಂದ ಕೂಡಿದವನಾಗಿ ತದನ್ನಂ=ಷಡ್ರಸೋಪೇತವಾದ ಆಅನ್ನವನ್ನು ಭುಕ್ತ್ವಾ=ಊಟಮಾಡಿ ಗೋಕುಲಂ=ನಂದಗೋಕುಲವನ್ನು ಅವಾಪ್ಯ=ಹೊಂದಿ ರೇಮೇ=ಕ್ರೀಡಿಸಿದನು. ವಿಪ್ರಾಃ= ಸತ್ರವನ್ನು ಮಾಡುತಿದ್ದ ಬ್ರಾಹ್ಮಣರು ಆಜ್ಞಾತಿಲಂಘನಕೃತೇಃ=ಶ್ರೀಕೃಷ್ಣನ ಆಪ್ಪಣೆಯಂ ಅತಿಕ್ರಮಣ ರೂಪವಾದ ಕರ್ಮವುಳ್ಳ ಸ್ವಕೃತಾಪರಾಧಾತ್=ತಮ್ಮಿಂದ ಮಾಡಲ್ಪಟ್ಟ ಅಪರಾಧದಿಂದ ಪಶ್ಚಾತ್=ಅನಂತರ ಸುತಪ್ತಮನಸಃ=ಅತ್ಯಂತ ತಾಪಗೊಂಡ ಮನಸ್ಸುಳ್ಳವರು ಅಭವನ್=ಆದರಂ. ॥ ೬೧ ॥

ಕೃಷ್ಣೋಽಥವೀಕ್ಷ್ಯ ಪುರುಹೂತಮಹಪ್ರಯತ್ನಂ ಗೋಪಾನ್ನ್ಯವಾರಯದವಿಸ್ಮರಣಾಯತಸ್ಯ ।
ಮಾಮಾನುಷೋಽಯಮಿತಿ ಮಾಮವಗಚ್ಛತಾತ್ಮ ಇತ್ಯವ್ಯಯೋಽಸ್ಯ ವಿದಧೇಮಹಭಂಗಮೀಶಃ ॥ ೬೨ ॥

ಅಥ=ಅನಂತರ ಕೃಷ್ಣಃ=ಶ್ರೀಕೃಷ್ಣನು ಪುರುಹೂತಮಹ ಪ್ರಯತ್ನಂ=ದೇವೇಂದ್ರನ ಪೂಜೆಯ ಉದ್ಯೋಗವನ್ನು ವೀಕ್ಷ್ಯ = ನೋಡಿ ತಸ್ಯ=ಆ ದೇವೇಂದ್ರನಿಗೆ ಅವಿಸ್ಮರಣಾಯ=ತನ್ನ ಅವತಾರದ ಮರೆಯಂವಿಕೆ ಆಗದಿರುವುದಕ್ಕಾಗಿ ಗೋಪಾನ್=ಗೋಪಾಲಕರನ್ನು ನ್ಯವಾರಯತ್=ತಡೆದನು. ಹಿಂದೆ ಹೇಳಿದ ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. ಸಃ=ಆ ಇಂದ್ರನು

ಅಯಂ=ಈ ಕೃಷ್ಣನು ಮಾನುಷಃ=ಮನುಷ್ಯನು ಇತಿ=ಎಂದು ಮಾ ಅವಗಚ್ಛತಾತ್=ತಿಳಿಯದಿರಲಿ ಇತಿ =ಎಂಬುದಾಗಿ ಅವ್ಯಯಃ=ನಾಶರಹಿತನಾದ ಈಶಃ = ಸ್ವಾಮಿಯಾದ ಶ್ರೀಕೃಷ್ಣನು ಅಸ್ಯ = ಈ ಇಂದ್ರನ ಮಹಭಂಗಂ=ಪೂಜೆಯ ನಾಶವನ್ನು ವಿನಧೇ =ಮಾಡಿದನು. ॥ ೬೨ ॥

ಗೋಪಾಂಶ್ಚತಾನ್ ಗಿರಿಮಹೋಽಸ್ಮದುರುಸ್ವಧರ್ಮಇತ್ಯುಕ್ತಿಸಚ್ಛಲತ ಆತ್ಮಮಹೇಽವತಾರ್ಯ ।
ಭೂತ್ವಾತಿ ವಿಸ್ತೃತತನುರ್ಬುಭುಜೇ ಬಲಿಂಸ ನಾನಾವಿಧಾನ್ನರಸಪಾನಗುಣೈಃ ಸಹೈವ ॥ ೬೩ ॥

ಸಃ = ಆ ಕೃಷ್ಣನು ಗಿರಿಮಹಃ= ಪರ್ವತದ ಪೂಜೆಯು ಉರುಸ್ವಧಮಃ = ಗಿರಿಯನ್ನು ಆಶ್ರಯಿಸಿ ಕೊಂಡಿರುವ ನಮಗೆ ಉತ್ಕೃಷ್ಟವಾದ ನಮ್ಮ ಕರ್ತವ್ಯಧರ್ಮವು ಇತಿ = ಈ ರೀತಿಯಾದ ಉಕ್ತಿಸಚ್ಛಲತಃ = ಗಿರಿ ಪೂಜೆಯನ್ನು ಮಾಡಬೇಕು ಎಂಬ ಕಪಟದಿಂದ ಸಹಿತ ಮಾತಿನಿಂದ ತಾನ್ = ಇಂದ್ರಯಾಗದಲ್ಲಿ ಉದ್ಯುಕ್ತರಾದ ಗೋಪಾನ್ = ಗೋಪಾಲರನ್ನು ಆತ್ಮ ಮಹೇ = ತನ್ನ ಪೂಜೆಯಲ್ಲಿ ಅವತಾರ್ಯ = ಪ್ರವೃತ್ತರಾಗುವಂತೆ ಮಾಡಿ ಅತಿವಿಸ್ತೃತತನುಃ = ಅತಿ ದೊಡ್ಡದಾದ ಶರೀರ ವುಳ್ಳವನಾಗಿ ನಾನಾವಿಧಾನ್ನರಸಪಾನಗುಣೈಃ = ಅನೇಕ ಪ್ರಕಾರಗಳಾದ ಅನ್ನ ರಸಪಾನಗಳೆಂಬ ಅಂಗಗಳಿಂದ ಸಹೈವ = ಕೂಡಿಕೊಂಡೇ ಬಲಂ=ಬಲಿಯನ್ನು ಬುಭುಜೇ = ಊಟ ಮಾಡಿದನು. ॥ ೬೩ ॥

ಇಂದ್ರೋಽಥವಿಸ್ಮೃತರಥಾಂಗಧರಾವತಾರೋಮೇಘಾನ್ಯವಾದಿಶದುರೂದಕಪೂಗವೃಷ್ಟ್ಯೈ ।
ತೇ ಪ್ರೇರಿತಾಃ ಸಕಲಗೋಕುಲನಾಶನಾಯ ಧಾರಾವಿತೇರುರುನಾಗಕರಪ್ರಕಾರಾಃ ॥ ೬೪ ॥

ಅಥ = ಗಿರಿಪೂಜಾನಂತರ ವಿಸ್ಮೃತರಥಾಂಗಧರಾವತಾರಃ = ವಿಸ್ಮರಣೆಯನ್ನು ಹೊಂದಿದ ಚಕ್ರಧಾರಿಯಾದ ಪರ ಮಾತ್ಮನ ಅವತಾರವುಳ್ಳ ಅಂದರೆ ಕೃಷ್ಣನು ನಾರಾಯಣ ಅವತಾರನು ಎಂದು ಮರೆತಿರುವ ಇಂದ್ರಃ = ಇಂದ್ರನು ಉರೂದಕ ಪೂಗವೃಷ್ಟ್ಯೈ = ಉತ್ಕೃಷ್ಟ ಜಲಸಮೂಹದ ವರ್ಷಣಕ್ಕೋಸ್ಕರ ಮೇಘಾನ್ = ಮೋಡಗಳನ್ನು ಸಮಾದಿಶತ್ = ಆಜ್ಞಾಪಿಸಿದನು. ತೇ = ಆ ಮೇಘಗಳು ಸಕಲಗೋಕುಲನಾಶನಾಯ = ಎಲ್ಲಾ ಗೋಕುಲವನ್ನು ನಾಶಮಾಡುವುದಕ್ಕೋಸ್ಕರ ಪ್ರೇರಿತಾಃಸಂತಃ=ಇಂದ್ರನಿಂದ ಪ್ರೇರಿಸಿ ಕೊಳ್ಳಲ್ಪಟ್ಟವುಗಳಾಗಿ ಉರುನಾಗಕರಪ್ರಕಾರಾಃ=ಶ್ರೇಷ್ಠ ಆನೆಗಳ ಸೊಂಡಿಲುಗಳಂತೆ ಇರತಕ್ಕ ಧಾರಾಃ=ಜಲಧಾರೆಗಳನ್ನು ವಿತೇರುಃ=ಯಥೇಷ್ಟವಾಗಿ ಮಳೆಗರಿಸಿದವು ॥ ೬೪ ॥

ತಾಭಿರ್ನಿಪೀಡಿತಮುದೀಕ್ಷ್ಯ ಸ ಕಂಜನಾಭಃ ಸರ್ವಂವ್ರಜಂ ಗಿರಿವರಂ ಪ್ರಸಭಂ ದಧಾರ ।
ವಾಮೇನಕಂಜದಲಕೋಮಲ ಪಾಣಿನೈವ ತತ್ರಾಖಿಲಾಃ ಪ್ರವಿವಿಶುಃ ಪಶುಪಾಃ ಸ್ವಗೋಭಿಃ ॥ ೬೫ ॥

ಕಂಜನಾಭಃ=ಕಮಲವು ನಾಭಿಯಲ್ಲಿ ಉಳ್ಳ ಸಃ=ಆ ಕೃಷ್ಣನು ತಾಭಿಃ=ಆ ಜಲಧಾರೆಗಳಿಂದ ನಿಪೀಡಿತಂ=ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಸರ್ವಂವ್ರಜಂ=ಎಲ್ಲಾ ನಂದಗೋಕುಲವನ್ನು ಉದೀಕ್ಷ್ಯ=ನೋಡಿ ವಾಮೇನ=ಎಡಗ ಕಂಜದಲ ಕೋಮಲ ಪಾಣಿನೈವ=ಕಮಲದಂತಿರುವ ಮೃದುವಾದ ಕೈಯಿಂದಲೇ ಗಿರಿವರಂ=ಶ್ರೇಷ್ಠ ಗೋವರ್ಧನ ಪರ್ವತವನ್ನು ಪ್ರಸಭಂ=ಪ್ರಕ ಷ್ಟವಾದ ಸಭೆಯಿಂದ ಕೂಡಿದು ಹೇಗೋ ಹಾಗೆ ದಧಾರ=ಧರಿಸಿದನು. ತತ್ರ=ಆ ಸಭೆಯಲ್ಲಿ ಆಖಿಲಾಃ ಪಶುಪಾಃ=ಎಲ್ಲ ಗೋಪಾಲಕರು ಸ್ವಗೋಭಿಃ = ತಮ್ಮ ತಮ್ಮ ಗೋವುಗಳಿಂದ ಸಹ=ರೂಡಿಕೊಂಡು ಪ್ರವಿವಿಶುಃ=ಪ್ರವೇಶಿಸಿದರು. ಕೃಷ್ಣ ಕರ್ತೃಕವಾದ ಶ್ರೇಷ್ಠಗಿರಿಯು ಧಾರಣಕ್ರಿಯೆಯಿಂದ ಗಿರಿಯ ಕೆಳಗೆ ಪ್ರಕೃಷ್ಟ ಸಭೆಯು ಉಂಟಾಯಿತು ಎಂದು ಹೇಳಲು ಪ್ರಸಭಂ ಎಂಬ ಶಬ್ದವನ್ನು ಹಾಕಿದರು. ಎಂದು ದುರ್ಘಟಾರ್ಥಪ್ರಕಾಶಿಕೆಯಲ್ಲಿ ಹೇಳಿರುವರು. ॥ ೬೫ ॥

ವೃಷ್ಟ್ಯೋರುವಾರ್ಯಥನಿಶಂತರ ಸಪ್ತರಾತ್ರಂ ತ್ರಾತಂ ನಿರೀಕ್ಷ್ಯ ಹರಿಣಾವ್ರಜಮಶ್ರಮೇಣ ।
ಶಕ್ರೋನುಸಂಸೃತಸುರಪ್ರವರಾವತಾರಃ ಪಾದಾಂಬುಜಂಯಮುಪತೇಃ ಶರಣಂಜಗಾಮ ॥ ೬೬ ॥

ಶಕ್ರಃ=ದೇವೇಂದ್ರನು ನಿರಂತರಸಪ್ತರಾತ್ರಂ=ವ್ಯವಧಾನವಿಲ್ಲದೇ ಏಳು ರಾತ್ರಿಗಳಲ್ಲಿ ಉರು=ಬಹಳವಾದ ವಾರಿ= ನೀರನ್ನು ವೃಷ್ಟ್ಯಾ=ಮಳೆಗರಿಸಿ ಅಶ್ರಮೇಣ=ಆಯಾಸವಿಲ್ಲದಿರುವ ಹರಿಣಾ=ಶ್ರೀಕೃಷ್ಣನಿಂದ ತ್ರಾತಂ=ರಕ್ಷಿಸಲ್ಪಟ್ಟ ವ್ರಜಂ=

ನಂದಗೋಕುಲವನ್ನು ನಿರೀಕ್ಷ್ಯನೋಡಿ ಅಥ=ಅನಂತರ ಅಮುಸ್ಮೃತಸುರಪ್ರವರಾವತಾರಃ=ಸ್ಮರಿಸಲ್ಪಟ್ಟ ದೇವಶ್ರೇಷ್ಠನಾದ ಶ್ರೀ ಕೃಷ್ಣನ ಅವತಾರವುಳ್ಳವನಾಗಿ ಅಂದರೆ ಶ್ರೀಕೃಷ್ಣನು ನಾರಾಯಣನ ಅವತಾರನು ಎಂದು ಸ್ಮರಿಸಿ ಯದಂಪತೇಃ=ಯಾದವರಿಗೆ ಸ್ವಾಮಿಯಾದ ಶ್ರೀಕೃಷ್ಣನ ಪಾದಾಂಬುಜಂ = ಪಾದಕಮಲವನ್ನು ಶರಣಂಜಗಾಮ=ಮೊರೆ ಹೊಂದಿದನು. ॥ ೬೬ ॥

ತುಷ್ಟಾವ ಚೈನಮುರುವೇದ ಶಿರೋಗತಾಭಿರ್ಗಿರ್ಭಿಃ ಸದಾ ಗಣಿತಪೂರ್ಣಗುಣಾರ್ಣವಂತಂ ।
ಗೋಭೃದ್ಗುರುಂ ಹರಗುರೋರಪಿ ಗೋಗಣೇನ ಯುಕ್ತಃ ಸಹಸ್ರಗುರಗಾಧಗುಮಗ್ರ್ಯಮಗ್ರ್ಯಾತ್ ॥೬೭॥

ಗೋಭೃತ್=ವಜ್ರಧಾರಿಯಾದ ಗೋಗಣೇನ=ಸುರಭಿ ಮೊದಲಾದ ಗೋವುಗಳ ಸಮೂಹದಿಂದ ಯುಕ್ತಃ=ಕೂಡಿದ ಸಹಸ್ರಗುಃ=ಸಾವಿರ ಕಣ್ಣುಗಳುಳ್ಳ ಅಥವಾ ಬಹುಜ್ಞಾನವುಳ್ಳ ಇಂದ್ರನು ಸದಾ ಯಾವಾಗಲೂ ಅಗಣಿತ ಪೂರ್ಣಗುಣಾರ್ಣವಂ= ಅಸಂಖ್ಯಾತ ಪೂರ್ಣಗುಣಗಳಿಂದ ಸಮುದ್ರದಂತಿರುವ ಹರಗುರೋರಪಿ=ರುದ್ರನಿಗೆ ಗುರುವಾದ ಬ್ರಹ್ಮನಿಗೂ ಕೂಡ ಗುರುಂ= ಉಪದೇಶಕನಾದ ಅಗಾಧಗುಂ=ಅಪರಿಮಿತವಾದ ಶರೀರಕಾಂತಿವುಳ್ಳ ಅಥವಾ ಅಪರಿಮಿತವಾಗ್ವಿಲಾಸವುಳ್ಳ ಅಗ್ರ್ಯಾತ್= ಉತ್ತಮರಿಂದಲೂ ಅಗ್ರ್ಯಂ=ಶ್ರೇಷ್ಠನಾದ ಏನಂ=ಶ್ರೀಕೃಷ್ಣನನ್ನು ಉರುವೇದಶಿರೋಗತಾಭಿಃ=ಅನಂತಗಳಾದ ವೇದಗಳಿಗೆ ಶಿರಃಸ್ಥಾನೀಯವಾದ ಉಪನಿಷತ್ತುಗಳಲ್ಲಿರತಕ್ಕ ಗೀರ್ಭಿಃ=ವಚನಗಳಿಂದ ತುಷ್ಟಾವ = ಸ್ತೋತ್ರ ಮಾಡಿದನು. ॥ ೬೭ ॥

ತ್ವತ್ತೋಜಗತ್ಸಕಲ ಮಾವಿರಭೂದಗಣ್ಯ ಧಾಮ್ನಸ್ತ್ವಮೇವ ಪರಿಪಾಸಿ ಸಮಸ್ತಮಂತೇ ॥
ಅತ್ಯೇತ್ಯಯೈವ ಜಗತೋಽಸ್ಯಹಿ ಬಂಧಮೋಕ್ಷೌ ನತ್ವತ್ಸಮೋಽಸ್ತಿ ಕುಹಚಿತ್ಪರಿಪೂರ್ಣಶಕ್ತೇ ॥ ೬೮ ॥

ಅಗಣ್ಯಧಾಮ್ನಃ=ಅಪರಿಮಿತಗಳಾದ ಜ್ಞಾನಾನಂದಾದಿ ಗುಣಗಳಿಗೆ ಆಶ್ರಯನಾದ ಅಥವಾ ಅಪರಿಮಿತ ತೇಜಸ್ಸುಳ್ಳ ತ್ವತ್ತಏವ=ನಿನ್ನಿಂದಲೇ ಸಕಲಂ ಜಗತ್=ಎಲ್ಲಾ ಲೋಕವೂ ಆವಿರಭೂತ್=ಹುಟ್ಟಿತು ತ್ವಮೇವ=ನೀನೇ ಪರಿಪಾಸಿ=ರಕ್ಷಿಸುವಿ ತ್ವಮೇವ=ನೀನೇ ಅಂತೇ=ಕೊನೆಗೆ ಅತ್ಯೇ=ತಿನ್ನುತ್ತಿ ಅಂದರೆ ನಾಶಮಾಡುತ್ತಿ ತ್ವಯ್ಯೇವ=ನಿನ್ನಿಂದಲೇ ಅಸ್ಯ ಜಗತಃ=ಈ ಜಗತ್ತಿಗೆ ಬಂಧಮೋಕ್ಷೌ = ಸಂಸಾರಬಂಧವೂ ಸಂಸಾರ ಬಂಧದಿಂದ ಬಿಡುಗಡೆಯೂ ಭವತಃ=ಆಗುತ್ತವೆ ಹೇಪರಿಪೂರ್ಣ ಶಕ್ತೇ = ಪರಿಪೂರ್ಣವಾದ ಸಾಮರ್ಥ್ಯವುಳ್ಳವನೇ ಕುಹಚಿತ್=ಯಾವದೇಶದಲ್ಲಿಯೂ ಯಾವಕಾಲದಲ್ಲಿಯೂ ತ್ವತ್ಸಮಃ= ನಿನಗೆ ಸದೃಶನಾದವನು ನಾಸ್ತಿ=ಇಲ್ಲವೇ ಇಲ್ಲ ಹಿ=ಪ್ರಸಿದ್ಧ ॥ ೬೮ ॥

ಕ್ಷಂತವ್ಯಮೇವ ಭವತಾಮನು ಬಾಲ್ಯಮೀಶ ತ್ವತ್ಸಂಶ್ರಯೋಽಸ್ಮಿಹಿಸದೇತ್ಯಭಿ ವಂದಿತೋಽಜಃ ।
ಕ್ಷಾಂತಂ ಸದೈವ ಭವತಸ್ತವ ಶಿಕ್ಷಣಾಯೆ ಪೂಜಾಪಹಾರವಿಧಿರಿತ್ಯವದತ್ರಮೇಶಃ ॥ ೬೯ ॥

ಹೇ ಈಶ=ಎಲೋ ಸ್ವಾಮಿಯೇ ಹಿ=ಯಾವ ಕಾರಣದಿಂದ ಸದಾ=ಯಾವಾಗಲೂ ಅಹಂ=ನಾನು ತ್ವತ್ಸಂಶ್ರಯಃ= ನೀನೇ ಆಶ್ರಯನಾಗಿ ಉಳ್ಳವನು ಅಸ್ಮಿ=ಆಗಿದ್ದೇನೋ ಅತಃ=ಆ ಕಾರಣದಿಂದ ಮಮ=ನನ್ನ ಬಾಲ್ಯ = ಪುಕ್ಕಳಾಟಿಕೆಯು ಭವತ್ಯೈವ=ನಿನ್ನಿಂದಲೇ ಕ್ಷಂತವ್ಯಂ=ಕ್ಷಮೆ ಮಾಡಲು ಯೋಗ್ಯವು ಇತಿ=ಈ ರೀತಿಯಾಗಿ ಹೇಳಿ ಅಭಿವಂದಿತಃ=ನಮಸ್ಕರಿಸಿ ಕೊಳ್ಳಲ್ಪಟ್ಟ ಅಜಃ=ಉತ್ಪತ್ತಿ ಇಲ್ಲದ ರಮೇಶಃ=ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಸದೈವ=ಯಾವಾಗಲೂ ಭವತಃ=ನಿನ್ನ ಬಾಲ್ಯಂ=ಬಾಲತನವು ಕ್ಷಾಂತಂ = ಕ್ಷಮಿಸಲ್ಪಟ್ಟಿತು. ತವ=ನಿನಗೆ ಶಿಕ್ಷಣಾಯ=ಸನ್ಮಾರ್ಗದಲ್ಲಿ ಪ್ರವೃತ್ತಿಯಾಗುವುದಕ್ಕೋಸ್ಕರ ಪೂಜಾಪಹಾರವಿಧಿಃ=ಪೂಜೆಯು ನಾಶರೂಪವಾದ ವಿಧಾನವು ಮಾಡಲ್ಪಟ್ಟಿತು. ಇತಿ=ಎಂದು ಅವದತ್=ಹೇಳಿದನು. ॥ ೬೯ ॥

ಗೋವಿಂದವೇನಮಭಿಷಿಚ್ಯಸ ಗೋಗಣೇಶೋ ಗೋಭಿರ್ಜಗಾಮ ಗುಣಪೂರ್ಣಮಮುಂಪ್ರಣಮ್ಯ ।
ಗೋಪೈರ್ಗಿರಾಂಪತಿರಪಿ ಪ್ರಣತೋಭಿಗಮ್ಯ ಗೋವರ್ಧನೋದ್ಧರಣ ಸಂಗತ ಸಂಶಯೈಃ ಸಃ ॥ ೭೦ ॥

ಗೋಗಣೇಶಃ = ಸುರಭ್ಯಾದಿ ಗೋವುಗಳ ಸಮುದಾಯಕ್ಕೆ ಸ್ವಾಮಿಯಾದ ಇಂದ್ರನು ಗೋಭಿಃ=ಆಕಾಶ ಗಂಗಾಜಲ ಗಳಿಂದ ಏನಂ ಗೋವಿಂದಂ=ಈ ವೇದಪ್ರತಿಪಾದ್ಯನಾದ ಶ್ರೀಕೃಷ್ಣನನ್ನು ಅಭಿಷಿಚ್ಯ=ಅಭಿಷೇಕ ಮಾಡಿ ಗುಣಪೂರ್ಣಂ= ಜ್ಞಾನಾನಂದಾದಿ ಗುಣಗಳಿಂದ ಪೂರ್ಣನಾದ ಅಮುಂ=ಈ ಶ್ರೀಕೃಷ್ಣನನ್ನು ಪ್ರಣಮ್ಯ=ನಮಸ್ಕರಿಸಿ ಜಗಾಮ=ಹೋದನು.

ಗೋವರ್ಧನೋದ್ಧರಣ ಸಂಗತ ಸಂಶಯೈಃ=ಗೋವರ್ಧನ ಪರ್ವತವನ್ನು ಎತ್ತೋಣದರಿಂದ ಚೆನ್ನಾಗಿ ಹೋಗಲ್ಪಟ್ಟ ಕೃಷ್ಣನು ಮನುಷ್ಯನೋ ದೇವನೋ ಎಂಬ ಸಂಶಯವುಳ್ಳ ಗೋಪೈರಪಿ=ಗೊಲ್ಲರಿಂದಲೂ ಕೂಡ ಗಿರಾಂಪತಿಃ=ವೇದಾಭಿಮಾನಿಗಳಾದ ಲಕ್ಷ್ಮ್ಯಾದಿಗಳಿಗೆ ಸ್ವಾಮಿಯಾದ ಸಃ=ಆ ಶ್ರೀಕೃಷ್ಣನು ಅಭಿಗಮ್ಯ=ಎದುರುಗೊಂಡು ಪ್ರಣತಃ=ನಮಸ್ಕರಿಸಿ ಕೊಳ್ಳಲ್ಪಟ್ಟವನು ಅಭೂತ್=ಆದನು. ॥ ೭೦ ॥

ಕೃಷ್ಣಂ ತತಃಪ್ರಭೃತಿ ಗೋಪಗಣಾವ್ಯಜಾನನ್ ನಾರಾಯಣೋಽಯಮಿತಿ ಗರ್ಗವಚಶ್ಚ ನಂದಾತ್ ।
ನಾರಾಯಣಸ್ಯ ಸಮ ಇತ್ಯುದಿತಂ ನಿಶಮ್ಯ ಪೂಜಾಂ ಚ ಚಕ್ರುರಧಿಕಾಮರವಿಂದನೇತ್ರೇ ॥ ೭೧ ॥

ತತಃ ಪ್ರಭೃತಿ=ಗೋವರ್ಧನ ಪರ್ವತವನ್ನೆತ್ತಿದ ದಿನವನ್ನಾರಂಭಿಸಿ ಗೋಪಗಣಾಃ=ಗೊಲ್ಲರ ಸಮೂಹವು ಅಯಂ=ಈ ಶ್ರೀಕೃಷ್ಣನು ನಾರಾಯಣಃ = ನಾರಾಯಣನು ಇತಿ=ಎಂಬುದಾಗಿ ವ್ಯಜಾನನ್=ತಿಳಿದರು. ನಾರಾಯಣಸ್ಯ=ನಾರಾಯಣನಿಗೆ ಸಮಃ=ಸದೃಶನು ಇತಿ=ಎಂದು ಉದಿತಂ= ಜಾತಕರ್ಮಾದಿ ಸಂಸ್ಕಾರದ ಕಾಲದಲ್ಲಿ ಹೇಳಲ್ಪಟ್ಟ ಗರ್ಗವಚಶ್ಚ=ಗರ್ಗಾಚಾರ್ಯರ ಮಾತನ್ನೂ ಕೂಡ ನಂದಾತ್=ನಂದಗೋಪನಿಂದ ನಿಶಮ್ಯ=ಕೇಳಿ ಅರವಿಂದ ನೇತ್ರೇ=ಕಮಲದಂತೆ ಕಣ್ಣುಗಳುಳ್ಳ ಶ್ರೀಕೃಷ್ಣನಲ್ಲಿ ಅಧಿಕಾಂ=ಶ್ರೇಷ್ಠನಾದ ಅಂದರೆ ಸರ್ವೋತ್ತಮನೆಂಬ ಎನ್ನುವ ಅಭಿಪ್ರಾಯದಿಂದ ಪೂಜಾಂ=ಪೂಜೆಯನ್ನು ಚಕ್ರುಃ = ಮಾಡಿದರು. ॥ ೭೧ ॥

ಸ್ಕಂದಾದುಪಾತ್ತವರತೋ ಮರಣಾದಪೇತಂ ದೃಷ್ಟ್ವಾಽಚರಾಮನಿಹತಂ ಬಲಿನಂ ಪ್ರಲಂಬಂ ।
ಚಕ್ರುರ್ವಿನಿಶ್ಚಯಮು ಮುಷ್ಯಸುರಾಧಿಕತ್ವೇ ಗೋಪಾ ಅಥಾಸ್ಯ ವಿದಧುಃ ಪರಮಾಂಚ ಪೂಜಾಂ ॥೭೨॥

ಗೋಪಾಃ=ಗೋಪಾಲಕರು ಸ್ಕಂದಾತ್=ಷಣ್ಮುಖನಿಂದ ಉಪಾತ್ತವರತಃ=ಸ್ವೀಕರಿಸಲ್ಪಟ್ಟವರದಿಂದ ಮರಣಾತ್=ಮೃತ್ಯುವಿನಿಂದ ಅಪೇತಂ=ರಹಿತನಾದ ಬಲಿನಂ=ಬಲವುಳ್ಳ ರಾಮನಿಹತಂ=ಬಲರಾಮನಿಂದ ಕೊಲ್ಲಲ್ಪಟ್ಟ ಪ್ರಲಂಬಂ=ಪ್ರಲಂಬಾಸುರನನ್ನು ದೃಷ್ಟ್ವಾ=ನೋಡಿ ಅಮುಷ್ಯ=ಈ ಬಲರಾಮನಿಗೆ ಸುರಾಧಿಕತ್ವೇ=ದೇವೋತ್ತಮದಲ್ಲಿ ವಿನಿಶ್ಚಯಂ = ಅತಿ ನಿಶ್ಚಯವನ್ನು ಚಕ್ರುಃ=ಮಾಡಿದರು. ಅಸ್ಯ=ಈ ಕೃಷ್ಣನ ಅಥ=ಅನಂತರ ಅಂದರೆ ಕೃಷ್ಣನಿಗೆ ಸಮಾನವಲ್ಲದ ಪರಮಾಂ = ಉತ್ತಮವಾದ ಪೂಜಾಂಚ=ಪೂಜೆಯನ್ನೂ ಕೂಡ ವಿದಧುಃ=ಮಾಡಿದರು. ॥ ೭೨ ॥

ಕಾತ್ಯಾಯನೀವ್ರತಧರಾಃ ಸ್ವಪತಿತ್ವಹೇತೋಃ ಕನ್ಯಾಉವಾಹ ಭಗವಾನಪರಾಶ್ಚ ಗೋಪೀಃ ॥
ಅನ್ಯೈರ್ಧೃತಾ ಅಯುಗಬಾಣ ಶರಾಭಿನುನ್ನಾಃ ಪ್ರಾಪ್ತಾನಿಶಾಸ್ವರಮಯಚ್ಛಶಿರಾಜಿತಾಸು ॥ ೭೩ ॥

ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ಸ್ವಪತಿತ್ವಹೇತೋಃ=ತನ್ನ ಪತಿತ್ವಕ್ಕೋಸ್ಕರ ಅಂದರೆ ಶ್ರೀಕೃಷ್ಣನಂ ಗಂಡನಾಗಬೇಕೆಂದು ಕಾತ್ಯಾಯನೀವ್ರತಧರಾಃ=ಪಾರ್ವತಿಯ ವ್ರತವನ್ನು ಧರಿಸಿರುವ ಕನ್ಯಾಃ=ಹಿಂದಿನ ಜನದಲ್ಲಿ ಅಪ್ಸರ ಸ್ತ್ರಿಯರಾಗಿರುವ ಕನ್ಯೆಯರನ್ನು ಉವಾಹ=ಮದುವೆ ಮಾಡಿಕೊಂಡನು ಅನ್ಯೈಃ=ಇತರ ಗೋಪಾಲಕರಿಂದ ಧೃತಾಃ=ವರಿಸಲ್ಪಟ್ಟ ಅಯುಗಬಾಣ ಶರಾಭಿನುನ್ನಾಃ=ಮನ್ಮಥನ ಬಾಣದಿಂದ ಪ್ರೇರಿಸಲ್ಪಟ್ಟ ಶಶಿರಾಜತಾಸಂ=ಚಂದ್ರನಿಂದ ಶೋಭಿಸಿಕೊಂಡಿರುವ ನಿಶಾಸಂ=ರಾತ್ರಿಗಳಲ್ಲಿ ಪ್ರಾಪ್ತಾಃ=ಕೃಷ್ಣನ ಸಮೀಪ ಬಂದಿರುವ ಅಪರಾಃ=ಮದುವೆಯಾದ ಕನ್ಯೆಯರಿಂದ ಇತರರಾದ ಗೋಪೀಶ್ಚ=ಗೋಪ ಸ್ತ್ರೀಯರನ್ನೂ ಕೂಡ ಅರಮಯತ್=ಕ್ರೀಡಿಸಿದನು. ॥ ೭೩ ॥

ತಾಸ್ವತ್ರತೇನ ಜನಿತಾ ದಶಲಕ್ಷಪುತ್ರಾ ನಾರಾಯಣಾಹ್ವಯ ಯುತಾಬಲಿನಶ್ಚ ಗೋಪಾಃ ॥
ಸರ್ವೇಪಿ ದೈವತಗಣಾ ಭಗವತ್ಯುತತ್ವಮಾಪ್ತುಂ ಧರಾತಲಗತಾ ಹರಿಭಕ್ತಿಹೇತೋಃ ॥ ೭೪ ॥

ಅತ್ರ=ಈ ವೃಂದಾವನದಲ್ಲಿ ತೇನ=ಆ ಶ್ರೀಕೃಷ್ಣನಿಂದ ತಾಸು=ಆ ಮದುವೆಯಾದ ಗೋಪಕನ್ಯೆಯರಲ್ಲಿ ನಾರಾಯಣಾಹ್ವಯಯುತಾಃ=ನಾರಾಯಣನೆಂಬ ನಾಮದಿಂದ ಕೂಡಿದ ಬಲೀನಃ=ಬಲಿಷ್ಠರಾದ ದಶಲಕ್ಷಪುತ್ರಾಃ=ಹತ್ತುಲಕ್ಷ ಮಕ್ಕಳು ಜನಿತಾಃ=ಹುಟ್ಟಿಸಲ್ಪಟ್ಟರು. ಸರ್ವೇಪಿ=ಎಲ್ಲರೂ ಗೋಪಾಃ=ಗೋಪ ಕನ್ಯೆಯರಲ್ಲಿ ಹುಟ್ಟಿರುವುದರಿಂದ ಮಾತ್ರ ಜಾತಿಯನ್ನು

ಪೊಂದಿ ಗೊಲ್ಲರಾದರು. ಸರ್ವೇಪಿ=ಎಲ್ಲರೂ ದೈವತಗಣಾಃ = ಪೂರ್ವದಲ್ಲಿ ದೇವತೆಗಳ ಸಮೂಹದಲ್ಲಿ ಸೇರಿದವರು. ಹರಿಭಕ್ತಿ ಹೇತೋಃ=ಪರಮಾತ್ಮನಲ್ಲಿ ಭಕ್ತಿವಿಶೇಷಕ್ಕೋಸ್ಕರ ಭಗವತ್ಪುತತ್ವಂ=ಶ್ರೀಕೃಷ್ಣನ ಪುತ್ರತ್ವವನ್ನು ಆಪ್ತಂ=ಹೊಂದಲು ಧರಾತಲಗತಾಃ=ಭೂತಲವನ್ನು ಹೊಂದಿದರು ಅಂದರೆ ಭೂಮಿಯಲ್ಲಿ ಹುಟ್ಟಿದರು. ॥ ೭೪ ॥

ತಾಸ್ತತ್ರ ಪೂರ್ವವರದಾನಕೃತೇ ರಮೇಶೋ ರಾಮಾದ್ದ್ವಿಜತ್ವ ಗಮನಾದಪಿ ಪೂರ್ವಮೇವ ।
ಸರ್ವಾನಿಶಾಸ್ವರಮಯತ್ಯಮಭೀಷ್ಟಸಿದ್ಧಿ ಚಿಂತಾಮಣಿರ್ಹಿ ಭಗವಾನಶುಭೈರಲಿಪ್ತಃ ॥ ೭೫ ॥

ರಮೇಶಃ=ಲಕ್ಷ್ಮೀಪತಿಯಾದ ಶ್ರೀಕೃಷ್ಣನು ತತ್ರ=ಆ ವೃಂದಾವನದಲ್ಲಿ ಪೂರ್ವವರದಾನಕೃತೇ=ಸಂಸ್ಕಾರವಾಗುವ ಮೊದಲು ನನ್ನ ಸಂಗವು ನಿಮಗಾಗಲಿ ಎಂಬ ವರವನ್ನು ಕೊಟ್ಟಿರುವ ಕಾರಣದಿಂದ ರಾಮಾತ್=ಬಲರಾಮನಿಂದ ಪೂರ್ವಂ ಸ್ತ್ರೀಯರನ್ನು ಸ್ವೀಕಾರ ಮಾಡುವ ಮೊದಲು ದ್ವಿಜತ್ವಗಮನಾದಪಿ=ಉಪನಯನವಾಗುವುದಕ್ಕಿಂತಲೂ ಪೂರ್ವಮೇವ= ಮೊದಲೇ ತಾಃಸರ್ವಾಃ = ಆ ಎಲ್ಲಾ ಸ್ತ್ರೀಯರನ್ನೂ ಅಂದರೆ ವಿವಾಹಿತರಾದ ಕನ್ಯೆಯರನ್ನೂ ಗೋಪಸ್ತ್ರೀಯರನ್ನೂ ನಿಶಾಸು= ರಾತ್ರಿಗಳಲ್ಲಿ ಆರಮಯತ್=ಕ್ರೀಡಿಸಿದನು. ಸಮಭಿಷ್ಟಸಿದ್ಧಿ ಚಿಂತಾಮಣಿಃ=ಸವಿೂಚೀನವಾದ ಕಾಮದ ಪ್ರಾಪ್ತಿಯಲ್ಲಿ ಚಿಂತ್ಯಾಮಣಿಯಂತಿರುವ ಭಗವಾನ್=ಶ್ರೀಕೃಷ್ಣನು ಅಶಂಭ್ಯೈಃ=ಕೆಟ್ಟಕರ್ಮಗಳಿಂದುಂಟಾಗುವ ದೋಷಗಳಿಂದ ಅಲಿಪ್ತಃ= ಲೇಪಿಸಲ್ಪಡದವನು. ಶ್ರೀಕೃಷ್ಣನ ಜ್ಞಾನಿಗಳಿಗೆ ಪಾಪಲೇಪವು ಇಲ್ಲದಿರುವಾಗ ಶ್ರೀಕೃಷ್ಣನಿಗೆ ಪಾಪ ಸಂಬಂಧವು ಹೇಗೆ ಆದೀತು? ॥ ೭೫ ॥

ಸಂಪೂರ್ಣಚಂದ್ರಕರರಾಜಿತ ಸದ್ರಜನ್ಯಾಂ ವೃಂದಾವನೇಕುಮುದಕುಂದಸುಗಂಧವಾತೆ ।
ಶ್ರುತ್ವಾ ಮುಕುಂದ ಮುಖನಿಃಸೃತ ಗೀತಸಾರಂ ಗೋಪಾಂಗನಾಮುಮುಹುರತ್ರ ಸಸಾರಯಕ್ಷಃ ॥೭೬॥

ಗೋಪಾಂಗನಾಃ=ಗೋಪ ಸ್ತ್ರೀಯರು ಸಂಪೂರ್ಣಚಂದ್ರಕರರಾಜಿತಸದ್ರಜನ್ಯಾಂ = ಷೋಡಶಕಲಾಪೂರ್ಣನಾದ ಚಂದ್ರನ ಕಿರಣಗಳಿಂದ ಶೋಭಿಸುವ ಮನೋಹರವಾದ ರಾತ್ರಿಯಲ್ಲಿ ಕುಮುದಕುಂದ ಸುಗಂಧವಾತೇ = ಕುಮುದ ಪುಷ್ಪಗಳೂ ಕುಂದ ಪುಷ್ಪಗಳೂ ಇವುಗಳ ಸವಿೂಚೀನವಾದ ಪರಿಮಳದಿಂದ ಕೂಡಿದ ಗಾಳಿಯುಳ್ಳ ವೃಂದಾವನೇ = ವೃಂದಾವನದಲ್ಲಿ ಮುಕುಂದ ಮುಖನಿಃಸೃತಗೀತಸಾರಂ = ಮೋಕ್ಷಪ್ರದನಾದ ಶ್ರೀಕೃಷ್ಣನ ಮುಖದಿಂದ ಹೊರಟಿರುವ ಗಾನ ಶ್ರೇಷ್ಠವನ್ನು ಶ್ರುತ್ವಾ = ಕೇಳಿ ಮುಮುಹುಃ = ಮೂರ್ಛೆಯನ್ನು ಹೊಂದಿದರು. ಅತ್ರ = ಶ್ರೀಕೃಷ್ಣನು ಕ್ರೀಡಿಸುವ ಸ್ಥಳದಲ್ಲಿ ಯಕ್ಷಃ= ಶಂಖಿಚೂಡನೆಂಬ ಯಕ್ಷನು ಸಸಾರ = ಬಂದನು. ॥ ೭೬ ॥

ರುದ್ರಪ್ರಸಾದಕೃತರಕ್ಷ ಉತಾಸ್ಯಸಖ್ಯುಭೃ್ಯತ್ಯೋ ಬಲೀಖರ ತರೋಪಿ ಚ ಶಂಖಚೂಡಃ ॥
ತಾಃಕಾಲಯನ್ ಭಗವತಸ್ತಲತಾಡನೇನ ಮೃತ್ಯುಂ ಜಗಾಮುಮಣಿಮುಸ್ಯ ಜಹಾರ ಕೃಷ್ಣಃ ॥ ೭೭ ॥

ರುದ್ರಪ್ರಸಾದಕೃತರಕ್ಷಃ=ಶಿವನ ಅನುಗ್ರಹದಿಂದ ಮಾಡಲ್ಪಟ್ಟ ರಕ್ಷಣೆಯುಳ್ಳ ಉತ=ಮತ್ತು ಅಸ್ಯ=ಈ ರುದ್ರನ ಸಖ್ಯುಃ=ಗೆಳೆಯನಾದ ಕುಬೇರನ ಭೃತ್ಯಃ=ಸೇವಕನಾದ ಬಲೀ=ಬಲಿಷ್ಟನಾದ ಖಿರತರಃ=ಅತ್ಯಂತಕ್ರೂರನಾದ ಶಂಖಿಚೂಡೋಪಿ = ಶಂಖಿಚೂಡನೆಂಬ ಯಕ್ಷನಾದರೂ ತಾಃ = ಆ ಗೋಪಿಯರನ್ನು ಕಾಲಯಂಸ್ತನ್ = ಒಯ್ಯತಕ್ಕವನಾಗಿ ಭಗವತಃ = ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನ ತಂತಾಡನೇನ = ಹಸ್ತತಲದ ಪ್ರಹಾರದಿಂದ ಮೃತ್ಯುಂ = ಮರಣವನ್ನು ಜಗಾಮ = ಹೊಂದಿದನು. ಕೃಷ್ಣಃ = ಶ್ರೀಕೃಷ್ಣನು ಅಸ್ಯ = ಈ ಶಂಖಿಚೂಡಾಸುರನ ಮಣಿಂ = ತಲೆಯಲ್ಲಿರುವ ರತ್ನವನ್ನು ಜಹಾರ = ಅಪಹರಿಸಿದನು. ॥ ೭೭ ॥

ನಾಮ್ನಾಷ್ಯರಿಷ್ಟ ಉರುಗಾಯವಿಲೋಮ ಚೇಷ್ಟೋ ಗೋಷ್ಠಂಜಗಾಮ ವೃಷಭಾಕೃತಿರಪ್ಯವಧ್ಯಃ ॥
ಶಂಭೋರ್ವರಾದನುಗತಶ್ಚ ಸದೈವಕಂಸಂ ಗಾ ಭೀಷಯಂತ ಮಮುಮೂಹ್ವಯದಾಶು ಕೃಷ್ಣಃ ॥ ೭೮॥

ಉರುಗಾಯವಿಲೋಮ ಚೇಷ್ಟಃ = ಶ್ರೇಷ್ಠರಾದ ಬ್ರಹ್ಮಾದಿಗಳಿಂದಲೂ ಅನೇಕ ಪ್ರಕಾರಗಳಾದ ಸಾಮಗಳಿಂದಲೂ ಗಾನ ಮಾಡಲ್ಪಡತಕ್ಕ ಶ್ರೀಕೃಷ್ಣನಿಗೆ ವಿರುದ್ಧವಾದ ಕರ್ಮವುಳ್ಳ ವೃಷಾಭಾಕೃತಿಃ = ಎತ್ತಿನ ಆಕಾರದಂತೆ ಆಕಾರವುಳ್ಳ

ಶಂಭೋಃ = ರುದ್ರನ ವರಾತ್ = ವರದಿಂದ ಅವಧ್ಯಃ = ನಾಶವಿಲ್ಲದ ಸದಾ = ಯಾವಾಗಲೂ ಕಂಸವೋವ = ಕಾಸ ನಸ್ಥೇ ಅನುಗತಃ = ಅನುಸರಿಸಿಕೊಂಡಿರುವ ನಾಮ್ನಾ = ಹೆಸರಿನಿಂದ ಅರಿಷ್ಟಃ = ಅರಿಷ್ಟನೆಂಬ ಅಸುರನಂ ಗೋಷ್ಠಂ= ಗೋಕುಲವನ್ನು ಜಗಾಮ = ಹೊಂದಿದನಂ ಕೃಷ್ಣಃ = ಶ್ರೀಕೃಷ್ಣನು ಗಾಃ = ಗೋವುಗಳನ್ನು ಭೀಷಯಂತಂ = ಹೆದರಿಸತಕ್ಕ ಅಮುಂ = ಈ ಅರಿಷ್ಟಾಸುರನನ್ನು ಆಶು = ಕೂಡಲೇ ಅಪ್ಲವಯತ್ = ಕಳಿಸಿದನು. ॥ ೭೮ ॥

ಸೋಽಪ್ಯಾಸಸಾದ ಹರಿಮುಗ್ರವಿಷಾಣಕೋಟಿಮಗ್ರೇ ನಿಧಾಯ ಜಗೃಹೇಽಸ್ಯ ವಿಷಾಣಮೀಶಃ ॥
ಭೂಮೌ ನಿಪಾತ್ಯಚ ವೃಷಾಸುರಮುಗ್ರವೀರ್ಯಂ ಯಜ್ಞೇಯಥಾ ಪಶುಮಮಾರಯದುಗ್ರಶಕ್ತಿಃ ॥೭೯॥

ಸೋಽಪಿ = ಆ ಅರಿಷ್ಟಾಸುರನಾದರೂ ಉಗ್ರವಿಷಾಣ ಕೋಟಿಂ = ಕ್ರೂರಗಳಾದ ಕೋಡುಗಳ ತುದಿಯನ್ನು ಅಗ್ರೇ = ಮುಂಭಾಗದಲ್ಲಿ ನಿಧಾಯ = ಮಾಡಿಕೊಂಡು, ಹರಿಂ = ಶ್ರೀ ಕೃಷ್ಣನನ್ನು ಆಸಸಾದ = ಹೊಂದಿದನಂ ಈಶಃ= ಸ್ವಾಮಿಯಾದ ಶ್ರೀಕೃಷ್ಣನು ಅಸ್ಯ = ಈ ವೃಷಭಾಸುರನ ವಿಷಾಣಂ = ಕೋಡನ್ನು ಜಗೃಹೇ = ಹಿಡಿದನು ಅಗ್ರ್ಯ ಶಕ್ತಿಃ = ಶ್ರೇಷ್ಠ ಸಾಮರ್ಥ್ಯವುಳ್ಳ ಶ್ರೀಕೃಷ್ಣನು ಉಗ್ರವೀರ್ಯಂ = ಕ್ರೂರವಾದ ಪರಾಕ್ರಮವುಳ್ಳ ವೃಷಾಸುರಂ = ಎತ್ತಿನಂತೆ ಆಕಾರವುಳ್ಳ ಅರಿಷ್ಟನನ್ನು ಭೂಮೌ = ಭೂಮಿಯಲ್ಲಿ ನಿಪಾತ್ಯ=ಕೆಡಹಾಕಿ ಯಜ್ಞೇ = ಯಾಗದಲ್ಲಿ ಪಶಂಯಥಾ= ಪಶುವನ್ನೆಂಬಂತೆ ಅಮಾರಯತ್ = ಕೊಂದನು ॥ ೭೯ ॥

ಕೇಶೀತು ಕಂಸವಿಹಿತಸ್ತುರಗಸ್ವರೂಪೋ ಗಿರ್ಯಾತ್ಮಜಾವರಮವಾಪ್ಯಸದಾವಿಮೃತ್ಯುಃ ।
ಪಾಪಃ ಸ ಕೇಶವಮುವಾಪ ಮುಖೇಽಸ್ಯ ಬಾಹುಂ ಪ್ರಾವೇಶಯತ್ಸ ಭಗವಾನ್ವವೃಧೇಽಸ್ಯದೇಹೇ ॥ ೮೦ ॥

ಕಂಸ ವಿಹಿತಃ= ಕಂಸನಿಂದ ಕಳುಹಿಸಲ್ಪಟ್ಟ ತುರಗಸ್ವರೂಪಃ= ಕುದುರೆಯ ಸ್ವರೂಪವುಳ್ಳ ಗಿರ್ಯಾತ್ಮಜಾವರಂ = ಹಿಮವಂತನ ಮಗಳಾದ ಪಾರ್ವತಿಯ ವರವನ್ನು ಅವಾಪ್ಯ= ಹೊಂದಿ ಸದಾ= ಯಾವಾಗಲೂ ವಿಮೃತ್ಯುಃ = ಮರಣವಿಲ್ಲದ ಕೇ ಶೀತು = ಕೇಶಿ ನಾಮಕನಾದ ಯಃ = ಯಾವ ಪಾಪಃ = ಪಾಪಿಷ್ಠನೋ ಸಃ = ಅವನು ಕೇಶವಂ = ಶ್ರೀ ಕೃಷ್ಣನನ್ನು ಅವಾಪ = ಹೊಂದಿದನು. ಭಗವಾನ್ = ಪೂರ್ಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ಅಸ್ಯ= ಈ ಕೇಶಿಯ ಮುಖೇ = ಬಾಯಿಯಲ್ಲಿ ಬಾಹುಂ = ಭುಜವನ್ನು ಪ್ರಾವೇಶಯತ್ = ಪ್ರವೇಶಿಸಿದನು. ಸಃ = ಆ ಶ್ರೀಕೃಷ್ಣನು ಅಸ್ಯ = ಈ ಕೇಶಿಯ ದೇಹೇ = ಶರೀರದಲ್ಲಿ ವವೃಧೇ = ವೃದ್ಧಿಯನ್ನು ಹೊಂದಿದನು. ॥ ೮೦ ॥

ತತ್ಬಾಹುನಾಯು ಕುಮತಿಃ ಸಕೃತಪ್ರಯಾಸಃ ಶೀರ್ಣಾಸ್ಯದಂತದಶನಚ್ಛದರುದ್ಧವಾಯುಃ ।
ದೀರ್ಣಃ ಪಪಾತಚ ಮೃತೋಹರಿರಪ್ಯಶೇಷೈಃ ಬ್ರಹ್ಮೇಶಶಕ್ರದಿನಕೃತ್ಪ್ರಮುಖೈಃ ಸ್ತುತೋಽಭೂತ್ ॥೮೧॥

ತತ್ಬಾಹುನಾಯಃ=ಆಕೃಷ್ಣನ ಭುಜವನ್ನು ತಿನ್ನುವುದಕ್ಕೋಸ್ಕರ ಕೃತಪ್ರಯಾಸಃ = ಮಾಡಲ್ಪಟ್ಟ ಪ್ರಯತ್ನವುಳ್ಳ ಕುಮತಿಃ = ದುಷ್ಟಬುದ್ಧಿವುಳ್ಳ ಸಃ=ಆ ಕೇಶಿಯು ಶೀರ್ಣಾಸ್ಯದಂತದಶನಚ್ಛದರುದ್ಧ ವಾಯುಃ=ಶೀಳಲ್ಪಟ್ಟ ಮುಖವೂ, ಹಲ್ಲುಗಳೂ, ಹಲ್ಲುಗಳನ್ನೂ ಆಚ್ಛಾದಿಸುವ ತುಟಿಗಳೂ ಇವುಗಳುಳ್ಳವನಾಗಿಯೂ ಹಾಗೆಯೇ ಕಂತ್ರಿಗೆಯಲ್ಲಿ ಶ್ರೀಕೃಷ್ಣನ ಕೈಯ ವೃದ್ಧಿಯಿಂದ ತಡೆಯಲ್ಪಟ್ಟ ಶ್ವಾಸವಾಯು ಉಳ್ಳವನಾಗಿಯೂ ದೀರ್ಣಾಃಸನ್=ಶೀಳಲ್ಪಟ್ಟ ದೇಹವುಳ್ಳವನಾಗಿ ಪಪಾತ= ಬಿದ್ದನು. ಮೃತಶ್ಚ=ಸತ್ತನು ಹರಿಃ=ಶ್ರೀಕೃಷ್ಣನು ಬ್ರಹ್ಮೇಶಶಕ್ರದಿನಕೃತ್ಪ್ರಮುಖೈಃ=ಬ್ರಹ್ಮನು, ರುದ್ರನು, ಸೂರ್ಯನು ಇವರೇ ಪ್ರಧಾನರಾಗಿ ಉಳ್ಳ ಅಶೇಷೈಃ=ಎಲ್ಲಾ ದೇವತೆಗಳಿಂದ ಸ್ತುತಃ=ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವನು ಅಭೂತ್= ಆದನು. ॥ ೮೧ ॥

ವ್ಯೋಮಶ್ಚನಾಮ ಮಯಸೂನುರಜಪ್ರಸಾದಾಲ್ಲಬ್ಧಾಯುತಾಯು ರಖಿಲಾನ್ವಿದಧೇ ಬಿಲೇ ಸಃ ॥
ತಂ ಶ್ರೀಪತಿಃ ಸುರಪತಿಃ ಪಶುವದ್ವಿಶಸ್ಯ ನಿಸ್ಸಾರಿತಾನ್ಖಿಲಮುಖಾದಖಿಲಾಂಶ್ಚಕಾರಃ ॥ ೮೨ ॥

ಮಯಸೂನುಃ=ಮಯನೆಂಬ ದೈತ್ಯ ಬಡಗಿಯ ಮಗನಾದ ಅಜಪ್ರಸಾದಾತ್=ಬ್ರಹ್ಮನ ವರಪ್ರಸಾದದಿಂದ ಲಬ್ಧಾಯುತಾಯುಃ=ಹೊಂದಲ್ಪಟ್ಟ ದೀರ್ಘವಾದ ಆಯುಸ್ಸುಳ್ಳ ವ್ಯೋಮಃ=ವ್ಯೋಮನೆಂದು ನಾಮ = ಪ್ರಸಿದ್ಧನಾದ ಯಃ=

ಯಾವ ಅಸುರನೋ ಸಚ=ಅವನೇ ಅಖಿಲಾನ್=ಎಲ್ಲಾ ಗೋಪರನ್ನೂ ಬಿಲೆ=ಗುಹೆಯಲ್ಲಿ ವಿದಧೇ=ಇಟ್ಟನು ಸುರಪತಿಃ = ದೇವಾವತಾರರಾದ ಗೊಲ್ಲರಿಗೆ ಸ್ವಾಮಿಯಾದ ಶ್ರೀಪತಿಃ=ಲಕ್ಷ್ಮೀಪತಿಯಾದ ಶ್ರೀಕೃಷ್ಣನು ತಂ=ಅವ್ಯೋಮಾಸುರನನ್ನು ಪಶುವತ್=ಪಶುವಿನಂತೆ ವಿಶಸ್ಯ=ಕೊಂದು ಬಿಲಮುಖಾತ್ = ಗುಹೆಯ ದೆಸೆಯಿಂದ ಅಖಿಲಾನ್=ಎಲ್ಲಾ ಗೋಪರನ್ನೂ ನಿಸ್ಸಾರಿತಾನ್=ಹೊರಪಡಿಸಿದವರನ್ನಾಗಿ ಚಕಾರ=ಮಾಡಿದನು. ॥ ೮೨ ॥

ಕುರ್ವತ್ತನನ್ಯವಿಷಯಾಣಿ ದುರಂತಶಕ್ತೌ ಕರ್ಮಾಣಿಗೋಕುಲಗತೇಽಖಿಲಲೋಕನಾಥೇ ॥
ಕಂಸಾಯ ಸರ್ವಮವದತ್ಸುರ ಕಾರ್ಯಹೇತೋಃ ಬ್ರಹ್ಮಾಂಕಜೋಮುನಿರಕಾರಿಯದೀಶಪಿತ್ರಾ ॥ ೮೩ ॥

ಗೋಕುಲಗತೇ=ಗೋಕುಲದಲ್ಲಿರತಕ್ಕ ಅಖಿಲಲೋಕನಾಥೇ = ಎಲ್ಲಾ ಲೋಕಗಳಿಗೂ ಸ್ವಾಮಿಯಾದ ದುರಂತ ಶಕ್ತೌ=ಅಪರಿಮಿತ ಸಾಮರ್ಥ್ಯವುಳ್ಳ ಶ್ರೀಕೃಷ್ಣನು ಅನನ್ಯವಿಷಯಾಣಿ=ಇನ್ನೊಬ್ಬರಿಂದ ಮಾಡಲಿಕ್ಕೆ ಅಶಕ್ಯಗಳಾದ ಕರ್ಮಾಣಿ=ಕೆಲಸಗಳನ್ನು ಕುರ್ವತಿಸತಿ=ಮಾಡುತ್ತಿರಲು ಬ್ರಹ್ಮಾಂಕಜಃ=ಬ್ರಹ್ಮನ ತೊಡೆಯಿಂದ ಹುಟ್ಟಿದ ಮುನಿಃ=ಮುನಿಗಳಾದ ನಾರದರು ಈಶಪಿತ್ರಾ=ಜಗದೊಡೆಯನಾದ ಶ್ರೀಕೃಷ್ಣನ ತಂದೆಯಾದ ವಸುದೇವನಿಂದ ಯತ್=ತನ್ನ ಮಗನಾದ ಶ್ರೀಕೃಷ್ಣನನ್ನು ರಾತ್ರಿಯಲ್ಲಿ ಗೋಕುಲದಲ್ಲಿಟ್ಟ ದುರ್ಗಾನಯನಾದ ಯಾವ ಕರ್ಮವು ಅಕಾರಿ=ಮಾಡಲ್ಪಟ್ಟಿತೋ ತತ್ಸರ್ವಂ= ಅವೆಲ್ಲವನ್ನೂ ಸುರಕಾರ್ಯಹೇತೋಃ=ನಿರಪರಾಧಿಯಾದ ಕಂಸನ ಹಿತನವು ಯೋಗ್ಯವಲ್ಲದ್ದರಿಂದ ತಂದೆ ತಾಯಿಗಳ ಶೃಂಖಲಾ ಬಂಧನದಿಂದ ಅಪರಾಧವುಳ್ಳವನನ್ನಾಗಿ ಮಾಡತಕ್ಕ ದೇವಕಾರ್ಯ-ಕ್ಕೋಸ್ಕರ ಕಂಸಾಯ=ಕಂಸನಿಗೋಸ್ಕರ ಅವದತ್=ಹೇಳಿದರು. ॥ ೮೩ ॥

ಶ್ರುತ್ವಾತಿಕೋಪರಭಸೋಚ್ಚಲಿತಸ್ಯ ಕಂಸೋ ಬದ್ಧ್ವಾಸಭಾರ್ಯಮಥ ಶೂರಜ ಮುಗ್ರಕರ್ಮಾ ।
ಆಕ್ರೂರಮಾಶ್ವದಿಶದಾನಯನಾಯ ವಿಷ್ಣೋರಾಮಾನ್ವಿತಸ್ಯ ಸಹಗೋಪಗಣೈರಥೇನ ॥ ೮೪ ॥

ಅತಿಕೋಪರಭಸೋಚ್ಚಲಿತಃ=ಅತಿಯಾದ ಸಿಟ್ಟಿನ ವೇಗದಿಂದ ಚಂಚಲನಾದ ಉಗ್ರಕರ್ಮಾ=ಕ್ರೂರವಾದ ಕೆಲಸವುಳ್ಳ ಸಕಂಸಃ=ಆ ಕಂಸನು ಶ್ರುತ್ವಾ=ನಾರದರ ಮಾತನ್ನು ಕೇಳಿ ಸಭಾರ್ಯಂ=ಹೆಂಡತಿಯಾದ ದೇವಕಿಯಿಂದ ಕೂಡಿದ ಶೂರಜಂ=ಶೂರನ ಮಗನಾದ ವಸುದೇವನನ್ನು ಬದ್ಧ್ವಾ=ಕಟ್ಟಿಹಾಕಿ ಗೋಪಗಣೈಃ=ಗೊಲ್ಲರ ಸಮೂಹದಿಂದ ಸಹ = ಕೂಡಿ ಕೊಂಡು ರಾಮಾನ್ವಿತಸ್ಯ=ಬಲರಾಮನಿಂದ ಕೂಡಿದ ವಿಷ್ಣೋ = ಶ್ರೀ ಕೃಷ್ಣನನ್ನು ರಥೇನ=ರಥದಿಂದ ಆನಯನಾಯ=ಕರೆದು ಕೊಂಡು ಬರುವುದಕ್ಕೋಸ್ಕರ ಆಶು=ಕೂಡಲೇ ಅಕ್ರೂರಂ=ಅಕ್ರೂರನನ್ನು ಆದಿಶತ್=ಕಳುಹಿಸಿದನು. ॥ ೮೪ ॥

ಸಂಸೇವನಾಯ ಸ ಹರೇರಭವತ್ಪುರೈವ ನಾಮ್ನಾ ಕಿಶೋರ ಇತಿ ಯಃ ಸುರಗಾಯಕೋಽಭೂತ್ ।
ಸ್ವಾಯಂಭುವಸ್ಯಚ ಮನೋಃ ಪರಮಾಂಶಯುಕ್ತ ಆವೇಶಯುಕ್ಕಮಲಜಸ್ಯ ಬಭೂವವಿದ್ವಾನ್ ॥ ೮೫ ॥

ಪುರಾ=ಹಿಂದೆ ನಾಮ್ನಾ = ಹೆಸರಿನಿಂದ ಕಿಶೋರಇತಿ=ಕಿಶೋರನೆಂದು. ಯಃ=ಯಾವ ಸುರಗಾಯಕಃ=ದೇವಗಂಧರ್ವನು ಅಭೂತ್=ಇದ್ದನೋ ಸಃ=ಆ ಕಿಶೋರನು ಹರೇಃ=ಶ್ರೀ ಕೃಷ್ಣನ ಸಂಸೇವನಾಯೈವ=ಜನ್ಮಾಗಿ ಸೇವೆ ಮಾಡುವುದಕ್ಕೋಸ್ಕರವೇ ಅಭವತ್ = ಅಕ್ರೂರನಾಗಿ ಹುಟ್ಟಿದನು. ಸಃ=ಅವನು ಸ್ವಾಯಂಭುವಸ್ಯಮನೋಃ=ಸ್ವಾಯಂಭುವ ಮನುವಿನ ಪರಮಾಂಶಯುಕ್ತಃ=ಉತ್ತಮ ಅಂಶದಿಂದ ಕೂಡಿದವನು ಕಮಲಜಸ್ಯ=ಕಮಲದಿಂದ ಹುಟ್ಟಿದ ಬ್ರಹ್ಮನ ಆವೇಶಯ ಏಕ್= ಆವೇಶದಿಂದ ಕೂಡಿದವನು ವಿದ್ವಾನ್=ಜ್ಞಾನಿಯೂ ಬಭೂವ=ಆದನು ॥ ೮೫ ॥

ಸ್ಯೋಽಕ್ರೂರಇತ್ಯಭವನುತ್ತಮ ಪೂಜ್ಯಕರ್ಮಾವೃಷ್ಣಿಷ್ವಥಾಸ ಸಹಿ ಭೋಜಪತೇಶ್ಚ ಮಂತ್ರೀ ॥
ಆದಿಷ್ಟವಿವ ಜಗದೀಶ್ವರ ದೃಷ್ಟಿ ಹೇತೋರಾನಂದಪೂರ್ಣಸುಮನಾ ಅಭವತ್ ಕೃತಾರ್ಥಃ ॥ ೮೬ ॥

ಉತ್ತಮಪೂಜ್ಯಕರ್ಮಾ=ಶ್ರೇಷ್ಠರಾದ ಬ್ರಹ್ಮಾದಿಗಳಿಂದ ಪೂಜಿಸಲು ಯೋಗ್ಯನಾದ ಪರಮಾತ್ಮನಿಗೆ ಪ್ರೀತಿಯನ್ನುಂಟುಮಾಡುವ ಕೆಲಸವುಳ್ಳ ಸಃ=ಅವನು ವೃಷ್ಣಿಷು=ಯಾದವರಲ್ಲಿ ಅಕ್ರೂರಇತಿ=ಅಕ್ರೂರನೆಂದು ಪ್ರಸಿದ್ಧನು ಅಭವತ್=ಆದನು ಅಥ=ಅನಂತರ ಸಹಿ=ಅವನೇ ಭೋಜಪತೇಃ=ಭೋಜರಿಗೆ ಸ್ವಾಮಿಯಾದ ಕಂಸನಿಗೆ ಮಂತ್ರೀ=

ಮಂತ್ರಿಯು ಆಸ=ಆದನು ಆದಿಷ್ಟವಿವ=ಕಂಸನಿಂದ ಆಜ್ಞಾಪಿಸಲ್ಪಟ್ಟ ಆ ಅಕ್ರೂರನೇ ಜಗದೀಶ್ವರ ದೃಷ್ಟಿಹೇತೋಃ=ಜಗದೊಡೆಯನಾದ ಶ್ರೀಕೃಷ್ಣನ ದರ್ಶನನಿಮಿತ್ತದಿಂದ ಆನಂದ ಪೂರ್ಣಸುಮನಾಃ = ಸಂತೋಷದಿಂದ ತುಂಬಿದ ಶೋಭನ ಮನಸ್ಸುಳ್ಳವನೂ ಕೃತಾರ್ಥಃ=ಮಾಡಲ್ಪಟ್ಟ ಪ್ರಯೋಜನವುಳ್ಳವನು ಅಂದರೆ ಕೃತಕೃತ್ಯನು ಅಭವತ್=ಆದನು. ॥ ೪೬ ॥

ಆರುಹ್ಯತದ್ರಥವರಂ ಭಗವತ್ಪದಾಬ್ಜಮಬ್ಜೋದ್ಭವಪ್ರಣತ ಮಂತರ ಮಂತರೇಣ ॥
ಸಂಚಿಂತಯನ್ ಪಥಿಜಗಾಮ ಸಗೋಷ್ಠಮಾರಾತ್ ದೃಷ್ಟ್ವಾಪದಾಂಕಿತಭುವಂ ಮುಮುದೇಪರಸ್ಯ॥೪೭॥

ಸಃ = ಆ ಅಕ್ರೂರನು ತದ್ರಥವರಂ=ಕೃಷ್ಣನಿಗೋಸ್ಕರ ಕಂಸನಿಂದ ಕೊಡಲ್ಪಟ್ಟ ಶ್ರೇಷ್ಠರಥವನ್ನು ಆರುಹ್ಯ=ಏರಿ ಅಬ್ಜೋದ್ಭವಪ್ರಣತಂ=ಬ್ರಹ್ಮನಿಂದ ನಮಸ್ಕರಿಸಿಕೊಳ್ಳಲ್ಪಟ್ಟ ಭಗವತ್ಪದಾಬ್ಜಂ=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನ ಪಾದಕಮಲವನ್ನು ಅಂತರಂ=ವ್ಯವಧಾನವನ್ನು ಅಂತರೇಣ = ಹೊರತು ಅಂದರೆ ನಿರಂತರವಾಗಿ ಪಥಿ=ದಾರಿಯಲ್ಲಿ ಸಂಚಿಂತಯನ್‌ಸನ್=ಚೆನ್ನಾಗಿ ಧ್ಯಾನಮಾಡತಕ್ಕವನಾಗಿ ಗೋಷ್ಠಂ=ನಂದಗೋಕುಲವನ್ನು ಕುರಿತು ಜಗಾಮ=ಹೋದನು ಆರಾತ್=ನಂದಗೋಕುಲದ ಸಮೀಪದಲ್ಲಿ ಪರಸ್ಯ=ಸರ್ವೋತ್ತಮನಾದ ಶ್ರೀಕೃಷ್ಣನ ಪದಾಂಕಿತಭವಂ=ಪಾದದಿಂದ ಚಿಹ್ನಿತವಾದ ಭೂಮಿಯನ್ನು ಆರಾತ್=ದೂರದಲ್ಲಿ ದೃಷ್ಟ್ವಾ=ನೋಡಿ ಮುಮುದೇ=ಸಂತೋಷಪಟ್ಟನು. ॥ ೪೭ ॥

ಸೋಽಚೇಷ್ಟತಾತ್ರಜಗದೀಶಿತುರಂಗ ಸಂಗಾಲ್ಲಬ್ಧೋಚ್ಚಯೇನ ನಿಖಿಲಾಘವಿದಾರಣೇಷು ॥
ಪಾಂಸುಷ್ವಜೇಶಪುರುಹೂತ ಮುಖೋಚ್ಚವಿದುದ್ಭ್ರಾಜತ್ಕಿರೀಟ ಮಣಿಲೋಚನ ಗೋಚರೇಷು ॥ ೪೮ ॥

ಸಃ=ಆ ಅಕ್ರೂರನು ಅತ್ರ=ಈ ಭೂಲೋಕದಲ್ಲಿ ಜಗದೀಶಿತುಃ=ಲೋಕಕ್ಕೆ ಸ್ವಾಮಿಯಾದ ಶ್ರೀಕೃಷ್ಣನ ಅಂಗ ಸಂಗಾತ್=ಆ ಪಾದದ ಸಂಬಂಧದಿಂದ ಲಬ್ಧೋಚ್ಚಯೇನ=ಹೊಂದಲ್ಪಟ್ಟ ಉತ್ತಮತ್ವದಿಂದ ನಿಖಿಲಾಘವಿದಾರಣೇಷು= ಎಲ್ಲಾ ಪಾಪಗಳನ್ನು ನಾಶಮಾಡತಕ್ಕ ಅಜೇಶ ಪುರುಹೂತಮುಖೋಚ್ಚವಿದುದ್ಭ್ರಾಜತ್ಕಿರೀಟಮಣಿಲೋಚನ ಗೋಚರೇಷು= ಬ್ರಹ್ಮನು, ರುದ್ರನು, ಇಂದ್ರನು ಇವರೇ ಪ್ರಧಾನರಾಗಿ ಉಳ್ಳ ಶ್ರೇಷ್ಠರಾದ ಕಾಮಾದಿಗಳ ಮಿಂಚಿನಂತೆ ಪ್ರಕಾಶಿಸುವ ಕಿರೀಟಗಳಲ್ಲಿರುವ ರತ್ನಗಳಿಗೂ ಕಣ್ಣುಗಳಿಗೂ ವಿಷಯಗಳಾದ ಅಂದರೆ ಶಿರಸ್ಸುಗಳಿಂದ ನಮಸ್ಕರಿಸಲ್ಪಡುವ ಕಣ್ಣುಗಳಿಂದ ಆದರ ಪೂರ್ವಕ ಕಾಣಲ್ಪಡುವ ಪಾಂಸುಷು=ಧೂಳಿಗಳಲ್ಲಿ ಅಚೇಷ್ಟತ = ಹೊರಳಾಡಿದನು. ॥ ೪೮ ॥

ಸೋಽಪಶ್ಯತಾಥ ಜಗದೇಕಗುರುಂ ಸಮೇತಮಗ್ರೋದ್ಭವೇನ ಭುವಿಗಾ ಅಪಿದೋಹಯಂತಂ ।
ಆನಂದಸಾಂದ್ರ ತನುಮಕ್ಷಯ ಮೇನಮೀಕ್ಷ್ಯ ಹೃಷ್ಟಃ ಪಪಾತಪದಯೋಃಪುರುಷೋತಮಸ್ಯ ॥ ೪೯ ॥

ಅಥ=ಅನಂತರ ಸಃ=ಆ ಅಕ್ರೂರನು ಜಗದೇಕ ಗುರುಂ=ಲೋಕಕ್ಕೆ ಮುಖ್ಯ ಉಪದೇಶಕನಾದ ಅಗ್ರೋದ್ಭವೇನ= ಮೊದಲು ಹುಟ್ಟಿದ ಬಲರಾಮನಿಂದ ಸಮೇತಂ=ಕೂಡಿದ ಭುವ್ಯಪಿ=ಭೂಲೋಕದಲ್ಲಿಯೂ ಕೂಡ ಶಿಷ್ಟಪರಿಪಾಲನೆಗೋಸ್ಕರ ಅವತಾರ ಮಾಡಿದ ಗಾಃ=ಗೋವುಗಳನ್ನು ದುಹಂತಂ=ಕರೆಯುತ್ತಕ್ಕ ಆನಂದಸಾಂದ್ರತನುಂ=ಸಂತೋಷದಿಂದ ನಿಬಿಡವಾದ ಶರೀರವುಳ್ಳ ಅಕ್ಷಯಂ=ನಾಶವಿಲ್ಲದ ಏನಂ=ಈ ಶ್ರೀಕೃಷ್ಣನನ್ನು ಇಕ್ಷ್ಯ=ನೋಡಿ ಹೃಷ್ಟಃಸನ್=ಸಂತೋಷ್ಟನಾಗಿ ಪುರುಷೋತ್ತಮಸ್ಯ=ಕ್ಷರಾಕ್ಷರ ಪುರುಷರಿಂದ ಉತ್ತಮನಾದ ಶ್ರೀಕೃಷ್ಣನ ಪದಯೋಃ=ಪಾದಗಳಲ್ಲಿ ಪಪಾತ=ಬಿದ್ದನು. ॥ ೪೯ ॥

ಉತ್ಥಾಪ್ಯ ತಂ ಯದುಪತಿಃ ಸಬಲೋಗೃಹಂ ಸ್ವಂ ನೀತ್ವೋಪಚಾರಮಖಿಲಂ ಪ್ರವಿಧಾಯತಸ್ಮಿನ್ ।
ನಿತ್ಯೋದಿತಾಕ್ಷಯ ಚಿದಪ್ಯಖಿಲಂ ಸ ತಸ್ಮಾತ್ ಶುಶ್ರಾವ ಲೋಕಚರಿತಾನುವಿಡಂಬನೇನ ॥ ೫೦ ॥

ಸಬಲಃ=ಬಲರಾಮನಿಂದ ಕೂಡಿದ ಯದುಪತಿಃ=ಯದುಗಳಿಗೆ ಸ್ವಾಮಿಯಾದ ಶ್ರೀಕೃಷ್ಣನು ತಂ=ಆ ಅಕ್ರೂರನನ್ನು ಉತ್ಥಾಪ್ಯ=ಎಬ್ಬಿಸಿ ಸ್ವಂ=ತನ್ನ ಗೃಹಂ=ಮನೆಯನ್ನು ನೀತ್ವಾ = ಕರೆದುಕೊಂಡು ಹೋಗಿ ಅಖಿಲಂ ಉಪಚಾರಂ=ಎಲ್ಲಾ ಷೋಡಶೋಪಚಾರವನ್ನು ತಸ್ಮಿನ್=ಆ ಅಕ್ರೂರನಲ್ಲಿ ಪ್ರವಿಧಾಯ=ಮಾಡಿ ನಿತ್ಯೋದಿತಾಕ್ಷಯಂ ಚಿದಪಿ=ನಿತ್ಯವಾದ ಪ್ರಕಟವಾದ ಹ್ರಾಸವಿಲ್ಲದ ಜ್ಞಾನವುಳ್ಳವನಾದರೂ ಸಃ=ಆ ಶ್ರೀಕೃಷ್ಣನು ಯಸ್ಮಾತ್=ಯಾವ ಕಾರಣದಿಂದ ಲೋಕಚರಿತಾನು ವಿಡಂಬನೇನ=ಅಜ್ಞ ಜನರ ಸಂಬಂಧಿಯಾದ ಕೇಳೋಣವೇ ಮೊದಲಾದ ಆಚಾರದ ಅನುಕರಣೆಯಿಂದ ಯುಕ್ತಃ=ಕೂಡಿದ

ವನೋ ತಸ್ಮಾತ್=ಆ ಕಾರಣದಿಂದ ತಸ್ಮಾತ್=ಆ ಅಕ್ರೂರನಿಂದ ಅಖಿಲಂ=ಎಲ್ಲಾ ಆಗಮನಾದಿ ಕಾರಣವನ್ನ ಶುತ್ರಾವ= ಕೇಳಿದನಂ. ॥ ೯೦ ॥ ಯಸ್ಮಾತ್ ಎಂದು ಅಧ್ಯಾಹಾರ ಮಾಡಿ ತಸ್ಮಾತ್ ಎಂಬುದನ್ನ ಆವೃತ್ತಿ ಮಾಡಿ ದುರ್ಘಟ ಭಾವ ದೀಪಿಕೆ ಯಲ್ಲಿ ಹೇಳಿರುವರು.

ಶ್ರುತ್ವಾ ಸ ಕಂಸಹೃದಿ ಸಂಸ್ಥಿತ ಮಬ್ಜನಾಭಃ ಪ್ರಾತಸ್ತ್ತಗೋಪಸಹಿತೋ ರಥಮಾರುರೋಹ ।
ರಾಮಃ ಶ್ವಫಲ್ಕತನಯಾಭಿಯುತೋ ಜಗಾಮ ಯಾನೇನತೇನಯಮುನಾ ತಟಮವ್ಯಯಾತ್ಮಾ ॥ ೯೧ ॥

ಅಬ್ಜನಾಭಃ=ಕಮಲವು ನಾಭಿಯಲ್ಲಿ ಉಳ್ಳ ಸಃ=ಆಶ್ರೀಕೃಷ್ಣನು ಕಂಸಹೃದಿ=ಕಂಸನ ಮನಸ್ಸಿನಲ್ಲಿ ಸಂಸ್ಥಿತಂ=ಇರತಕ್ಕ ಅಭಿಪ್ರಾಯವನ್ನು ಶ್ರುತ್ವಾ=ಕೇಳಿ ಪ್ರಾತಃ=ಬೆಳಿಗ್ಗೆ ಗೋಪಸಹಿತಃ ಸನ್ = ಗೊಲ್ಲರಿಂದ ಕೂಡಿದವನಾಗಿ ರಥಂ = ಸ್ಯಂದನವನ್ನು ಆರುರೋಹ = ಏರಿದನಂ. ರಾಮಶ್ವಫಲ್ಕತನಯಾಭಿಯುತಃ = ಬಲರಾಮನೂ ಶ್ವಫಲ್ಕನ ಮಗನಾದ ಅಕ್ರೂರನೂ ಇವರಿಂದ ಕೂಡಿದ ಅವ್ಯಯಾತ್ಮಾ= ನಾಶರಹಿತವಾದ ದೇಹವುಳ್ಳ ಶ್ರೀಕೃಷ್ಣನು ತೇನ= ಆ ಕಂಸನು ಕಳುಹಿಸಿದ ಯಾನೇನ = ರಥದಿಂದ ಯಮುನಾತಟಂ = ಯಮುನಾ ನದಿಯ ತಡವನ್ನು ಕುರಿತು ಜಗಾಮ = ಹೊರಟನು. ॥ ೯೧ ॥

ಸಂಸ್ಥಾಪ್ಯತೌರಥವರೇ ಜಗತಾಭಿ ವಂದ್ಯೌ ಶ್ವಾಫಲ್ಕಿರಾಶ್ವವತತಾರ ಯಮುಸ್ವಸಾರಮ್ ।
ಸ್ನಾತ್ವಾಸ ತತ್ರ ವಿಧಿನೈವ ಕೃತಾಘಮರ್ಷಃ ಶೇಷಾಸನಂ ಪರಮಪುರುಷಮತ್ರ ಚೈಕ್ಷತ್ ॥ ೯೨ ॥

ಶ್ವಾಫಲ್ಕಿಃ = ಶ್ವಫಲ್ಕನ ಮಗನಾದ ಅಕ್ರೂರನು ಜಗತಾಭಿವಂದ್ಯೌ = ಜಗತ್ತಿನಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕ ತೌ = ಆ ರಾಮಕೃಷ್ಣರನ್ನು ರಥವರೇ = ಶ್ರೇಷ್ಠ ರಥದಲ್ಲಿ ಸಂಸ್ಥಾಪ್ಯ = ಕುಳ್ಳಿರಿಸಿ ಆಶು = ಕೂಡಲೇ ಅವತತಾರ = ರಥದಿಂದ ಕೆಳಗೆ ಇಳಿದನು. ಸಃ = ಆ ಅಕ್ರೂರನು ಯಮುಸ್ವಸಾರಂ=ಯಮುನ ತಂಗಿಯಾದ ಯಮುನಾ ನದಿಯನ್ನು ಪ್ರಾಪ್ಯ= ಹೊಂದಿ ತತ್ರ=ಆ ಯಮುನಾ ನದಿಯಲ್ಲಿ ವಿಧಿನೈವ=ಸಾನ್ನ ಮಾಡುವ ವಿಧಿಯಿಂದಲೇ ಸ್ನಾತ್ವಾ=ಸ್ನಾನ ಮಾಡಿ ಕೃತಾಘ ಮರ್ಷಃ=ಮಾಡಲ್ಪಟ್ಟ 'ಋತಂ' ಚೇತ್ಯಾದಿ ಅಘಮರ್ಷಣ ಮಂತ್ರವುಳ್ಳವನಾಗಿ ಶೇಷಾಸನಂ = ಅನಂತನು ಆಗಸನನಾಗಿ ಉಳ್ಳ ಪರಮಪುರುಷಂ=ಸರ್ವೋತ್ತಮನಾದ ಶ್ರೀಕೃಷ್ಣನನ್ನು ಅತ್ರ=ಈ ಯಮುನಾ ನೀರಿನಲ್ಲಿ ಐಕ್ಷತ್=ಕಂಡನು. ॥ ೯೨ ॥

ನಿತ್ಯಂ ಹಿ ಶೇಷಮಭಿಪಶ್ಯತಿ ಸಿದ್ಧಮಂತ್ರೋ ದಾನೇಶ್ವರಃ ಸತುತದಾದದೃಶೇ ಹರಿಂ ಚ ।
ಅಗ್ರೇಹಿ ಬಾಲತನುಮುತ್ರಸವೀಕ್ಷ್ಯಕೃಷ್ಣಃ ಕಿಂ ನಾಸ್ತಿಯಾನ ಇತಿ ಯಾನಮುಖೋಬಭೂವ ॥ ೯೩ ॥

ಸಿದ್ಧಮಂತ್ರಃ=ಅಘಮರ್ಷಣ ಮಂತ್ರದ ಸಿದ್ಧಿ ಉಳ್ಳ ದಾನಪತಿಃ=ದಾನೇಶ್ವರನಾದ ಸತು = ಆ ಅಕ್ರೂರನಾದರೂ ನಿತ್ಯಂ=ಯಾವಾಗಲೂ ಶೇಷಂ = ಅನಂತನನ್ನು ಅಭಿಪಶ್ಯತಿ = ನೋಡುತ್ತಾನೆ. ತದಾ=ಆ ದಿನದಲ್ಲಿ ಹರಿಂ ಚ=ಪರಮಾತ್ಮನನ್ನೂ ಕೂಡ ದದೃಶೇ=ನೋಡಿದನು. ಸಃ=ಆ ಅಕ್ರೂರನು ಅತ್ರಂ ಈಯಃ=ಮನೆಯಲ್ಲಿ ಅಗ್ರೇ=ಶೇಷನ ಮುಂಭಾಗದಲ್ಲಿ ಬಾಲತನುಂ=ಬಾಲಕನ ಶರೀರವುಳ್ಳ ಕೃಷ್ಣನನ್ನು ಸವೀಕ್ಷ್ಯ = ನೋಡಿ ಕೃಷ್ಣಃ = ಶ್ರೀಕೃಷ್ಣನು ಯಾನೇ = ರಥದಲ್ಲಿ ನಾಸ್ತಿ ಕಿಂ =ಇಲ್ಲವೇನೋ ಇತಿ= ಎಂದು ವಿಚಾರ ಮಾಡಿ ಯಾನಮುಖಃ=ರಥಕ್ಕೆ ಅಭಿಮುಖನು ಬಭೂವ= ಆದನು. ॥ ೯೩ ॥

ತತ್ರಾಪಿ ಕೃಷ್ಣ ಮಭಿವೀಕ್ಷ್ಯ ಪುನರ್ನಿಮಜ್ಯ ಶೇಷೋರುಭೋಗಶಯನಂ ಪರಮಂ ದದರ್ಶ ।
ಬ್ರಹ್ಮೇಶ ಶಕ್ರಮುಖದೇವಮುನೀಂದ್ರವೃಂದ ಸಂವಂದಿತಾಂಘ್ರಿಯುಗಮಿಂದಿರಯಾಸಮೇತಂ ॥ ೯೪ ॥

ತತ್ರಾಪಿ = ಆ ರಥದಲ್ಲಿಯೂ ಕೂಡ ಕೃಷ್ಣಂ = ಶ್ರೀಕೃಷ್ಣನನ್ನು ಅಭಿವೀಕ್ಷ್ಯ = ನೋಡಿ ಪುನಃ =ಮತ್ತೊಮ್ಮೆ ನಿಮಜ್ಯಂ= ನೀರಿನಲ್ಲಿ ಮುಳುಗಿ ಶೇಷೋರು ಭೋಗಶಯನಂ = ಅನಂತನ ಶ್ರೇಷ್ಠ ಶರೀರವೇ ಹಾಸಿಗೆಯಾಗಿ ಉಳ್ಳ ಅಂದರೆ ಶೇಷಶಾಯಿಯಾದ ಬ್ರಹ್ಮೇಶಶಕ್ರ ಮುಖದೇವ ಮುನೀಂದ್ರ ವೃಂದಸಂವಂದಿತಾಂಘ್ರಿಯುಗಂ= ಚತುರ್ಮುಖನಂ, ರುದ್ರನು, ಇಂದ್ರನೇ ಪ್ರಧಾನರಾಗಿ ಉಳ್ಳದೇವತೆಗಳು ಮುನಿಶ್ರೇಷ್ಠರು ಇವರ ಸಮೂಹದಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕ ಪಾದಯುಗ ಉಳ್ಳ ಇಂದಿರಯಾ= ಲಕ್ಷ್ಮಿಯಿಂದ ಸಮೇತಂ = ಕೂಡಿದ ಪರಮಂ =ಸರ್ವೋತ್ತಮನಾದ ಶ್ರೀಹರಿಯನ್ನು ದದರ್ಶ = ನೋಡಿದನು. ॥ ೯೪ ॥

ಸ್ತುತ್ವಾವರಸ್ತುತಿಭಿರವ್ಯಯಮಬ್ಜನಾಭಂ ಸೋಂತರ್ಹಿತೇಭಗವತಿ ಸ್ವಕಮಾರು ರೋಹ ।

ಯಾನಂಚ ತೇನ ಸಹಿತೋ ಭಗವಾನ್ ಜಗಾಮ ಸಾಯಂ ಪುರೀಂ ಸಹ ಬಲೋ ಮಧುರಾಮನಂತಃ ॥೯೫॥

ಸಃ= ಆ ಅಕ್ರೂರನು ವರಸ್ತುತಿಭಿಃ= ಉತ್ತಮ ಸ್ತೋತ್ರಗಳಿಂದ ಅವ್ಯಯಂ= ನಾಶವಿಲ್ಲದ ಅಬ್ಜನಾಭಂ= ಕಮಲವು ನಾಭಿಯಲ್ಲಿ ಉಳ್ಳ ಶ್ರೀಹರಿಯನ್ನು ಸ್ತುತ್ವಾ=ಸ್ತೋತ್ರಮಾಡಿ ಭಗವತಿ= ಷಡ್ಗುಣೈಶ್ವರ್ಯ ಸಂಪನ್ನನಾದ ಶೇಷ ಶಾಯಿಯಲ್ಲಿ ಅಂತರ್ಹಿತೇಸತಿ= ಅಂತರ್ಧಾನವಷ್ಟು ಹೊಂದುತ್ತಿರಲು ಸ್ವಕಂ = ತನ್ನದ್ದಾದ ರಥಂ = ಸ್ಯಂದನವನ್ನು ಆರುರೋಹ= ಏರಿದನು ಸಹಬಲಃ= ಬಲರಾಮನಿಂದ ಕೂಡಿದ ಅನಂತಃ= ಗುಣಪೂರ್ಣನಾದ ಭಗವಾನ್= ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ತೇನ= ಆ ಅಕ್ರೂರನಿಂದ ಸಹಿತಃಸನ್= ಕೂಡಿದವನಾಗಿ ಸಾಯಂ =ಸಾಯಂಕಾಲದಲ್ಲಿ ಮಧುರಾಂಪುರೀಂ= ಮಧುರಾಪಟ್ಟಣವನ್ನು ಜಗಾಮ= ಹೋದನು. ॥ ೯೫ ॥

ಅಗ್ರೇsಥ ದಾನಪತಿಮಕ್ಷಯಪೌರುಷೋsಸಾವೀಶೋ ವಿಸೃಜ್ಯಸಬಲಃ ಸಹಿತೋವಯಸ್ಯೈಃ ।

ದ್ರಷ್ಟುಂ ಪುರೀಮಭಿಜಗಾಮ ನರೇಂದ್ರ ಮಾರ್ಗೇ ಪೌರೈಃ ಕುತೂಹಲಯುತೈರಭಿಪೂಜ್ಯಮಾನಃ॥ ೯೬ ॥

ಅಥ =ಮಧುರಾ ಪ್ರವೇಶಾನಂತರ ಅಕ್ಷಯ ಪೌರುಷಃ = ನಾಶವಿಲ್ಲದ ಪರಾಕ್ರಮವುಳ್ಳ ಸಬಲಃ=ಬಲರಾಮನಿಂದ ಕೂಡಿದ ವಯಸ್ಯೈಃ = ಸಮಾನ ವಯಸ್ಕರಿಂದ ಸಹಿತ ಕೂಡಿದ ಈಶಃ = ಸ್ವಾಮಿಯಾದ ಶ್ರೀಕೃಷ್ಣನು ಅಗ್ರೇ = ಮೊದಲು ದಾನಪತಿಂ = ಅಕ್ರೂರನನ್ನು ವಿಸೃಜ್ಯ = ಕಳುಹಿಸಿನಗೇಂದ್ರ ಮಾರ್ಗೇ = ರಾಜಮಾರ್ಗದಲ್ಲಿ ಕುತೂಹಲಯುತೈಃ=ಕೌತುಕದಿಂದ ಕೂಡಿದ ಪೌರೈಃ = ಪಟ್ಟಣಿಗರಿಂದ ಅಭಿಪೂಜ್ಯಮಾನಸ್ಸನ್ ಚೆನ್ನಾಗಿ ಪೂಜಿಸಿಕೊಳ್ಳಲ್ಪಡುವವನಾಗಿ ಪುರೀಂ = ಮಧುರಾಪಟ್ಟಣವನ್ನು ದ್ರಷ್ಟುಂ = ನೋಡಲು ಅಭಿಜಗಾಮ = ಹೋದನು. ॥ ೯೬ ॥

ಆಸಾದ್ಯ ಕುಂಜರಗತಂರಜಕಂ ಯಯಾಚೇ ವಸ್ತ್ರಾಣಿ ಕಂಸದಯಿತಂ ಗಿರಿಜಾವರೇಣ ।

ಮೃತ್ಯೂಜ್ಝಿತಂ ಸಪದಿತೇನ ದುರುಕ್ತಿವಿದ್ಧಃ ಪಾಪಂ ಕರಾಗ್ರಮೃದಿತಂ ವ್ಯನಯದ್ಯಮಾಯ ॥ ೯೭ ॥

ಕೃಷ್ಣಃ = ಶ್ರೀಕೃಷ್ಣನು ಕಂಸದಯಿತಂ = ಕಂಸನಿಗೆ ಪ್ರಿಯನಾದ ಗಿರಿಜಾವರೇಣ = ಪಾರ್ವತಿಯು ವರದಿಂದ ಮೃತ್ಯೂಜ್ಝಿತಂ = ಮರಣ ರಹಿತನಾದ ಕುಂಜರಗತಂ = ಆನೆಯ ಮೇಲೆ ಕುಳಿತಿರುವ ರಜಕಂ = ಮಡಿವಾಳನನ್ನು ಆಸಾದ್ಯ = ಹೊಂದಿ ವಸ್ತ್ರಾಣಿ = ಬಟ್ಟೆಗಳನ್ನು ಯಯಾಚೇ = ಬೇಡಿದನು. ತೇನ = ಆ ಮಡಿವಾಳನಿಂದ ಸಪದಿ = ಆಗಲೇ ದುರುಕ್ತಿವಿದ್ಧಸ್ಸನ್ = ಕೆಟ್ಟ ಮಾತುಗಳಿಂದ ನಿಂದಿಸಿಕೊಳ್ಳಲ್ಪಟ್ಟವನಾಗಿ ಕರಾಗ್ರಮೃದಿತಂ = ಕೈಯ ತುದಿಯಿಂದ ಮರ್ದಿಸಲ್ಪಟ್ಟ ಪಾಪಂ = ಪಾಪಿಷ್ಠನಾದ ರಜಕನನ್ನು ಯಮಾಯ = ಮೃತ್ಯವಿಗೋಸ್ಕರ ವ್ಯನಯತ್ = ಕಳುಹಿಸಿದನು. ॥ ೯೭ ॥

ಹತ್ವಾತಮಕ್ಷತಬಲೋ ಭಗವಾನ್ಪ್ರಗೃಹ್ಯ ವಸ್ತ್ರಾಣಿ ಚಾತ್ಮಸಮಿತಾನಿ ಬಲಸ್ಯಚಾ ದಾತ್ ।

ದತ್ವಾಪರಾಣಿಸಖಿ ಗೋಪಜನಸ್ಯ ಶಿಷ್ಟಾನ್ಯಾಸ್ತ್ರೀರ್ಯತತ್ರ ಚ ಪದಂಪ್ರಣಿಧಾಯಚಾಗಾತ್ ॥ ೯೮ ॥

ಅಕ್ಷತಬಲಃ = ಕುಂಠಿತವಲ್ಲದ ಸಾಮರ್ಥ್ಯವುಳ್ಳ ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ತಂ= ಆ ರಜಕನನ್ನು ಹತ್ವಾ=ಕೊಂದು ಆತ್ಮಸಮಿತಾನಿ=ತನಗೆ ಯೋಗ್ಯಗಳಾದ ವಸ್ತ್ರಾಣಿ=ಬಟ್ಟೆಗಳನ್ನು ಪ್ರಗೃಹ್ಯ=ಸ್ವೀಕರಿಸಿ ಬಲಸ್ಯಚ=ಬಲರಾಮನಿಗೂ ಕೂಡ ವಸ್ತ್ರಾಣಿ=ಅವನಿಗೆ ಯೋಗ್ಯಗಳಾದ ವಸ್ತ್ರಗಳನ್ನು ಅದಾತ್ = ಕೊಟ್ಟನು. ಸಖಿಗೋಪಜನಸ್ಯ= ಮಿತ್ರರಾದ ಗೋಪಾಲಕರಿಗೆ ಅಪರಾಣಿ=ಅವರಿಗೆ ಯೋಗ್ಯಗಳಾದ ಇತರ ವಸ್ತ್ರಗಳನ್ನು ದತ್ವಾ=ಕೊಟ್ಟು ಶಿಷ್ಟಾನಿ=ಉಳಿದ ವಸ್ತ್ರಗಳನ್ನು ಆಸ್ತ್ರೀರ್ಯಮಾರ್ಗದಲ್ಲಿ ಬಿಡಿಸಿ ತತ್ರ=ಆ ಮಾರ್ಗದಲ್ಲಿ ಹಾಕಿದ ಬಟ್ಟೆಗಳಲ್ಲಿ ಪದಂ=ಪಾದವನ್ನು ಪ್ರಣಿಧಾಯ=ಇಟ್ಟುಕೊಂಡು ಆಗಾತ್=ಹೋದನು. ॥ ೯೮ ॥

ಗ್ರಾಹ್ಯಾಪಹೇಯ ರಹಿತೈಕಚಿದಾತ್ಮಸಾಂದ್ರ ಸ್ವಾನಂದಪೂರ್ಣವಪುರಪ್ಯಯಶೋಷಹೀನಃ ।

ಲೋಕಾನ್ವಿಡಂಬ್ಯ ನರವತ್ಸಮಲಕ್ಷ್ಯಶಾದ್ಯೈರ್ವಪ್ತ್ರಾ ವಿಭೂಷಿತ ಇವಾಭವದಪ್ರಮೇಯಃ ॥ ೯೯ ॥

ಅಪ್ರಮೇಯಃ=ತಿಳಿಯಲಂ ಅಶಕ್ಯನಾದ ಶ್ರೀಕೃಷ್ಣನು ಗ್ರಾಹ್ಯಾಪಹೇಯರಹಿತೈಕಚಿದಾತ್ಮಸಾಂದ್ರಸ್ವಾನಂದ ಪೂರ್ಣಪುರಪಿ=ಗ್ರಾಹ್ಯತ್ವ ಅಪಹೇಯತ್ವಗಳಿಂದ ರಹಿತವಾದ ಅಂದರೆ ಕೇವಲ ಸ್ವೀಕರಿಸಿಲು ಯೋಗ್ಯವೇ ಆದ ಮುಂಖ್ಯ ಜ್ಞಾನ ಸ್ವರೂಪವಾದ ನಿಬಿಡವಾದ ಸ್ವರೂಪಭೂತವಾದ ಆನಂದದಿಂದ ಪೂರ್ಣವಾದ ಶರೀರವುಳ್ಳವನಾದರೂ ಮನುಷ್ಯರ ದೇಹ ಗಳಲ್ಲಿ ಎಡಗೈ ಮೊದಲಾದದ್ದು ಅಪಹೇಯವೆಂದೂ ಬಲ ಕೈ ಮೊದಲಾದದ್ದು ಗ್ರಾಹ್ಯವೆಂಬುದಾಗಿಯೂ ವಿಭಾಗವಾಗಿದೆ ಪರಮಾತ್ಮನ ಶರೀರದಲ್ಲಿ ಈ ವಿಭಾಗವಿಲ್ಲ. ಅವನ ಶರೀರವು ಪರಮ ಮಂಗಲ ಸ್ವರೂಪವಾದದ್ದು ಎಂದರ್ಥ. ಅಯಶೋಪ ಹೀನಃ = ಉಗುರು, ರೋಮ ಮುಂತಾದವುಗಳ ವೃದ್ಧಿಹ್ರಾಸಗಳಿಂದ ರಹಿತನಾದರೂ ಕೂಡ ಲೋಕಾನ್ ವಿಡಂಬ್ಯ=ಜನರನ್ನು ಅನುಕರಿಸಿ ಸರ್ವದಾ ಇರತಕ್ಕ ಶ್ರೀಕೃಷ್ಣನು ನರವತ್=ಮನುಷ್ಯರಂತೆ ಸಮಲಕ್ತಕಾದ್ಯೈಃ=ಸಮೀಚೀನವಾದ ಲಾಕ್ಷಾವಿಕಾರ ಮೊದಲಾದ ಧಾತುಗಳಿಂದಲೂ ಕೇಶನಖಚ್ಛೇದಾದಿಗಳಿಂದಲೂ ವಪ್ರ = ಕ್ಷೌರಿಕನಿಂದ ವಿಭೂಷಿತ ಇವ = ಅಲಂಕರಿಸಿಕೊಳ್ಳಲ್ಪ ಟ್ಟವನಂತೆ ಅಭವತ್=ಆದನು. ॥ ೯೯ ॥

ಮಾಲಾಮುವಾಪ್ಯ ಚ ಸುದಾಮತ ಆತ್ಮತಂತ್ರಸ್ತಾವಚ್ಛಯೋಽನುಜಗೃಹೇ ನಿಜಪಾರ್ಷದಾಂಹಿ ।
ಪೂರ್ವಂ ವಿಕುಂಠಸದನಾದ್ಧರಿ ಸೇವನಾಯ ಪ್ರಾಪ್ತೌಭುವಂ ಮೃಜನಪುಷ್ಪಕರೌ ಪುರಾಪಿ ॥ ೧೦೦ ॥

ಅಕ್ಷಯಃ= ನಾಶವಿಲ್ಲದ ಆತ್ಮತಂತ್ರಃ=ಸ್ವತಂತ್ರನಾದ ಶ್ರೀಕೃಷ್ಣನು ಸುದಾಮತಃ=ಸುದಾಮನೆಂಬ ಮಾಲಾಕಾರನಿಂದ ಮಾಲಾಂ=ಪುಷ್ಪಮಾಲೆಯನ್ನು ಆವಾಪ್ಯ=ಹೊಂದಿ ತೇ=ಆ ನಾಪಿತ ಮಾಲಾಕಾರನನ್ನು ಅನುಜಗೃಹೇ=ಅನುಗ್ರಹಿಸಿದನು. ಪೂರ್ವ=ಹಿಂದಿನ ಜನ್ಮದಲ್ಲಿ ತೇ=ಅವರಿಬ್ಬರು ನಿಜಪಾರ್ಷದೌ=ತನ್ನ ಸೇವಕರು ಹಿ=ಯಾವ ಕಾರಣದಿಂದ ಪುರಾಪಿ= ಹಿಂದೆಯೂ ಕೂಡ ಮೃಜನ ಪುಷ್ಪಕರೌ=ನಾಪಿತ ಮಾಲಾಕಾರರೋತತಃ=ಆದ್ದರಿಂದ ಹರಿಸೇವನಾಯ=ಶ್ರೀಕೃಷ್ಣನ ಸೇವೆ ಮಾಡುವುದಕ್ಕೋಸ್ಕರ ವಿಕುಂಠ ಸದನಾತ್=ವಿಕುಂಠನಾಮಕ ಪರಮಾತ್ಮನ ಅಮೋಕ್ತ ಸ್ಥಾನವಾದ ವೈಕುಂಠದ್ದೆಸೆಯಿಂದ ಭುವಂ=ಭೂಮಿಯನ್ನು ಪ್ರಾಪ್ತೌ=ಬಂದರು. ॥ ೧೦೦ ॥

~~ಸರ್ವೇಷ್ಟಪುಷ್ಟಿಮಿಹ ತತ್ರಸರೂಪತಾಂ ಚ ಕೃಷ್ಣಸ್ತಯೋರ್ವರಮದಾದಥ ರಾಜಮಾರ್ಗೇ ।~~
ಗಚ್ಛನ್ ದದರ್ಶ ವನಿತಾಂ ನರದೇವಯೋಗ್ಯಮಾದಾಯ ಗಂಧಮುಧಿಕಂ ಕುಟಿಲಾಂವ್ರಜಂತೀಮ್ ॥೧೦೧॥

ಕೃಷ್ಣಃ=ಶ್ರೀಕೃಷ್ಣನು ತಯೋಃ=ಆ ಪಾರ್ಷದರಿಗೆ ಇಹ=ಈ ಭೂಲೋಕದಲ್ಲಿ ಸರ್ವೇಷ್ಟಪುಷ್ಟಿಂ=ಎಲ್ಲಾ ಅಭೀಷ್ಟ ಗಳ ಪೂರ್ತಿಯನ್ನು ತತ್ರ=ಆ ವೈಕುಂಠದಲ್ಲಿ ಸರೂಪತಾಂ=ಸಾರೂಪ್ಯರೂಪವಾದ ವರಂಚ=ವರವನ್ನು ಕೂಡ ಅದಾತ್= ಕೊಟ್ಟನು. ಅಥ=ಅನಂತರ ರಾಜಮಾರ್ಗೇ=ರಾಜಬೀದಿಯಲ್ಲಿ ಗಚ್ಛನ್ಸನ್=ಹೋಗತಕ್ಕವನಾಗಿ ನರದೇವಯೋಗ್ಯಾಂ= ರಾಜನಿಗೆ ಯೋಗ್ಯವಾದ ಗಂಧಂ=ಗಂಧವನ್ನು ಆದಾಯ=ಹಿಡಿದುಕೊಂಡು ವ್ರಜಂತೀಂ=ಕಂಸನ ಮನೆಗೆ ಹೋಗತಕ್ಕ ಅಧಿಕಂ=ಬಹಳ ಕುಟಿಲಾ= ವಕ್ರಳಾದ ವನಿತಾಂ = ನಾರಿಯನ್ನು ದದರ್ಶ = ನೋಡಿದನು. ॥ ೧೦೧ ॥

ತೇನಾರ್ಥಿತಾ ಸಪದಿ ಗಂಧ ಮುದಾತ್ತ್ರಿವಶ್ರಾತೇನಾಗ್ರಜೇನ ಸಹಿತೋ ಭಗವಾನ್ ಲಿಲಿಂಪೇ ।
ತಂಚಾಶ್ವಜುತ್ವ ಮನಯತ್ಯತತಯಾರ್ಥಿತೋಽಲ ಮಾಯಯಾವಿಕಾಲತ ಇತಿಪ್ರಹಸನ್ನಮುಂಚತ್ ॥೧೦೨॥

ತೇನ=ಆ ಶ್ರೀಕೃಷ್ಣನಿಂದ ಅರ್ಥಿತಾ=ಪ್ರಾರ್ಥಿಸಿಕೊಳ್ಳಲ್ಪಟ್ಟ ತ್ರಿವಕ್ರಾ=ಕುಬ್ಜೆಯು ಸಪದಿ=ವಿಚಾರ ಮಾಡದೆ ಕೂಡಲೇ ಗಂಧಂ=ಗಂಧವನ್ನು ಆದಾತ್=ಕೊಟ್ಟಳು ತೇನ = ಆ ಗಂಧದಿಂದ ಅಗ್ರಜೇನ = ಅಣ್ಣನಾದ ಬಲರಾಮನಿಂದ ಸಹಿತಃ = ಕೂಡಿದ ಭಗವಾನ್ ಶ್ರೀಕೃಷ್ಣನು ಲಿಲಿಂಪೇ = ಲೇಪಿಸಿಕೊಂಡನು ಭಗವಾನ್ = ಶ್ರೀಕೃಷ್ಣನು ತಾಂಚ = ಆ ತ್ರಿವಕ್ರೆಯನ್ನಾದರೂ ಋಜುತ್ವಂ = ನೀಟಳಾದವಳನ್ನಾಗಿ ಅನಯತ್=ಮಾಡಿದನು ತಯಾ = ಆ ತ್ರಿವಕ್ರೆಯಿಂದ ಅಲಂ ಅರ್ಥಿತಃನಿನ್ನ = ನಿನ್ನ ಸಂಗವು ತನಗಾಗಬೇಕೆಂದು ಚೆನ್ನಾಗಿ ಪ್ರಾರ್ಥಿಸಿಕೊಳ್ಳಲ್ಪಟ್ಟ ಸಃ = ಆ ಶ್ರೀಕೃಷ್ಣನು ಕಾಲತಃ= ಕಾಲಾಂತರದಲ್ಲಿ ಆಯಾಮಿ = ಬರುತ್ತೇನೆ ಇತಿ = ಎಂಬುದಾಗಿ ಪ್ರಹಸನ್ಸನ್ = ನಗತಕ್ಕವನಾಗಿ ಅಮುಂಚತ್ = ಬಿಟ್ಟನು. ॥ ೧೦೨ ॥

ಪೂರ್ಣೆಂದುವ್ಯೆಂದ ನಿವಹಾಧಿಕಕಾಂತಿಶಾಂತಸೂರ್ಯಮಿತೋರುಸರಮುದ್ಯತಿ ಸೌಖ್ಯದೇಹಃ ।

ಪೀತಾಂಬರಃಕನಕಭಾಸುರ ಗಂಧಮಾಲ್ಯಃ ಶೃಂಗಾರವಾರಿಧಿರಗಣ್ಯಗುಣೌರ್ಣವೋsಗಾತ್ ॥ ೧೦೩ ॥

ಷೋಡಶಕಲಾಪೂರ್ಣರಾದ ಚಂದ್ರರ ಸಮುದಾಯಕ್ಕೆ ಚೆನ್ನಾಗಿ ಆಧಾರಭೂತವಾದ ಯಾವ ಕಾಂತಿಯೋ ಆ ಕಾಂತಿಯಿಂದಲೂ ಅಧಿಕವಾದ ಕಾಂತಿಯಿಂದ ಮನೋಹರನಾದ ಸೂರ್ಯನಿಂದ ಮಿತವಾಗದ ಬಹಳವಾದ ಉತ್ತಮವಾದ ಶಾಂತಿಯುಳ್ಳ ಆನಂದಮಯವಾದ ಶರೀರವುಳ್ಳ [ಅಂದರೆ ಭಕ್ತರಿಗೆ ಚಂದ್ರಸಮೂಹದಂತೆ ಶಾಂತನಾಗಿ ಕಾಣತಕ್ಕವನು ದ್ವೇಷಿಗಳಿಗೆ ಮಧ್ಯಾಹ್ನದ ಸೂರ್ಯನಂತೆ ಅತ್ಯುಗ್ರನಾಗಿ ಕಾಣತಕ್ಕವನು ಎಂದು ಅಭಿಪ್ರಾಯ.] ಪೀತಾಂಬರಃ=ಹಳದಿಬಣ್ಣದ ವಸ್ತ್ರವುಳ್ಳ ಕನಕಭಾಸುರ ಗಂಧಮಾಲ್ಯಃ = ಶೃಂಗಾರದಂತೆ ಶೋಭಿಸುವ ಚಂದನಾದಿ ದ್ರವ್ಯಗಳೂ ಪುಷ್ಪಮಾಲೆಯೂ ಇವುಗಳುಳ್ಳ ಶೃಂಗಾರವಾರಿಧಿಃ = ಶೃಂಗಾರದಿಂದ ಸಮುದ್ರದಂತಿರುವ ಅಗಣ್ಯಗುಣೌರ್ಣವಃ=ಅಸಂಖ್ಯಾತ ಗುಣಗಳಿಂದ ಸಮುದ್ರದಂತಿರುವ ಶ್ರೀಕೃಷ್ಣನು ಅಗಾತ್=ಹೋದನು. ॥ ೧೦೩ ॥

ಪ್ರಾಪ್ಯಾಥ ಚಾಯುಧಗೃಹಂ ಧನುರೀಶದತ್ತಂ ಕೃಷ್ಣಃ ಪ್ರಸಹ್ಯ ಜಗೃಹೇ ಸಕಲೈರಭೇದ್ಯಂ ।

ಕಾಂಸಂ ಸ ನಿತ್ಯಪರಿಪೂರ್ಣ ಸಮಸ್ತಶಕ್ತಿರಾರೋಪ್ಯ ಚೈನಮನುಕೃಷ್ಯಬಭಂಜ ಮಧ್ಯೇ ॥ ೧೦೪ ॥

ಅಥ=ಅನಂತರ ನಿತ್ಯಪರಿಪೂರ್ಣಸಮಸ್ತಶಕ್ತಿಃ=ಸದಾತನವಾದ ಪರಿಪೂರ್ಣವಾದ ಸರ್ವವಿಷಯದಲ್ಲಿಯೂ ಸಾಮರ್ಥ್ಯವುಳ್ಳ ಸಕೃಷ್ಣ=ಆ ಶ್ರೀಕೃಷ್ಣನು ಆಯುಧಗೃಹಂ=ಆಯುಧವಿರುವ ಮನೆಯನ್ನು ಪ್ರಾಪ್ಯ=ಹೊಂದಿ ಸಕಲೈ=ಎಲ್ಲರಿಂದಲೂ ಅಭೇದ್ಯಂ=ಮುರಿಯಲು ಅಶಕ್ಯವಾದ ಈಶದತ್ತಂ=ರುದ್ರನಿಂದ ಕೊಡಲ್ಪಟ್ಟ ಕಾಂಸಂ=ಕಂಸನಿಗೆ ಇರತಕ್ಕ ಧನುಃ=ಬಿಲ್ಲನ್ನು ಪ್ರಸಹ್ಯ=ಬಲಾತ್ಕರಿಸಿ ಜಗೃಹೇ=ಹಿಡಿದನು. ಸಃ=ಆ ಶ್ರೀಕೃಷ್ಣನು ಏನಂ=ಈ ಚಾಪವನ್ನು ಆರೋಪ್ಯ=ಜ್ಯಾ ಸಹಿತವಾದದ್ದನ್ನಾಗಿ ಮಾಡಿ ಅನುಕೃಷ್ಯ=ಸೆಳೆದು ಮಧ್ಯೇ=ಮಧ್ಯಭಾಗದಲ್ಲಿ ಬಭಂಜ=ಮುರಿದನು. ॥ ೧೦೪ ॥

ತಸ್ಮಿನ್ ಸುರಾಸುರಗಣೈರಖಿಲೈರಭೇದ್ಯೇಭಗ್ನೇಬಭೂವ ಜಗದಂಡ ವಿಭೇದ ಭೀಮಃ ।

ಶಬ್ದಃ ಸಯೇನ ನಿಪಪಾತಭುವಿ ಪ್ರಭಗ್ನಸಾರೋಸುರೋಧೃತಿಯುತೋsಪಿ ತದೈವಕಂಸಃ ॥ ೧೦೫ ॥

ಅಖಿಲೈಃ=ಎಲ್ಲಾ ಸುರಾಸುರಗಣೈಃ=ದೇವದೈತ್ಯರ ಸಮೂಹಗಳಿಂದ ಅಭೇದ್ಯೇ = ಮುರಿಯಲಶಕ್ಯವಾದ ತಸ್ಮಿನ್=ಆ ಧನುಸ್ಸು ಭಗ್ನೇಸತಿ=ಮುರಿಯಲ್ಪಡುತ್ತಿರಲು ಜಗದಂಡವಿಭೇದಭೀಮಃ=ಹದಿನಾಲ್ಕು ಲೋಕಗಳಿಂದ ಕೂಡಿದ ಬ್ರಹ್ಮಾಂಡದ ಅಸ್ಫೋಟದಿಂದುಂಟಾದ ಶಬ್ದದಂತೆ ಭಯಂಕರವನ್ನುಂಟು ಮಾಡುವ ಶಬ್ದಃ = ಧ್ವನಿಯು ಬಭೂವ=ಉಂಟಾಯಿತು, ಯೇನ=ಯಾವ ಧನುರ್ಭಂಗದ ಶಬ್ದದಿಂದ ಧೃತಿಯುತೋಪಿ=ಧೈರ್ಯದಿಂದ ಕೂಡಿದವನಾದರೂ ಅಸುರಃಕಂಸಃ=ಅಸುರನಾದ ಕಂಸನು ಪ್ರಭಗ್ನಸಾರಸ್ಸನ್=ನಷ್ಟವಾದ ಬಲವುಳ್ಳವನಾಗಿ ತದೈವ=ಆ ಕ್ಷಣದಲ್ಲಿಯೇ ಭುವಿ=ಭೂಮಿಯಲ್ಲಿ ನಿಪಪಾತ=ಸಿಂಹಾಸನದಿಂದ ಬಿದ್ದನು. ॥ ೧೦೫ ॥

ಆದಿಷ್ಟಪಪ್ಯುರು ಬಲಂ ಭಗವಾನ್ ಸ ತೇನ ಸರ್ವಂ ನಿಹತ್ಯ ಸ ಬಲಃ ಪ್ರಯಯೌ ಪುನಶ್ಚ ।

ನಂದಾದಿಗೋಪಸಮಿತಿಂ ಹರಿರತ್ರ ರಾತ್ರೌ ಭುಕ್ತ್ವಾ ಪಯೋನ್ವಿತ ಶುಭಾನ್ನಮುವಾಸಕಾಮಂ ॥ ೧೦೬ ॥

ಸ ಬಲಃ=ಬಲರಾಮನಿಂದ ಕೂಡಿದ ಸ ಭಗವಾನ್=ಆ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ಆದಿಷ್ಟಂ=ಕಂಸನಿಂದ ಆಜ್ಞಾಪಿಸಲ್ಪಟ್ಟ ಸರ್ವಂ ಉರುಬಲಮಪಿ=ಎಲ್ಲಾ ಉತ್ಕೃಷ್ಟ ಸೈನ್ಯವನ್ನೂ ಕೂಡ ತೇನಃ=ಆ ಧನುಸ್ಸಿನ ತುಂಡಿನಿಂದಲೇ ನಿಹತ್ಯ=ಕೊಂದು ಪುನಶ್ಚ=ತಿರುಗಿ ನಂದಾದಿಗೋಪ ಸಮಿತಿಂ=ನಂದಗೋಪನೇ ಮೊದಲಾದ ಗೊಲ್ಲರ ಸಮೂಹವನ್ನು ಕರಿತಃ ಪ್ರಯಯೌ=ಹೋದನು. ಹರಿಃ=ಶ್ರೀಕೃಷ್ಣನು ಅತ್ರ=ನಂದಾದಿಗಳಿರುವ ಉದ್ಯಾನದಲ್ಲಿ ರಾತ್ರೌ=ರಾತ್ರಿಯಲ್ಲಿ ಪಯೋನ್ವಿತ ಶುಭಾನ್ನಂ=ಹಾಲಿನಿಂದ ಕೂಡಿದ ಶ್ರೇಷ್ಠ ಅನ್ನವನ್ನು ಭುಕ್ತ್ವಾ=ಭೋಜನ ಮಾಡಿ ಕಾಮಂ=ತನ್ನ ಇಚ್ಛೆಯನುಸಾರವಾಗಿ ಉವಾಸ=ವಾಸಮಾಡಿದನು. ॥ ೧೦೬ ॥

ಕಂಸೋಽಪ್ಯತೀವ ಭಯಕಂಪಿತ ಹೃತ್ಯರೋಜಃ ಪ್ರಾತರ್ನರೇಂದ್ರಗಣ ಮಧ್ಯಗತೋಽಧಿ ಕೋಚ್ಚಂ ।
ಮಂಚಂ ವಿವೇಶ ಸಹಜಾನ ಪದೈಶ್ಚ ಪೌದೈರ್ನಾನಾನುಮಂಚಕಗತೈರ್ಯುವತೀ ಸಮೇತೈಃ ॥ ೧೦೭ ॥

ಕಂಸೋಽಪಿ=ಕಂಸನೂ ಕೂಡ ಅತೀವ ಭಯಕಂಪಿತ ಹೃತ್ಕರೋಜಃ ಸನ್=ಅತ್ಯಂತ ಭಯದಿಂದ ಜಲಿಸುವ ಹೃತ್ಕಮಲವುಳ್ಳವನಾಗಿ ಪ್ರಾತಃ=ಬೆಳಿಗ್ಗೆ ಯುವತೀಸಮೇತೈಃ=ತರುಣಿಯರಿಂದ ಕೂಡಿದ ನಾನಾನು=ಮಂಚಕಗತೈಃ=ಅನೇಕ ವಿಧಗಳಾದ ಉಪಮಂಚಗಳಲ್ಲಿರುವ ಪೌರೈಃ=ಪಟ್ಟಣಿಗರಿಂದ ಜಾನಪದೈಶ್ಚ = ಗ್ರಾಮದಲ್ಲಿರುವವರಿಂದಲೂ ಕೂಡ ಸಹ= ಕೂಡಿಕೊಂಡು ನರೇಂದ್ರಗಣ ಮಧ್ಯಗತಃ ಸನ್ = ರಾಜರ ಸಮೂಹದ ಮಧ್ಯದಲ್ಲಿರುವವನಾಗಿ ಅಧಿಕೋಚ್ಚಂ=ಹೆಚ್ಚು ಉನ್ನತ ದಾದ ಮಂಚಂ=ಮಂಚವನ್ನು ವಿವೇಶ=ಪ್ರವೇಶಿಸಿದನು. ರಾಜಶ್ರೇಷ್ಠರು ಕುಳಿತಿರುವ ಮಂಚಗಳ ಮಧ್ಯದಲ್ಲಿರುವ ಮಂಚದಲ್ಲಿ ಕುಳಿತನು. ॥ ೧೦೭ ॥

ಸಂಸ್ಥಾಪ್ಯನಾಗಮುರುರಂಗಮುಖೇ ಕುವಲ್ಯಾಪೀಡಂ ಗಿರೀಂದ್ರಸದೃಶಂ ಕರಿಸಾದಿಯುಕ್ತಂ ।
ಚಾಣೂರಮುಷ್ಟಿಕಮುಖಾನಪಿಮಲ್ಲವೀರಾನ್ರಂಗೇ ನಿಧಾಯ ಹರಿಸಂಯಮನಂ ಕಿಲೈಚ್ಛತ್ ॥ ೧೦೮ ॥

ಕಂಸಃ=ಕಂಸನು ಉರುರಂಗಮುಖೇ=ಉತ್ಕೃಷ್ಟವಾದ ರಂಗಸ್ಥಳದ ದ್ವಾರದಲ್ಲಿ ಗಿರೀಂದ್ರ ಸದೃಶಂ=ಪರ್ವತಕ್ಕೆ ಸದೃಶವಾದ ಕರಿಸಾದಿಯುಕ್ತಂ=ಆನೆಯವಾವುತನಿಂದ ಕೂಡಿದ ಕುವಲ್ಯಾಪೀಡಂ=ಭೂಮಿಯೆಂಬ ಲತೆಯನ್ನು ಚೆನ್ನಾಗಿ ಪೀಡಿಸುವ ಅಂದರೆ ಭೂಭಾರ ಭೂತವಾವ ಕುವಲ್ಯಾಪೀಡವೆಂಬ ನಾಗಂ=ಆನೆಯನ್ನು ಸಂಸ್ಥಾಪ್ಯ=ನಿರಿಸಿ ಚಾಣೂರ ಮುಷ್ಟಿಕ ಮುಖಾನ್=ಚಾಣೂರ, ಮುಷ್ಟಿಕರೆಂಬ ಮಲ್ಲರೇ ಪ್ರಧಾನರಾಗಿ ಉಳ್ಳ ಮಲ್ಲವೀರಾನಪಿ=ಮಲ್ಲಶ್ರೇಷ್ಠರನ್ನೂ ಕೂಡ ರಂಗೇ= ರಂಗಸ್ಥಳದಲ್ಲಿ ನಿಧಾಯ=ಇಟ್ಟು ಹರಿಸಂಯಮನಂ=ಶ್ರೀಕೃಷ್ಣನನಿಗ್ರಹವನ್ನು ಐಚ್ಛತ್=ಇಚ್ಛಿಸಿದನು. ಕಿಲ=ತನಗೆ ಸರ್ವಥಾ ಅಶಕ್ಯವಾದ ಕಾರ್ಯವನ್ನು ಇಚ್ಛಿಸಿದನು. ಎಂಬುವುದು ಆಶ್ಚರ್ಯವು ॥ ೧೦೮ ॥

ಅಕ್ಷೌಹಿಣೀಗಣಿತಮಸ್ಯ ಬಲಂ ಚ ವಿಂಶದಾಸೀದಸಹ್ಯಮುರುವೀರ್ಯಮನನ್ಯವಧ್ಯಂ ।
ಶಂಭೋರ್ವರಾದಪಿಚ ತಸ್ಯ ಸುನೀಥನಾಮಾಯುಃಪೂರ್ವಮಾಸವ್ಯಕ ಇತ್ಯಸುರೋಽನುಜ್ಞೋಽಭೂತ್ ॥ ೧೦೯ ॥

ಅಸಹ್ಯಂ=ಸಹಿಸಲಿಕ್ಕೆ ಅಶಕ್ಯವಾದ ಉರುವೀರ್ಯಂ=ಬಹಳ ಪರಾಕ್ರಮ ಉಳ್ಳ ಶಂಭೋಃ=ರುದ್ರದೇವರ ವರಾತ್= ವರದಿಂದ ಅನನ್ಯವಧ್ಯಂ=ಇನ್ನೊಬ್ಬರಿಂದ ಕೊಲ್ಲಲಾಗದ ಯತ್ಬಲಂ = ಯಾವ ಸೈನ್ಯವು ಗಣಿತಂ ಚೇತ್ = ಲೆಕ್ಕ ಮಾಡಿದರೆ ವಿಂಶದಕ್ಷೌಹಿಣೀಃ=ಇಪ್ಪತ್ತು ಅಕ್ಷೌಹಿಣಿಯು ಭವತಿ=ಆಗುತ್ತದೋ ತತ್ಬಲಂ=ಆ ಸೈನ್ಯವು ತಸ್ಯ=ಈ ಕಂಸನಿಗೆ ಆಸೀತ್= ಇತ್ತ್ತ. ತಸ್ಯ=ಆ ಕಂಸನಿಗೆ ಸುನೀಥನಾಮಾ=ಸುನೀಥನೆಂದು ಹೆಸರುಳ್ಳ ಯಃ = ಯಾವ ಅನುಜಃ=ತಮ್ಮನು ಅಭೂತ್= ಇದ್ದನೋ ಸಃ=ಅವನಂ ಪೂರ್ವಂ=ಹಿಂದಿನ ಜನ್ಮದಲ್ಲಿ ವ್ಯಕ ಇತಿ ವ್ಯಕನೆಂಬ ಅಸುರಃ=ಅಸುರನು ಆಸ=ಆಗಿದ್ದನು. ॥ ೧೦೯ ॥

ಸಪ್ತಾನುಜಾ ಅಪಿಹಿತಸ್ಯ ಪುರಾತನಾಯೇ ಸರ್ವೇಪಿ ಕಂಸಪೃತನಾಸಹಿತಾಃ ಸ್ಮರಂಗೇ ।
ತಸ್ಥುಃ ಸರಾಮಮನುಭಿಯಾಂತಮುದೀಕ್ಷ್ಯ ಕೃಷ್ಣಮಾತ್ತಾಯುಧಾಯುಧಿವಿಜೇತುಮಜಂ ಸುಪಾಪಾಃ ॥೧೧೦॥

ತಸ್ಯ=ಆ ಸುನೀಥನಿಗೆ ಪುರಾತನಾಃ=ಹಿಂದಿನ ಜನ್ಮದಲ್ಲಿರುವ ಸಪ್ತಾನುಜಾಃ=ಏಳು ಮಂದಿ ತಮ್ಮಂದಿರು ಯೇ= ಯಾರೋ ತೇ = ಅವರು ಈ ಜನ್ಮದಲ್ಲಿಯೂ ಕೂಡ ತಮ್ಮಂದಿರು ಸುಪಾಪಾಃ=ಅತಿ ಪಾಪಿಷ್ಠರಾದ ಸರ್ವೇಪಿ=ಎಲ್ಲರೂ ಕೂಡ ಕಂಸಪೃತನಾ ಸಹಿತಾಃ ಸ್ವಂತಃ=ಕಂಸನ ಸೈನ್ಯದಿಂದ ಕೂಡಿದವರಾಗಿ ಸರಾಮಂ=ಬಲರಾಮನಿಂದ ಕೂಡಿದ ಅಭಿ ಯಾಂತಂ=ಎದುರಾಗಿ ಬರತಕ್ಕ ಕೃಷ್ಣಂ=ಶ್ರೀಕೃಷ್ಣನನ್ನು ಉದೀಕ್ಷ್ಯ=ನೋಡಿ ಅಜಂ=ಉತ್ಪತ್ತಿ ಇಲ್ಲದ ಶ್ರೀಕೃಷ್ಣನನ್ನು ಯುದ್ಧದಲ್ಲಿ ವಿಜೇತುಂ=ಜಯಿಸಲು ಆತ್ತಾಯುಧಾಃಸಂತಃ=ಸ್ವೀಕರಿಸಲ್ಪಟ್ಟ ಆಯುಧವುಳ್ಳವರಾಗಿ ರಂಗೇ=ರಣ ರಂಗ ಯೋಗ್ಯಸ್ಥಳದಲ್ಲಿ ತಸ್ಥುಃ=ನಿಂತರು ॥ ೧೧೦ ॥

ಕೃಷ್ಣೋಽಪಿ ಸೂರ್ಯಉದಿತೇ ಸಬಲೋವಯಸ್ಯೈಃ ಸಾರ್ಧಂ ಜಗಾಮ ವರರಂಗಮುಖಂ ಸುರೇಶೈಃ ।
ಸಂಸ್ತೂಯಮಾನ ಉರುವಿಕ್ರಮ ಆ ಸುರಾಣಾಂ ನಿರ್ಮೂಲನಾಯ ಸಕಲಾಚರಿತೋರುಶಕ್ತಿಃ ॥ ೧೧೧ ॥

ಉರುವಿಕ್ರಮಃ=ಉತ್ಕೃಷ್ಟ ಪರಾಕ್ರಮವುಳ್ಳ ಸಕಲಾಚರಿತೋರುಶಕ್ತಿಃ=ಎಲ್ಲಾ ಸೃಷ್ಟಿ ಮೊದಲಾದ ಕರ್ಮವನ್ನು ಮಾಡುವ ವಿಷಯದಲ್ಲಿ ಉತ್ಕೃಷ್ಟ ಸಾಮರ್ಥ್ಯವುಳ್ಳ ಸಬಲಃ=ಬಲರಾಮನಿಂದ ಕೂಡಿದ ಕೃಷ್ಣೋಪಿ=ಕೃಷ್ಣನಾದರೂ ಸೂರೇ=ಸೂರ್ಯನು ಉದಿತೇಸತಿ=ಉದಯಿಸುತ್ತಿರಲು ಆಸುರಾಣಾಂ=ಅಸುರರ ನಿರ್ಮೂಲನಾಯ = ನಾಶಮಾಡುವುದ ಕ್ಕೋಸ್ಕರ ಸುರೇಶೈಃ=ದೇವ ಶ್ರೇಷ್ಠರಿಂದ ಸಂಸ್ತೂಯಮಾನಸ್ಸನ್=ಚೆನ್ನಾಗಿ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟವನಾಗಿ ವಯಸ್ಯೈಃ=ಸಮಾನ ವಯಸ್ಕರಿಂದ ಸಾರ್ಧಂ=ಕೂಡಿಕೊಂಡು ವರರಂಗ ಮುಖಂ=ಉತ್ತಮ ರಂಗಸ್ಥಳದ ದ್ವಾರವನ್ನು ಕುರಿತು ಜಗಾಮ=ಹೋದನು ॥ ೧೧೧ ॥

ಆಯನ್ ಜಗದ್ಗುರುತಮೋ ಬಲಿನಂ ಗಜೇಂದ್ರಂ ರುದ್ರಪ್ರಸಾದ ಪರಿರಕ್ಷಿತಮಾಶ್ವಪಶ್ಯತ್ ॥
ದೃಷ್ಟ್ವೋರುರಂಗಮುಖ ಸಂಸ್ಥಿತಮಿಭ್ಯಚೈಭ್ಯಂ ಪಾಪಾಪಯಾಹಿನ ಚಿರಾದಿತಿ ವಾಚಮೂಚೇ॥೧೧೨॥

ಆಯನ್=ಬರತಕ್ಕ ಜಗದ್ಗುರುತಮಃ=ಜಗತ್ತಿಗೆ ಶ್ರೇಷ್ಠ ಗುರುವಾದ ಶ್ರೀಕೃಷ್ಣನು ಬಲಿನಂ=ಬಲಿಷ್ಟನಾದ ರುದ್ರ ಪ್ರಸಾದ ಪರಿರಕ್ಷಿತಂ=ರುದ್ರನ ಅನುಗ್ರಹದಿಂದ ರಕ್ಷಿಸಲ್ಪಟ್ಟ ಗಜೇಂದ್ರಂ = ಶ್ರೇಷ್ಠ ಆನೆಯನ್ನು ಆಶು=ಕೂಡಲೇ ಅಪಶ್ಯತ್=ನೋಡಿದನು ಉರುರಂಗಮುಖಿ ಸಂಸ್ಥಿತಂ=ಉತ್ಕೃಷ್ಟರಂಗ ಸ್ಥಳದ ದ್ವಾರದಲ್ಲಿರುವ ಗಜೇಂದ್ರನನ್ನು ದೃಷ್ಟ್ವಾ=ನೋಡಿ ಇಭ್ಯಂ ಚ=ಆನೆಯ ಮಾವುತನನ್ನು ಕೂಡ ಈಕ್ಷ್ಯ=ನೋಡಿ ಹೇ ಪಾಪ=ಎಲೋ ಪಾಪಿಷ್ಠನೇ ಅಪಯಾಹಿ=ದಾರಿ ಬಿಟ್ಟು ದೂರ ಹೋಗು ನಚಿರಾತ್=ವಿಳಂಬ ಮಾಡಬೇಡ ಇತಿ=ಎಂಬುದಾಗಿ ವಾಚಃ=ಮಾತನ್ನು ಊಚೇ=ಹೇಳಿದನು. ॥ ೧೧೨ ॥

ಕ್ಲಿಪ್ತಃ ಸ ಈಶ್ವರತಮೇನ ಗಿರೀಶಲಬ್ಧಾದ್ದೃಪ್ತೋ ವರಾಜ್ಜಗತಿ ಸರ್ವಜನೈರವಧ್ಯಃ ॥
ನಾಗಂತ್ವವಧ್ಯಮಭಿಯಾಪಯತೇ ತತೋsಗ್ರೇ ಪಾಪೋ ದುರಂತ ಮಹಿಮಂ ಪ್ರತಿವಾಸುದೇವಂ॥೧೧೩॥

ಗಿರೀಶಲಬ್ಧಾತ್=ಪಾರ್ವತೀಶನ ಅನುಗ್ರಹದಿಂದಾಗಿಂಟಾದ ವರಾತ್=ವರದಿಂದ ದೃಪ್ತಃ=ಉನ್ಮತ್ತವಾದ ಜಗತಿ = ಲೋಕದಲ್ಲಿ ಸರ್ವಜನೈಃ=ಎಲ್ಲರಿಂದಲೂ ಅವಧ್ಯಃ=ನಾಶರಹಿತನಾದ ಈಶ್ವರತಮೇನ = ಸರ್ವೇಶ್ವರನಾದ ಶ್ರೀ ಕೃಷ್ಣನಿಂದ ಕ್ಷಿಪ್ತಃ=ನಿಂದಿಸಿಕೊಳ್ಳಲ್ಪಟ್ಟ ಪಾಪಃ=ಪಾಪಿಷ್ಠನಾದ ಸಃ=ಆ ಇಭ್ಯನು ತತಃ=ಆರಂಗದ್ವಾರದ್ದಸೆಯಿಂದ ಅಗ್ರೇ=ಎದುರಿನಲ್ಲಿ ದುರಂತ ಮಹಿಮಂ=ಆ ನಿರವಧಿಕವಾದ ಮಹಿಮೆಯುಳ್ಳ ವಾಸುದೇವಂಪ್ರತಿ=ಶ್ರೀಕೃಷ್ಣನನ್ನು ಉದ್ದೇಶಿಸಿ ಅವಧ್ಯಂ= ನಾಶವಿಲ್ಲದ ನಾಗಂ=ಕುವಲಯಾಪೀಡವೆಂಬ ಆನೆಯನ್ನು ಅಭಿಯಾಪಯತೇ=ಕಳುಹಿಸಿಕೊಡುತ್ತಾನೆ. ॥೧೧೩ ॥

ವಿಕ್ರೀಡ್ಯತೇನ ಕರಿಣೌ ಭಗವಾನ್ ಸಕಿಂಚಿದ್ಧಸ್ತೇ ಪ್ರಗೃಹ್ಯ ವಿನಿಕೃಷ್ಯನಿಪಾತ್ಯ ಭೂಮೌ ॥
ಕುಂಭೇಪದಂ ಪ್ರತಿನಿಧಾಯ ವಿಷಾಣಯುಗ್ಮ ಮುತ್ಕೃಷ್ಯಹಸ್ತಿಪ ಮಹನ್ನಿಪಪಾತ ಸೋಽಪಿ ॥ ೧೧೪ ॥

ಭಗವಾನ್ = ಷಡ್ಗುಣೈಶ್ವರ್ಯ ಸಂಪನ್ನನಾದ ಸಃ=ಆ ಶ್ರೀಕೃಷ್ಣನು ತೇನ ಕರಿಣೌ=ಆ ಆನೆಯಿಂದ ಕಿಂಚಿತ್= ಸ್ವಲ್ಪ ವಿಕ್ರೀಡ್ಯ=ಆಟವಾಡಿ ಹಸ್ತೇ=ಸೊಂಡಿಲಲ್ಲಿ ಪ್ರಗೃಹ್ಯ=ಹಿಡಿದು ವಿನಿಕೃಷ್ಯ=ಸೆಳೆದು ಭೂಮೌ=ಭೂತಲದಲ್ಲಿ ನಿಪಾತ್ಯ= ಕೆಡಹಾಕಿ ಕುಂಭೇ = ಕುಂಭಸ್ಥಳದಲ್ಲಿ ಪದಂ=ಪಾದವನ್ನು ಪ್ರತಿನಿಧಾಯ=ಇಟ್ಟು ವಿಷಾಣಯುಗ್ಮಂ=ದಂತಗಳಿರಡರನ್ನು ಉತ್ಕೃಷ್ಯ=ಕಿತ್ತು ತೇನ=ಆ ದಂತದಿಂದ ಹಸ್ತಿಪಂ=ಆನೆಯ ಮಾವುತನನ್ನು ಆಹನ್=ಕೊಂದನು ಸೋಪಿ=ಆ ಹಸ್ತಿಪ ನಾದರೂ ಪಪಾತ=ಬಿದ್ದನು ॥ ೧೧೪ ॥

ನಾಗಂ ಸಸಾದಿನ ಮವಧ್ಯಮು ಸೌನಿಹತ್ಯ ಸ್ಕಂದೇ ವಿಷಾಣಮುವಸೃಜ್ಯ ಸಹಾಗ್ರಜೇನ ॥
ನಾಗೇಂದ್ರ ಸಾಂದ್ರಮದ ಬಿಂದುಭಿರಂಚಿತಾಂಗಃ ಪೂರ್ಣೌತ್ಮಶಕ್ತಿರಮಲಃ ಪ್ರವಿವೇಶ ರಂಗಂ ॥ ೧೧೫ ॥

ನಾಗೇಂದ್ರ ಸಾಂದ್ರಮದ ಬಿಂದುಭಿಃ=ಶ್ರೇಷ್ಠ ಆನೆಯ ನಿಬಿಡವಾದ ಮದಜಲ ಕಣಗಳಿಂದ ಅಂಚಿತಾಂಗಃ = ಚಿಹ್ನಿತವಾದ ಅವಯವ ಉಳ್ಳ ಪೂರ್ಣೌತ್ಮ ಶಕ್ತಿಃ=ಪರಿಪೂರ್ಣವಾದ ಸ್ವರೂಪ ಸಾಮರ್ಥ್ಯವುಳ್ಳ ಅಮಲಃ = ಪ್ರಾಕೃತವಾದ ಮದಜಲ ಸಂಬಂಧದಿಂದ ಪ್ರಾಪ್ತವಾದ ದೋಷವಿಲ್ಲದ ಅಸೌ=ಈ ಕೃಷ್ಣನು ಅವಧ್ಯಂ=ಇತರರಿಂದ ನಾಶವಿಲ್ಲದ ಸಸಾದಿನಂ= ಆನೆಯಮಾವುತನಿಂದಕೂಡಿದ ನಾಗಂ=ಆನೆಯನ್ನು ನಿಹತ್ಯ ಕೊಂದು ಅಗ್ರಜೇನ=ಅಣ್ಣನಿಂದ ಸಹ=ಕೂಡಿಕೊಂಡು ವಿಷಾಣಾಂ= ದಂತವನ್ನು ಸ್ಕಂದೇ=ಹೆಗಲಲ್ಲಿ ಅವಸೃಜ್ಯ=ಇಟ್ಟು ರಂಗಂ=ಯುದ್ಧರಂಗಸ್ಥಳವನ್ನು ಪ್ರವಿವೇಶ=ಪ್ರವೇಶಿಸಿದನು. ॥ ೧೧೫ ॥

ವಿಷ್ಟೇ ಜಗದ್ಗುರುತವೇ ಬಲವೀರ್ಯಮೂರ್ತೌ ರಂಗಂಮುವೋದ ಚ ಶುಶೋಷಜನೋಽಖಿಲೋ ಽತ್ರಃ।
ಕಂಜಂತಥಾಪಿ ಕುಮುದಂ ಚ ಯಥೈವಸೂರ್ಯ ಉದ್ಯತ್ಯಜೇಽನುಭವಿನೋವಿಪರೀತಕಾಶ್ಚ ॥ ೧೧೬ ॥

ಜಗದ್ಗುರುತವೇ = ಲೋಕಕ್ಕೆ ಮುಖ್ಯ ಗುರುವಾದ ಬಲವೀರ್ಯಮೂರ್ತೌ=ಬಲ ಪರಾಕ್ರಮಗಳು ಸ್ವರೂಪವಾಗಿ ಉಳ್ಳ ಶ್ರೀಕೃಷ್ಣನು ರಂಗಂ=ರಂಗಸ್ಥಳವನ್ನು ವಿಷ್ಟೇಸತಿ=ಪ್ರವೇಶಿಸುತ್ತಿರಲು ಅತ್ರ=ಈ ರಂಗಸ್ಥಳದಲ್ಲಿರುವ ಅಖಿಲೋಜನಃ= ಎಲ್ಲಾ ಭಕ್ತಜನವು ಮುದಮೋದ=ಸಂತೋಷ ಪಟ್ಟಿತು. ಅಖಿಲೋಜನಃ=ಎಲ್ಲಾ ದ್ವೇಷಿ ಜನವು ಶುಶೋಷ=ಶೋಕವನ್ನು ಹೊಂದಿತು. ಸೂರ್ಯೇ=ಸೂರ್ಯನು ಉದ್ಯತಿಸತಿ=ಉದಯಿಸುತ್ತಿರಲು ಕಂಜಂ=ಕಮಲವು ಯಥಾ=ಹೇಗೆ ಅರಳುತ್ತದೋ ತಥಾ=ಹಾಗೆ ಅಜೇ = ಉತ್ಪತ್ತಿ ಇಲ್ಲದ ಶ್ರೀಕೃಷ್ಣನು ಉದ್ಯತಿಸತಿ = ರಂಗವನ್ನು ಪ್ರವೇಶಿಸುತ್ತಿರಲು ಅನುಭವಿನಃ=ಪರಮಾತ್ಮನಿಗೆ ಅನುಕೂಲವಾದ ಜನ್ಮ ಉಳ್ಳ ಜ್ಞಾನಿಗಳು ಮುಮುದಂ=ಸಂತೋಷ ಪಟ್ಟನು. ಸೂರ್ಯನು ಉದಯಿಸುತ್ತಿರಲು ಕುಮುದಂ ಚ=ಕುಮುದ ಪುಷ್ಪವೂ ಕೂಡ ಯಥಾ=ಹೇಗೆ ಮುಕುಲೀಭಾವವನ್ನು ಹೊಂದುತ್ತದೋ ತಥಾ=ಹಾಗೆಯೇ ಅಜೇಉದ್ಯತಿ ಸತಿ=ಶ್ರೀಕೃಷ್ಣನು ರಂಗವನ್ನು ಪ್ರವೇಶಿಸುತ್ತಿರಲು ವಿಪರೀತಕಾಃ=ಹರಿವಿರುದ್ಧರಾದ ಕುತ್ಸಿತಜನರು ಶುಶುಚುಃ=ದುಃಖವನ್ನು ಹೊಂದಿದರು ॥ ೧೧೬ ॥

ರಂಗಂ ಪ್ರವಿಷ್ಟಮಭಿವೀಕ್ಷ್ಯಜಗಾದಮಲ್ಲಃ ಕಂಸಪ್ರಿಯಾರ್ಥಮಭಿಭಾಷ್ಯ ಜಗನ್ನಿವಾಸಂ ।
ಚಾಣೂರ ಇತ್ಯಭಿಹಿತೋ ಜಗತಾಮವಧ್ಯಃ ಶಂಭುಪ್ರಸಾದತ ಇದಂ ಶೃಣುಮಾಧವೇತಿ ॥ ೧೧೭ ॥

ಚಾಣೂರ ಇತಿ=ಚಾಣೂರನೆಂದು ಅಭಿಹಿತಃ=ಹೇಳಿಸಿಕೊಳ್ಳಲ್ಪಡುವ ಶಂಭುಪ್ರಸಾದತಃ=ರುದ್ರನ ಅನುಗ್ರಹದಿಂದ ಜಗತಾಂ ಸಕಾಶಾತ್ = ಜಗತ್ತಿನ ದೆಸೆಯಿಂದ ಅವಧ್ಯಃ=ನಾಶವಿಲ್ಲದ ಮಲ್ಲಃ=ಜಟ್ಟಿಯು ರಂಗಂ=ರಂಗಸ್ಥಳವನ್ನು ಪ್ರವಿಷ್ಟಂ= ಪ್ರವೇಶಿಸಿದ ಶ್ರೀಕೃಷ್ಣನನ್ನು ಅಭಿವೀಕ್ಷ್ಯ=ನೋಡಿ ಜಗನ್ನಿವಾಸಂ=ಜಗತ್ತಿಗೆ ಆಶ್ರಯನಾದ ಶ್ರೀಕೃಷ್ಣನನ್ನು ಹೇ ಮಾಧವ= ಎಲೋ ಶ್ರೀಕೃಷ್ಣನೇ ಇತಿ=ಎಂದು ಅಭಿಭಾಷ್ಯ=ಸಂಬೋಧನೆಯಿಂದ ಅಭಿಮುಖೀಕರಿಸಿ ಇದಂ=ಮುಂದೆ ಹೇಳುವ ಮಾತನ್ನು ~~ಶೃಣು=ಕೇಳು ಇತಿ =ಎಂದು ಕಂಸಪ್ರಿಯಾರ್ಥಂ=ಕಂಸನಿಗೆ ಸಂತೋಷವಾಗುವುದಕ್ಕೋಸ್ಕರ ಜಗಾದ=ಹೇಳಿದನು. ॥ ೧೧೭ ॥~~

ರಾಜ್ಞೈವ ದೈವತಮಿತಿ ಪ್ರವದಂತಿ ವಿಪ್ರಾ ರಾಜ್ಞಃ ಪ್ರಿಯಂ ಕೃತವತಃ ಪರಮಾಹಿಸಿದ್ಧಿಃ ।
ಯೋತ್ಸ್ಯೈವ ತೇನ ನೃಪತಿಪ್ರಿಯ ಕಾಮ್ಯಯಾ ವಾಂ ರಾಮೋಽಭಿಯುಧ್ಯತು ಬಲೀ ಸಹಮುಷ್ಟಿ-
ಕೇನ ॥ ೧೧೮ ॥

ಹಿ=ಯಾವ ಕಾರಣದಿಂದ ವಿಪ್ರಾಃ=ಬ್ರಾಹ್ಮಣರು ರಾಜ್ಞೈವ=ರಾಜನೇ ದೈವತಮಿತಿ=ದೇವತೆಯೆಂದು ಪ್ರವದಂತಿ= ಹೇಳುತ್ತಾರೋ ಅತಃ=ಆದ್ದರಿಂದ ರಾಜ್ಞಃ=ರಾಜನಿಗೆ ಪ್ರಿಯಂ=ಸಂತೋಷವನ್ನು ಕೃತವತಃ=ಮಾಡತಕ್ಕ ಪುರುಷನಿಗೆ ಪರಮಾಸಿದ್ಧಿಃ=ಮೋಕ್ಷರೂಪವಾದ ಉತ್ತಮ ಸಿದ್ಧಿಯು ಭವತೀತಿ=ಆಗುತ್ತದೆಂದು ಪ್ರವದಂತಿ=ಹೇಳುತ್ತಾರೆ. ತೇನ=ಆ ಕಾರಣದಿಂದ ನೃಪತಿಪ್ರಿಯಕಾಮ್ಯಯಾ=ರಾಜನಿಗೆ ಪ್ರೀತಿಯನ್ನುಂಟು ಮಾಡುವ ಇಚ್ಛೆಯಿಂದ ಆವಾಂ=ನಾವಿಬ್ಬರು ಯೋತ್ಸ್ಯೇವಃ=ಯುದ್ಧ ಮಾಡುವ, ಬಲೀ=ಬಲಿಷ್ಠನಾದ ರಾಮಃ=ಬಲರಾಮನು ಮುಷ್ಟಿಕೇನ=ಮುಷ್ಟಿಕನಿಂದ ಸಹ= ಕೂಡಿಕೊಂಡು ಅಭಿಯುಧ್ಯತು=ಯುದ್ಧ ಮಾಡಲಿ. ॥ ೧೧೮ ॥

ಇತ್ಯುಕ್ತ ಆಹಭಗವಾನ್ ಪರಿಹಾಸಪೂರ್ವಮೇವಂ ಭವತ್ವಿತಿ ಸ ತೇನ ತದಾಭಿಯಾತಃ ।
ಸಂದರ್ಶ್ಯದೈವತಪತಿಯುಧಿ ಮಲ್ಲಲೀಲಾಂ ಮೌಹೂರ್ತಿಕೇಮುಥಪದೋರ್ಜಗೃಹೇಸ್ವಶತ್ರುಂ ॥ ೧೧೯ ॥

ಇತ್ಯುಕ್ತಃ=ಈ ರೀತಿಯಾಗಿ ಹೇಳಿಸಿಕೊಳ್ಳಲ್ಪಟ್ಟ ಭಗವಾನ್=ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನು ಪರಿ ಹಾಸಪೂರ್ವಂ=ವಿನೋದಪೂರ್ವಕವಾದದ್ದು ಹೇಗೋ ಹಾಗೆ ಏವಂ ಭವತು=ಹಿಂದೆ ಹೇಳಿದ ಹಾಗೆ ನಿಮಗೆ ರಾಜನು ದೇವತೆ ಯಾಗಲಿ ಇತಿ=ಎಂದು ಆಹ=ಹೇಳಿದನು. ತದಾ = ಆಗ ತೇನ=ಆ ಚಾಣೂರನಿಂದ ಅಭಿಯಾತಃ=ಹೊಂದಿಸಿಕೊಳ್ಳಲ್ಪಟ್ಟ ದೈವತಪತಿಃ=ದೇವತೆಗಳಿಗೆ ಸ್ವಾಮಿಯಾದ ಸಃ=ಆ ಶ್ರೀಕೃಷ್ಣನು ಯುಧಿ=ಮಲ್ಲಯುದ್ಧದಲ್ಲಿ ಮೌಹೂರ್ತಿಕೇಂ=ಎರಡು

ಘಳಿಗೆ ಕಾಲ ಸಂಬಂಧಿಯಾದ ಅಂದರೆ ಎರಡು ಘಳಿಗೆ ತನಕ ಮಲ್ಲಲೀಲಾಂ=ಮಲ್ಲಶಿಕ್ಷೆಯನ್ನು ಸಂದರ್ಶ್ಯ=ತೋರಿಸಿ ಅಥ= ಒಂದು ಮುಹೂರ್ತ ನಂತರ ಸ್ವಶತ್ರುಂ=ತನಗೆ ಶತ್ರುವಾದ ಚಾಣೂರನನ್ನು ಪದೋಃ=ಕಾಲುಗಳಲ್ಲಿ ಜಗೃಹೇ= ಹಿಡಿದನು. ॥ ೧೧೯ ॥

ಉತ್ಕ್ಷಿಪ್ಯ ತಂ ಗಗನಗಂ ಗಿರಿಸನ್ನಿಕಾಶಮುದ್ಭ್ರಾಮ್ಯ ಚಾಥಶತಶಃ ಕುಲಿಶಾಕ್ಷ ತಾಂಗಂ ।
ಆವಿಧ್ಯದುರ್ಧರಬಲೋ ಭುವಿ ನಿಷ್ಪಿಪೇಷ ಚೂರ್ಣೀಕೃತಃ ಸ ನಿಪಪಾತಯಥಾಗಿರೀಂದ್ರಃ ॥ ೧೨೦ ॥

ದುರ್ಧರ ಬಲಃ=ಸಹಿಸಲಿಕ್ಕೆ ಅಶಕ್ಯವಾದ ಸಾಮರ್ಥ್ಯವುಳ್ಳ ಶ್ರೀಕೃಷ್ಣನು ತಂ=ಆ ಚಾಣೂರನನ್ನು ಉತ್ಕ್ಷಿಪ್ಯ=, ಮೇಲಕ್ಕೆ ಹಾಗಿಸಿ ಗಗನಗಂ=ಆಕಾಶದಲ್ಲಿರತಕ್ಕ ಗಿರಿಸನ್ನಿಕಾಶಂ=ಪರ್ವತಕ್ಕೆ ಸದೃಶನಾದ ಕುಲಿತಾಕ್ಷತಾಂಗಂ=ವಜ್ರಾಯುಧ ದಿಂದಲೂ ಗಾಯಗೊಳ್ಳದ ಅವಯವ ಉಳ್ಳ ಚಾಣೂರನನ್ನು ಶತಶಃ=ನೂರಾರು ಬಾರಿ ಉದ್ಭ್ರಾಮ್ಯ = ತಿರುಗಿಸಿ ಅಥ= ಅನಂತರ ಭುವಿ=ಭೂಮಿಯಲ್ಲಿ ಅವಿಧ್ಯ=ಕೆಡಹಾಕಿ ನಿಷ್ಪಿಪೇಷ = ಪಾದದಿಂದ ಮರ್ದಿಸಿದನು. ಚೂರ್ಣೀಕೃತಃ=ಪುಡಿ ಮಾಡ ಲ್ಪಟ್ಟ ಸಃ = ಆಚಾಣೂರನು ಗಿರೀಂದ್ರಃ=ಪರ್ವತ ಶ್ರೇಷ್ಠವು ಯಥಾ=ಹೇಗೋ ತಥಾ=ಹಾಗೆ ನಿಪಪಾತ = ಬಿದ್ದನು. ॥೧೨೦॥

ಕೃಷ್ಣಂಚ ತುಷ್ಟುವುರಥೋ ದಿವಿದೇವ ಸಂಘಾ ಮರ್ತ್ಯಾಭುವಿ ಪ್ರವರ ಮುತ್ತಮ ಪೂರುಷಾಣಾಂ ।
ತದ್ವದ್ಬಲಸ್ಯ ದೃಢ ಮುಷ್ಟಿ ನಿಪಿಷ್ಟಮೂರ್ಧಾ ಭೃಷ್ಟಸ್ತದೈವ ನಿಪಪಾತ ಸ ಮುಷ್ಟಿಕೋಽಪಿ ॥ ೧೨೧ ॥

ಅಥೋ=ಅನಂತರ ಉತ್ತಮಪೂರೂಷಾಣಾಂ=ಶ್ರೇಷ್ಠ ಪುರುಷರ ಮಧ್ಯದಲ್ಲಿ ಪ್ರವರಂ=ಶ್ರೇಷ್ಠನಾದ ಅಂದರೆ ಪುರುಷೋತ್ತಮನಾದ ಕೃಷ್ಣಂ=ಶ್ರೀಕೃಷ್ಣನನ್ನು ದಿವಿ=ಸ್ವರ್ಗದಲ್ಲಿ ದೇವಸಂಘಾಃ=ದೇವತೆಗಳ ಸಮೂಹಗಳು ಭುವಿ=ಭೂಮಿ ಯಲ್ಲಿ ಮರ್ತ್ಯಾಶ್ಚ = ಮನುಷ್ಯರೂ ಕೂಡ ತುಷ್ಟುವುಃ=ಸ್ತುತಿಸಿದರು. ತದ್ವತ್=ಆ ಚಾಣೂರನಂತೆ ಬಲಸ್ಯ=ಬಲರಾಮನ ದೃಢವಮುಷ್ಟಿನಿಪಿಷ್ಟಮೂರ್ಧಾ=ಗಟ್ಟಿಯಾದ ಮುಷ್ಟಿಪಾತದಿಂದ ಪುಡಿ ಮಾಡಲ್ಪಟ್ಟ ತಲೆಯುಳ್ಳ ಸಮುಷ್ಟಿಕೋಽಪಿ=ಆ ಮುಷ್ಟಿಕನೂ ಕೂಡ ತದೈವ=ಆ ಚಾಣೂರನು ಸತ್ತಾಗಲೇ ಭೃಷ್ಟಃಸನ್=ಮೃತನಾಗಿ ನಿಪಪಾತ=ಬಿದ್ದನು. ॥ ೧೨೧ ॥

ಕೂಟಶ್ಚ ಕೋಸಲಉತ ಫಲನಾಮಧೇಯೋದ್ವೌತತ್ರಕೃಷ್ಣನಿಹತಾವಪರೋಬಲೇನ ।
ಕಂಸಸ್ಯಯೇತ್ವಪರಜಾಶ್ಚ ಸುನೀಥಮುಖ್ಯಾಃ ಸರ್ವೇ ಬಲೇನವಿಹತಾಃಪರಿಘೇಣವೀರಾಃ ॥ ೧೨೨ ॥

ತತ್ರ=ಆ ಯುದ್ಧದಲ್ಲಿ ಕೂಟಃ=ಕೂಟನು ಕೋಸಲಶ್ಚ=ಕೋಸಲನೂ ಕೂಡ ದ್ವೌ=ಇಬ್ಬರೂ ಕೃಷ್ಣನಿಹತೌ = ಕೃಷ್ಣನಿಂದ ಕೊಲ್ಲಲ್ಪಟ್ಟರು ಉತ=ಅನಂತರ ಅಪರಃ=ಇತರನಾದ ಫಲನಾಮಧೇಯಃ=ಫಲನೆಂದು ಹೆಸರುಳ್ಳವನು ಬಲೇನ= ಬಲರಾಮನಿಂದ ನಿಹತಃ=ಸಂಹೃತನಾದನು ಕಂಸಸ್ಯ=ಕಂಸನ ಯೇ=ಯಾವ ಅವರಜಾಃ=ತಮ್ಮಂದಿರಾದ ವೀರಾಃ=ಪರಾ ಕ್ರಮಿಗಳಾದ ಸುನೀಥಮುಖ್ಯಾಃ=ಸುನೀಥನೇ ಪ್ರಧಾನರಾಗಿ ಉಳ್ಳವರೋ ತೇಸರ್ವೇ=ಅವರೆಲ್ಲರೂ ಬಲೇನ = ಬಲರಾಮ ನಿಂದ ಪರಿಘೇಣ=ಪರಿಘವೆಂಬ ಆಯುಧದಿಂದ ನಿಹತಾಃ=ಕೊಲ್ಲಲ್ಪಟ್ಟರು. ॥ ೧೨೨ ॥

ತಾಭ್ಯಾಂ ಹತಾನಭಿಸಮೀಕ್ಷ್ಯ ನಿಜಾನ್ಸಮಸ್ತಾನ್ ಕಂಸೋದಿದೇಶಬಲಮುಕ್ಷಯ ಮುಗ್ರವೀರ್ಯಂ ॥
ರುದ್ರಪ್ರಸಾದಕೃತರಕ್ಷಗ ಮವಧ್ಯಮೇತೌ ನಿಸ್ಸಾರ್ಯ ದಂಡಮಧಿಕಂ ಕುರುತೇಽತಿಪಾಪಃ ॥ ೧೨೩ ॥

ಅತಿಪಾಪಃ=ಅತ್ಯಂತ ಪಾಪಿಷ್ಠನಾದ ಕಂಸಃ=ಕಂಸನು ಸಮಸ್ತಾನ್=ಎಲ್ಲಾ ನಿಜಾನ್=ತನ್ನವರನ್ನು ತಾಭ್ಯಾಂ=ಆಕೃಷ್ಣ ರಾಮರಿಂದ ಹತಾನ್=ಕೊಲ್ಲಲ್ಪಟ್ಟವರನ್ನಾಗಿ ಅಭಿಸಮೀಕ್ಷ್ಯ=ನೋಡಿ ಅಕ್ಷಯಂ=ಶಸ್ತ್ರಾಸ್ತ್ರಬಲ ಶಿಕ್ಷಾದಿಗಳಿಂದ ಹ್ರಾಸವಿಲ್ಲದ ಉಗ್ರವೀರ್ಯಂ=ಕ್ರೂರ ಪರಾಕ್ರಮ ಉಳ್ಳ ರುದ್ರಪ್ರಸಾದ ಕೃತರಕ್ಷಂ=ರುದ್ರನ ಅನುಗ್ರಹದಿಂದ ಮಾಡಲ್ಪಟ್ಟ ರಕ್ಷಣೆಯುಳ್ಳ ಅವಧ್ಯಂ=ಯಾರಿಂದಲೂ ನಾಶವಿಲ್ಲದ ಬಲಂ=ಸೈನ್ಯವನ್ನು ಏತೌ=ಈ ಕೃಷ್ಣರಾಮರನ್ನು ನಿಸ್ಸಾರ್ಯ=ದೂರ ಕಳುಹಿಸಿ, ಅಧಿಕಂ=ಹೆಚ್ಚಾದ ದಂಡಂ=ಶಿಕ್ಷೆಯನ್ನು ಕುರುತ=ಮಾಡಿರಿ ಇತಿ = ಎಂದು ದಿದೇಶ=ಆಜ್ಞಾಪಿಸಿದನು. ॥ ೧೨೩ ॥

ಶ್ರುತ್ವೇವರಾಜವಚನಂ ಬಲಮುಕ್ಷಯು ತದಕ್ಷೌಹಿಣೀದಶಕಯುಗ್ಮಮನಂತವೀರ್ಯಮ್ ।
ಕೃಷ್ಣಂ ಚಕಾರ ವಿವಿಧಾಸ್ತ್ರಧರಂ ಸ್ವಕೋಷ್ಠೇ ಸಿಂಹಂಯಥಾಽಖಿಲಸೃಗಾಲಬಲಂ ಸಮೇತಮ್॥ ೧೨೪ ॥

ಅಕ್ಷಯಂ=ನಾಶರಹಿತವಾದ ವಿವಿಧಾಸ್ತ್ರಧರಂ=ನಾನಾವಿಧಗಳಾದ ಅಸ್ತ್ರಗಳನ್ನು ಧರಿಸಿರುವ ಅಕ್ಷೌಹಿಣೀದಶಕ ಯುಗ್ಮಂ=ಇಪ್ಪತ್ತು ಅಕ್ಷೌಹಿಣೀ ಸಂಖ್ಯಾಕವಾದ ತತ್=ಆ ಪ್ರಸಿದ್ಧವಾದ ಬಲಂ=ಸೈನ್ಯವು ರಾಜವಚನಂ=ಕಂಸನ ಮಾತನ್ನು ಶ್ರುತ್ವೈವ=ಕೇಳಿದ ಅನಂತರವೇ ಸಮೇತಂ=ಮಿಲಿತವಾದ ಅಖಿಲಸೃಗಾಲಬಲಂ=ಎಲ್ಲಾ ನರಿಗಳ ಸೈನ್ಯವು ಇಲ್ಲಿ ಸಿಂಹವು ಇದೆ ಎಂಬ ತಿಳಿವಳಿಕೆ ಇಲ್ಲದಿರುವುದರಿಂದ ಸಿಂಹದ ಯಥಾಪ್ರಾಪ್ನೋತಿ= ಸಿಂಹವನ್ನು ಹೇಗೆ ಹೊಂದುತ್ತದೋ ತಥಾ= ಹಾಗೆಯೇ ಕೃಷ್ಣನ ಸಾಮರ್ಥ್ಯದ ಅಜ್ಞಾನದಿಂದ ಅನಂತವೀರ್ಯಂ = ಅಪರಿಮಿತ ಸಾಮರ್ಥ್ಯವುಳ್ಳ ಕೃಷ್ಣಂ = ಶ್ರೀಕೃಷ್ಣನನ್ನು ಸ್ವಕೋಷ್ಠೇ = ತಮ್ಮ ಮಧ್ಯದಲ್ಲಿ ಚಕಾರ = ಮಾಡಿಕೊಂಡಿತು. ನರಿಗಳು ಸಿಂಹವನ್ನು ತಮ್ಮ ಮಧ್ಯದಲ್ಲಿ ಮಾಡಿಕೊಂಡವು ಎಂಬ ಅರ್ಥವು ಬಾಧಿತವಾದ್ದರಿಂದ ಕೆಲವು ಪದಗಳನ್ನು ಅಧ್ಯಾಹಾರ ಮಾಡಿ ದುರ್ಘಟಾರ್ಥ ಪ್ರಕಾಶಿಕೆಯಲ್ಲಿ ಅರ್ಥ ಬರೆದಿರುವರು. ॥ ೧೨೪ ॥

ಜಾನನ್ನಪೀಶ್ವರ ಮನಂತಬಲಂ ಮಹೇಂದ್ರಃ ಕೃಷ್ಣಂ ನಿಜಂ ರಥಮಯಾತಯದಾಯುಧಾಢ್ಯಂ ।
ಶುಶ್ರೂಷಣಾಯ ಪರಮಸ್ಯ ಯಥಾ ಸಮುದ್ರಮರ್ಘೇಣ ಪೂರಯತಿ ಪೂರ್ಣಜಲಂಜನೋಽಯಂ॥೧೨೫॥

ಮಹೇಂದ್ರಃ = ದೇವೇಂದ್ರನು ಕೃಷ್ಣಂ = ಕೃಷ್ಣನನ್ನು ಈಶ್ವರಂ = ಎಲ್ಲಾ ಸಂಪತ್ತುಗಳಿಗೂ ಎಲ್ಲಾ ಲೋಕಗಳಿಗೂ ಸ್ವಾಮಿಯನ್ನಾಗಿಯೂ ಅನಂತಬಲಂ = ಅಪರಿಮಿತ ಸಾಮರ್ಥ್ಯ ಉಳ್ಳವನಾಗಿಯೂ ಅಂದರೆ ಅಪರಿಮಿತ ಸಾಮರ್ಥ್ಯ ಇರುವುದರಿಂದ ರಥ, ಆಯುಧಾದಿಗಳ ಅಪೇಕ್ಷೆ ಇಲ್ಲದವನನ್ನಾಗಿಯೂ ಜಾನನ್ನಪಿ = ತಿಳಿದವನಾದರೂ ಕೂಡ ಯಥಾ=ಹೇಗೆ ಅಯಂಜನಃ=ಈ ಭಕ್ತ ಜನವು ಪೂರ್ಣಜಲಂ=ಪರಿಪೂರ್ಣವಾದ ನೀರುಳ್ಳ ಸಮುದ್ರಂ=ಸಮುದ್ರವನ್ನು ಅರ್ಘೇಣ=ಅಂಜಲಿಯಿಂದ ಜಲ ಪ್ರದಾನದಿಂದ ಪೂರಯತಿ ತೃಪ್ತವಾದವನ್ನಾಗಿ ಕರೋತಿ=ಮಾಡುತ್ತದೋ ತಥಾ=ಹಾಗೆ ಪರಮಸ್ಯ=ಸರ್ವೋತ್ತಮನಾದ ಶ್ರೀ ಕೃಷ್ಣನ ಶುಶ್ರೂಷಣಾಯ=ಸೇವೆಯಿಂದುಂಟಾಗುವ ತೃಪ್ತಿಗೋಸ್ಕರ ನಿಜಂ=ಪರಮಾತ್ಮನಿಂದ ದತ್ತವಾದ ತನ್ನದ್ದಾದ ಆಯುಧಾಢ್ಯಂ = ಆಯುಧಗಳಿಂದ ಕೂಡಿದ ರಥಂ=ಸ್ಯಂದನವನ್ನು ಅಯಾತಯತ್=ಕಳುಹಿಸಿದನು. ॥ ೧೨೫ ॥

~~ಸ್ವಂಸ್ಯಂದನಂತು ಭಗವಾನ್ ಸಮುಪೇಂದ್ರದತ್ತಮಾರುಹ್ಯ ಸೂತ ವರಮಾತಲಿಸಂಗೃಹೀತಂ ।~~
~~ನಾನಾಯುಧೋಗ್ರ ಕಿರಣ ಸ್ತರಣೇರ್ಯಥೈವ ಧ್ವಾಂತಂ ವ್ಯನಾಶಯದಶೇಷತ ಆಶು ಸೈನ್ಯಂ ॥ ೧೨೬ ॥~~

ಸಃ=ಆದಾವ ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ಮಹೇಂದ್ರದತ್ತಂ=ದೇವೇಂದ್ರನಿಂದ ಕೊಡಲ್ಪಟ್ಟ ಸೂತವರಮಾತಲಿ ಸಂಗಹೀತಂ = ಇಂದ್ರನ ಸೂತಶ್ರೇಷ್ಠನಾದ ಮಾತಲಿಯಿಂದ ತರಲ್ಪಟ್ಟ ಸ್ವಂತು=ತನ್ನದ್ದೇ ಆದ ಸ್ಯಂದನಂ=ರಥವನ್ನು ಆರುಹ್ಯ = ಏರಿ ತರಣೇಃ=ಉಗ್ರ ಕಿರಣವುಳ್ಳ ಸೂರ್ಯನು ಧ್ವಾಂತಂ=ಕತ್ತಲೆಯನ್ನು ಯಥಾ = ಹೇಗೆ ಆಶು=ಕೂಡಲೇ ವಿನಾಶಯತಿ=ನಾಶ ಮಾಡುತ್ತಾನೋ ತಥೈವ=ಹಾಗೆಯೇ ನಾನಾಯುಧೋಗ್ರಕಿರಣಃ=ಅನೇಕ ವಿಧಗಳಾದ ಆಯುಧಗಳೆಂಬ ಕ್ರೂರ ತೇಜಸ್ಸುಳ್ಳ ಶ್ರೀಕೃಷ್ಣನು ಅಶೇಷತಃ = ಎಲ್ಲಾ ಸೈನ್ಯಂ=ಕಂಸನಸೈನ್ಯವನ್ನು ಆಶು=ಕೂಡಲೇ ವ್ಯನಾಶಯತ್ = ನಾಶ ಮಾಡಿದನು. ॥ ೧೨೬ ॥

ನಿಶ್ಶೇಷತೋ ವಿನೀಹತೇ ಸ್ವಬಲೇ ಸ ಕಂಸಶ್ಚರ್ಮಾಸಿಪಾಣಿರಭಿಯಾತು ಮಿಯೇಷ ಕೃಷ್ಣಮ್ ।
ತಾವತ್ತಮೇವ ಭಗವಂತ ಮಭಿಪ್ರಯಾತಮುತ್ತುಂಗಮಂಚಶಿರಸಿ ಪ್ರದದರ್ಶ ವೀರಮ್ ॥ ೧೨೭ ॥

ಸ ಕಂಸಃ=ಆ ಕಂಸನು ನಿಶ್ಶೇಷತಃ=ಎಲ್ಲಾ ಸ್ವಬಲೇ = ತನ್ನ ಸೈನ್ಯವು ವಿನಿಹತೇಸತಿ=ನಾಶವಾಗುತ್ತಿರಲು ಚರ್ಮಾಸಿಪಾಣಿಃಸನ್=ಚರ್ಮ ಮತ್ತು ಖಡ್ಗವು ಕೈಯಲ್ಲಿ ಉಳ್ಳವನಾಗಿ ಕೃಷ್ಣಂಪ್ರತಿ=ಕೃಷ್ಣನನ್ನು ಕುರಿತು ಯದಾ= ಯಾವಾಗ ಅಭಿಯಾತುಂ = ಯುದ್ಧಕ್ಕಾಗಿ ಬರಲು ಇಯೇಷ=ಇಚ್ಛಿಸಿದನೋ ತಾವದೇವ=ಆಗಲೇ ವಿರಂ=ರಂಗಸ್ಥಳದಲ್ಲಿರುವ ಪರಾಕ್ರಮಿಯಾದ ಅಭಿಪ್ರಯಾತಂ = ತನಗೆ ಎದುರಾಗಿ ಬರುತಕ್ಕ ಭಗವಂತಂ=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನನ್ನು ಉತ್ತುಂಗ ಮಂಚ ಶಿರಸಿ=ಉನ್ನತವಾದ ಮಂಚದ ಅಗ್ರ ಬಾಗದಲ್ಲಿ ಪ್ರದದರ್ಶ=ನೋಡಿದನು. ॥ ೧೨೭ ॥

ತಂಶ್ಯೇನ ವೇಗ ಮಭಿತಃ ಪ್ರತಿಸಂಚರಂತಂ ನಿಚ್ಛಿದ್ರಮಾಶು ಜಗೃಹೇ ಭಗವಾನ್ ಪ್ರಗೃಹ್ಯ ।
ಕೇಶೇಷುಚೈನಮಭಿಮೃಶ್ಯ ಕರೇಣ ವಾಮೇನೋದ್ಧೃತ್ಯ ದಕ್ಷಿಣಕರೇಣ ಜಘಾನಕೇಽಸ್ಯ ॥ ೧೨೮ ॥

ಭಗವಾನ್=ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಕೃಷ್ಣನು ಶ್ಯೇನವೇಗಂ=ಶ್ಯೇನಪಕ್ಷಿಯಂತೆ ವೇಗವುಳ್ಳ ಅಭಿತಃ=ಸುತ್ತಲೂ ನಿಚ್ಛಿದ್ರಂ=ಹಿಡಿಯಲು ಅವಕಾಶವಿಲ್ಲದ್ದು ಹೇಗೋ ಹಾಗೇ ಪ್ರತಿಸಂಚರಂತಂ=ತಿರುಗತಕ್ಕ ತಂ=ಆ ಕಂಸನನ್ನು ಪ್ರಗಹ್ಯ=ಹಿಡಿದು ಕೇಶೇಷು=ಕೂದಲುಗಳಲ್ಲಿ ಅಭಿಮೃಶ್ಯ=ಹಿಡಿದೆಳೆದು ಜಗೃಹೇ=ಹಿಡಿದನು. ಏನಂ=ಈ ಕಂಸನನ್ನು ವಾಮೇನಕರೇಣ=ಎಡಗೈಯಿಂದ ಉದ್ಧೃತ್ಯ=ಮೇಲಕ್ಕೆತ್ತಿ ದಕ್ಷಿಣಕರೇಣ=ಬಲಗೈಯಿಂದ ಅಸ್ಯ=ಈ ಕಂಸನ ಕೇ=ಶಿರಸ್ಸಿನಲ್ಲಿ ಜಘಾನ=ಹೊಡೆದನು. ॥ ೧೨೮ ॥

ಸಂಚಾಲಿತೇನ ಮುಕುಟೇನ ವಿಕುಂಡಲೇನ ಕರ್ಣದ್ವಯೇನ ವಿಗತಾಭರಣೋರಸಾಚ ।
ಸ್ರ್ವಸ್ತಾಂಬರೇಣ ಜಘನೇನ ಸುಶೋಚ್ಯರೂಪಃ ಕಂಸೋ ಬಭೂವ ನರಸಿಂಹಕರಾಗ್ರಸಂಸ್ಥಃ ॥೧೨೯॥

ನರಸಿಂಹಕರಾಗ್ರಸಂಸ್ಥಃ=ಪುರುಷ ಶ್ರೇಷ್ಠನಾದ ಶ್ರೀಕೃಷ್ಣನ ಹಸ್ತತಲದಲ್ಲಿರತಕ್ಕ ಕಂಸಃ=ಕಂಸನು ಸಂಚಾಲಿತೇನ=ಬಿದ್ದಿರುವ ಮುಕುಟೇನ=ಕಿರೀಟದಿಂದ ಅಂದರೆ ಬಿದ್ದಿರುವ ಕೀರೀಟವುಳ್ಳ ಶಿರಸ್ಸಿನಿಂದ, ವಿಕುಂಡಲೇನ=ಹೋಗಲ್ಪಟ್ಟ ಕುಂಡಲಗಳುಳ್ಳ ಕರ್ಣದ್ವಯೇನ=ಕಿವಿಗಳೆರಡರಿಂದ ವಿಗತಾಭರಣೋರಸಾಚ=ಹೋಗಲ್ಪಟ್ಟ ಆಭರಣಗಳುಳ್ಳ ಎದೆಯಿಂದಲೂ ಕೂಡ ಸ್ರಸ್ತಾಂಬರೇಣ=ಸಡಿಲಾದ ವಸ್ತ್ರವುಳ್ಳ ಜಘನೇನ=ಸೊಂಟದಿಂದ ಸುಶೋಚ್ಯರೂಪಃ=ಅತ್ಯಂತ ದುಃಖಿವಾದ ಸ್ವರೂಪವುಳ್ಳವನು. ಬಭೂವ=ಆದನು. ॥ ೧೨೯ ॥

ಉತ್ಕೃಷ್ಯತಂ ಸುರಪತಿಃ ಪರಮೋಚ್ಚಮುಂಚಾದನ್ಯೈರಜೇಯಮತಿ ವೀರ್ಯಬಲೋಪಪನ್ನಂ ।
ಆಬ್ರೋದ್ಭವೇಶ ವರಗುಪ್ತಮನಂತಶಕ್ತಿ ಭೂಮೌನಿಪಾತ್ಯ ಪದಯೋಃ ಪ್ರಹಾರಂ ॥ ೧೩೦ ॥

ಅನಂತಶಕ್ತಿಃ = ಅಪರಿಮಿತ ಸಾಮರ್ಥವುಳ್ಳ ಸುರಪತಿಃ=ದೇವತೆಗಳಿಗೆ ಸ್ವಾಮಿಯಾದ ಸಃ=ಆ ಶ್ರೀಕೃಷ್ಣನು ಅನ್ಯೈಃ=ಇತರರಿಂದ ಅಜೇಯಂ=ಪರಾಜಯ ರಹಿತನಾದ ಅತಿವೀರ್ಯಬಲೋಪಪನ್ನಂ=ಅಧಿಕ ಪರಾಕ್ರಮ ಸಾಮರ್ಥ್ಯಗಳಿಂದ ಕೂಡಿದ ಆಬ್ರೋದ್ಭವೇಶರಗುಪ್ತಂ=ಕವಂಲದಿಂದ ಹುಟ್ಟಿದ ಬ್ರಹ್ಮನು, ರುದ್ರನೂ ಇವರ ವರದಿಂದ ರಕ್ಷಿತನಾದ ತಂ = ಆ ಕಂಸನನ್ನು ಪರಮೋಚ್ಚ ಮುಂಚಾತ್=ಉತ್ತಮವಾದ ಎತ್ತರವಾದ ಮುಂಚಕದಿಂದ ಉತ್ಕೃಷ್ಯ = ಎಳೆದು ಭೂಮೌ= ಭೂತಲದಲ್ಲಿ ನಿಪಾತ್ಯ=ಕೆಡಹಾಕಿ ಪದಯೋ=ಕಾಲುಗಳ ಪ್ರಹಾರಂ ಏಟನ್ನು ಕಂಸಾಯ=ಕಂಸನಿಗೋಸ್ಕರ ದದೌ= ಕೊಟ್ಟನು. ॥ ೧೩೦ ॥

ದೇಹೇತು ಯೋಽಭವದ ಮುಷ್ಯ ರಮೇಶ ಬಂಧುರ್ವಾಯುಃ ಸ ಕೃಷ್ಣತನುಮಾಶ್ರಯದನ್ಯ ಪಾಪಂ।
ದೈತ್ಯಂ ಚಕರ್ಷ ಹರಿರತ್ರ ಶರೀರಸಂಸ್ಥಂ ಪಶ್ಯತ್ಸು ಕಂಜ ಜಮುಖೇಷು ಸುರೇಷ್ವನಂತಃ ॥ ೧೩೧ ॥

ಅಮುಷ್ಯ=ಈ ಕಂಸನ ದೇಹೇತು=ಶರೀರದಲ್ಲಾದರೂ, ರಮೇಶ ಬಂಧುಃ=ಲಕ್ಷ್ಮೀ ಸ್ವರೂಪಳಾದ ಜಯಾದೇವಿಗೆ ಪತಿಯಾದ ಸಂಕರ್ಷಣನ ಪುತ್ರನಾದ ಯಃ=ಯಾವ ವಾಯುಃ= ವಾಯುದೇವರು ಅಭವತ್=ಇದ್ದರೋ ಸಃ=ಆ ಮುಖ್ಯ ಪ್ರಾಣ ದೇವರು ಕೃಷ್ಣತನುಂ = ಶ್ರೀಕೃಷ್ಣನ ಶರೀರವನ್ನು ಆಶ್ರಯತ್ = ಪ್ರವೇಶಿಸಿದರು. ಅನಂತಃ = ಗುಣಪೂರ್ಣನಾದ ಹರಿಃ=ಶ್ರೀಕೃಷ್ಣನು ಕಂಜಜಮುಖೇಷು=ಬಹ್ಮನೇ ಪ್ರಧಾನರಾಗಿ ಉಳ್ಳ ಸುರೇಷು=ದೇವತೆಗಳು ಪಶ್ಯತ್ಸು ನೋಡುತ್ತಿರಲು ಅತ್ರ=ಈ ಕಂಸನಲ್ಲಿ ಶರೀರಸಂಸ್ಥಂ=ಶರೀರದಲ್ಲಿರತಕ್ಕ ಆಸ್ಯ ಪಾಪಂ=ಪ್ರಾಯುವಿನಿಂದ ಬೇರೆಯಾದ ಪಾಪಿಷ್ಠನಾದ ದೈತ್ಯಂ=ಕಾಲನೇಮಿ ಎಂಬ ದೈತ್ಯನನ್ನು ಚಕರ್ಷ=ತಮಸ್ಸನ್ನು ಕುರಿತು ಸೆಳೆದನು. ॥ ೧೩೧ ॥

ದ್ವೇಷಾತ್ಸ ಸರ್ವಜಗದೇಕಗುರೋಃ ಸ್ವಕೀಯೈಃ ಪೂರ್ವಂ ಪ್ರಮಾಪಿತಜನೈಃ ಸಹಿತಃ ಸಮಸ್ತೈಃ ।
ಧಾತ್ರ್ಯಾದಿಭಿಃ ಪ್ರತಿಯಯೌ ಕುಮತಿಸ್ತಮೋಽಂಧ ಮನ್ಯೇಪಿ ಚೈವಮುಪಯಾಂತಿ ಹರಾವಭಕ್ತಾಃ ॥೧೩೨॥

ಕುಮತಿಃ=ಪಾಪಯುಕ್ತವಾದ ಬುದ್ಧಿಯುಳ್ಳ ಸಃ=ಆ ಕಂಸನು ಸರ್ವಜಗದೇಕಗುರೋಃ=ಎಲ್ಲಾ ಲೋಕಗಳಿಗೆ ಮುಖ್ಯ ಉಪದೇಶಕನಾದ ಶ್ರೀಕೃಷ್ಣನ ದ್ವೇಷಾತ್=ವಿರೋಧದಿಂದ ಪೂರ್ವಂ=ಹಿಂದೆ ಪ್ರಮಾಪಿತಜನೈಃ=ಕೊಲ್ಲಲ್ಪಟ್ಟ ಜನರಿಂದ ಧಾತ್ರ್ಯಾದಿಭಿಃ=ಪೂತನಿಯೇ ಮೊದಲಾಗಿ ಉಳ್ಳ ಸಮಸ್ತೈಃ=ಎಲ್ಲಾ ಸ್ವಕೀಯೈಃ=ತನ್ನವರಿಂದ ಸಹಿತಃಸನ್=ಕೂಡಿದವನಾಗಿ ಅಂಧಂತಮಃ = ಅಂಧಂ ತಮಸ್ಸನ್ನು ಪ್ರತಿಯಯೌ=ಹೊಂದಿದನು. ಅನ್ಯೇ=ಇತರರಾದ ಹರೌ=ಶ್ರೀ ಪರಮಾತ್ಮನಲ್ಲಿ ಅಭಕ್ತಾಅಪಿ=ದ್ವೇಷಿಗಳೂ ಕೂಡ ಏವಮೇವ=ಈ ಕಂಸನಂತೆಯೇ ಅಂಧಂತಮಃ=ಅಂಧತಮಸ್ಸನ್ನು ಉಪಯಾಂತಿ= ಹೊಂದುತ್ತಾರೆ. ॥ ೧೩೨ ॥

ನಿತ್ಯಾತಿದುಃಖಮನಿವೃತ್ತಿ ಸುಖವ್ಯಪೇತ ಮಂಧಂತಮೋನಿಯತಮೇತಿ ಹರಾವ ಭಕ್ತಃ ।
ಭಕ್ತೋsಪಿ ಕಂಜಜಗಿರೀಶ ಮುಖೇಷು ಸರ್ವಥರ್ಮಾರ್ಣವೋsಪಿ ನಿಖಿಲಾಗಮ ನಿರ್ಣಯೇನ ॥೧೩೫॥

ತಮಸ್ಸಿನ ಸ್ವರೂಪವನ್ನು ಹೇಳುತ್ತ ಹಿಂದೆ ಹೇಳಿದ ಅರ್ಥವನ್ನೇ ವಿಶದ ಮಾಡುತ್ತಾರೆ.

ಕಂಜಜಗಿರೀಶಮುಖೇಷು = ಕಮಲದಿಂದ ಉತ್ಪತ್ತಿಯುಳ್ಳ ಬ್ರಹ್ಮನು. ಹಿಮಾಲಯಕ್ಕೆ ಒಡೆಯನಾದ ರುದ್ರನೇ ಪ್ರಧಾನರಾಗಿ ಉಳ್ಳವರಲ್ಲಿ ಭಕ್ತೋಪಿ=ಭಕ್ತನಾದರೂ ಸರ್ವಥರ್ಮಾರ್ಣವೋಪಿ=ತನಗೆ ವಿಹಿತವಾದ ಎಲ್ಲಾ ಧರ್ಮಗಳ ಅನುಷ್ಠಾನ ಶೀಲತ್ವಳ್ಳವನಾದರೂ ಹರೌ=ಶ್ರೀ ಹರಿಯಲ್ಲಿ ಅಭಕ್ತಶ್ಚೇತ್=ಭಕ್ತನಲ್ಲದ ಪುರುಷನಾದರೆ ನಿತ್ಯಾತಿದುಃಖಂ= ಯಾವಾಗಲೂ ಬಹಳ ದುಃಖವುಳ್ಳ ಅನಿವೃತ್ತಿ=ಪುನರುತ್ಥಾನವಿಲ್ಲದ ಸುಖವ್ಯಪೇತಂ=ಸುಖದ ಲೇಶವೂ ಇಲ್ಲದ ಅಂಧಂ ತಮಃ = ಅಂಧಂತಮಸ್ಸನ್ನು ನಿಖಿಲಾಗಮನಿರ್ಣಯೇನ=ಸಕಲ ಆಗಮಗಳ ನಿರ್ಣಯದಿಂದ ನಿಯತಂ=ನಿಶ್ಚಯವಾಗಿಯೂ ಏತಿ=ಹೊಂದುತ್ತಾನೆ. ॥ ೧೩೫ ॥

ಯೋವೆತ್ತಿನಿಶ್ಚಿತಮತಿರ್ಹರಿ ಮಬ್ಜಜೇಶಪೂರ್ವಾಖಿಲಸ್ಯ ಜಗತಃ ಸಕಲೇsಪಿ ಕಾಲೇ ॥
ಸೃಷ್ಟಿಸ್ಥಿತಿ ಪ್ರಲಯ ಮೋಕ್ಷದಮಾತ್ಮತಂತ್ರಂ ಲಕ್ಷ್ಮ್ಯಾsಪೀಶಮತಿ ಭಕ್ತಿಯುತಃ ಸಮುಚ್ಯೇತ್॥ ೨೩೪॥

ಶ್ರೀಹರಿಯಲ್ಲಿ ಮಹಾತ್ಮಜ್ಞಾನಪೂರ್ವಕ ಸುದೃಢವಾದ ಸ್ನೇಹರೂಪವಾದ ಭಕ್ತಿಯಿಂದಲೇ ಮೋಕ್ಷಪ್ರಾಪ್ತಿಯೆಂಬುದನ್ನು ಹೇಳುತ್ತಾರೆ.

ಯಃ=ಯಾವ ಪುರುಷನು ಅಬ್ಜಜೇಶ ಪೂರ್ವಾಖಿಲಸ್ಯ=ಬ್ರಹ್ಮನು, ರುದ್ರನು ಇವರೇ ಮೊದಲಾಗಿ ಉಳ್ಳ ಎಲ್ಲಾ ಜಗತಃ=ಲೋಕಕ್ಕೆ ಸಕಲೇ=ಎಲ್ಲಾ ಕಾಲೇಪಿ=ಕಾಲದಲ್ಲಿಯೂ ಕೂಡ ಹರಿಂ=ಪರಮಾತ್ಮನನ್ನು ಸೃಷ್ಟಿ ಸ್ಥಿತಿಪ್ರಲಯ ಮೋಕ್ಷದಂ=ಸೃಷ್ಟಿ, ಸ್ಥಿತಿ, ಪ್ರಲಯ, ಮೋಕ್ಷಗಳನ್ನು ಕೊಡತಕ್ಕವನನ್ನಾಗಿ ಆತ್ಮತಂತ್ರಂ=ಸ್ವತಂತ್ರನನ್ನಾಗಿ ಲಕ್ಷ್ಮ್ಯಾsಪಿ=ರಮಾದೇವಿಗೂ ಕೂಡ ಈಶಂ=ಸ್ವಾಮಿಯನ್ನಾಗಿ ನಿಶ್ಚಿತಮತಿಃಸನ್=ಹಿಂದೆ ಹೇಳಿದಂತೆ ನಿರ್ಣಯಾತ್ಮಕ ಜ್ಞಾನವುಳ್ಳವನಾಗಿ ವೇತ್ತಿ= ತಿಳಿಯುತ್ತಾನೋ ಸಃ = ಅವನು ಹರೌ = ಪರಮಾತ್ಮನಲ್ಲಿ ಅತಿ ಭಕ್ತಿಯುತಃಸನ್ = ಅತಿಶಯಿತ ಭಕ್ತಿಯಿಂದ ಕೂಡಿದವನಾಗಿ ಮುಂಚ್ಯೇತ್ = ಮೋಕ್ಷವನ್ನು ಹೊಂದುವನು. ॥ ೧೩೪ ॥

ತಸ್ಮಾದನಂತ ಗುಣಪೂರ್ಣಮಮುಂರಮೇಶಂ ನಿಶ್ಚಿತ್ಯದೋಷರಹಿತಂ ಪರಯೈವ ಭಕ್ತ್ಯಾ ।
ವಿಜ್ಞಾಯ ದೈವತಗಣಾಂಶ್ಚ ಯಥಾ ಕ್ರಮೇಣ ಭಕ್ತಾ ಹರೇರಿತಿ ಸ ದೈವ ಭಜೇತ ಧೀರಃ ॥ ೧೩೫ ॥

ತಸ್ಮಾತ್=ಹರಿಯಲ್ಲಿ ಭಕ್ತಿಯು ತನು ಮುಕ್ತನಾಗುವನು ಎಂಬ ನಿಯಮದಿಂದ ಧೀರಃ = ದೃಢ ಭಕ್ತಿಯುಳ್ಳ ಪುರುಷನು ಅಮುಂ = ಈ ಶ್ರೀಹರಿಯನ್ನು ಅನಂತ ಗುಣಪೂರ್ಣಂ = ಅಪರಿಮಿತ ಜ್ಞಾನಾನಂದಾದಿ ಗುಣಗಳಿಂದ ಪರಿಪೂರ್ಣನನ್ನಾಗಿಯೂ ದೋಷ ರಹಿತಂ = ಅಜ್ಞಾನಾದಿ ದೋಷಗಳಿಲ್ಲದವನನ್ನಾಗಿಯೂ ರಮೇಶಂ=ಲಕ್ಷ್ಮೀಪತಿಯನ್ನಾಗಿಯೂ ನಿಶ್ಚಿತ್ಯ = ನಿರ್ಣಯಿಸಿ ಪರಯಾ = ಎಲ್ಲರ ದೆಸೆಯಿಂದಲೂ ಅಧಿಕವಾದ ಭಕ್ತ್ಯೈವ = ಮಹಾತ್ಮ್ಯ ಜ್ಞಾನಪೂರ್ವಕ ಸುದೃಢ ಸ್ನೇಹದಿಂದಲೇ ಸದೈವ = ಮುಂಕ್ತ್ಯವಸ್ಥೆಯಲ್ಲಿಯೂ ಕೂಡ ಭಜೇತ = ಸೇವಿಸತಕ್ಕದ್ದು. ದೈವತಗಣಾಂಶ್ಚ = ಬ್ರಹ್ಮಾದಿ ದೇವತೆಗಳ ಸಮೂಹಗಳನ್ನೂ ಕೂಡ ಯಥಾಕ್ರಮೇಣ = ಹಿಂದೆ ಹೇಳಿದ್ದ ತಾರತಮ್ಯ ಕ್ರಮದಿಂದ ವಿಜ್ಞಾಯ = ತಿಳಿದು ಹರೇಃ= ಪರಮಾತ್ಮನ ಭಕ್ತಾಃ = ಭಕ್ತರು ಇತಿ = ಈ ರೀತಿಯ ಬುದ್ಧಿಯಿಂದ ಭಜೇತ = ಸೇವಿಸತಕ್ಕದ್ದು. ॥ ೧೩೫ ॥

ನಿಹತ್ಯಕಂಸ ಮೋಜಸಾ ವಿಧಾತೃಶಂಭು ಪೂರ್ವಶೈಃ ।
ಸ್ತುತಃ ಪ್ರಸೂನ ವರ್ಷಿಭಿರ್ಮುನೋದಕೇಶವೋsಧಿಕಂ ॥ ೧೩೬ ॥

ಸದೈವ ಮೋದರೂಪಿಣೋ ಮುದೋಕ್ತಿ ರಸ್ಯಲೌಕಿಕೀ ।
ಯಥೋದಯೋ ರವೇರ್ಭವೇತ್ಯದೋ ದಿತಸ್ಯ ಲೋಕತಃ ॥ ೧೩೭ ॥

ಕೇಶವಃ=ಬ್ರಹ್ಮರುದ್ರಪ್ರೇರಕನಾದ ಶ್ರೀಕೃಷ್ಣನು ಓಜಸಾ=ಸಾಮರ್ಥ್ಯದಿಂದ ಕಂಸಂ=ಕಂಸನನ್ನು ನಿಹತ್ಯ= ಕೊಂದು ಪ್ರಸೂನವರ್ಷಿಭಿಃ=ಹೂಗಳಿಂದ ಮಳಿಗರಿಸತಕ್ಕ ವಿಧಾತೃಶಂಭುಪೂರ್ವಶೈಃ=ಬ್ರಹ್ಮ, ರುದ್ರರೇ ಮೊದಲಾಗಿ ಉಳ್ಳ ವರಿಂದ ಸ್ತುತಃಸನ್=ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವನಾಗಿ ಅಧಿಕಂ ಮುದಮವೋದ=ಹೆಚ್ಚು ಸಂತೋಷಪಟ್ಟನು 'ಇತಿ= ಎಂದು ಅಜ್ಞಜನಾಃ = ಅಜ್ಞಾನಿಗಳು ಅವದನ್ = ಹೇಳಿದರು." ಇಷ್ಟು ಅಧ್ಯಾಹಾರ ಮಾಡಿ ಇಟ್ಟುಕೊಳ್ಳಬೇಕು. ಹಾಗಾದರೆ ಕಂಸನನ್ನು ಕೊಂದು ಕೃಷ್ಣನು ಹೆಚ್ಚು ಸಂತೋಷಗೊಂಡನು ಎಂಬ ಪುರಾಣಗಳಲ್ಲಿ ಹೇಳಿದ್ದಕ್ಕೆ ಏನು ಸಮಾಧಾನ ಎಂಬ ಪ್ರಶ್ನೆಗೆ ಸಮಾಧಾನ ರೂಪವಾಗಿ "ಸದೈವ ಮೋದ ರೂಪಿಣಃ = ಎಂಬ ಶ್ಲೋಕವು ಸದೈವ=ಯಾವಾಗಲೂ ಮೋದ ರೂಪಿಣಃ = ಸಂತೋಷವು ಸ್ವರೂಪವಾಗಿ ಉಳ್ಳ ಅಸ್ಯ = ಈ ಶ್ರೀಕೃಷ್ಣನಿಗೆ ಪುರಾಣ ಸಂಬಂಧಿನೀ = ಪುರಾಣದಲ್ಲಿ ಹೇಳತಕ್ಕ ಮಂದೋಕ್ತಿಃ ಸಂತೋಷದ ಮಾತು ಲೌಕಿಕೀ = ಲೋಕದವರು ಹೇಳತಕ್ಕದ್ದನ್ನು ಅನುವಾದ ಮಾಡತಕ್ಕದ್ದು. ಲೋಕದವರು ಅವಿದ್ಯಮಾನವಾದ ಅರ್ಥದ ವ್ಯವಹಾರವನ್ನು ಮಾಡುತ್ತಾರೆ. ಎಂಬುದಕ್ಕೆ ದೃಷ್ಟಾಂತವನ್ನು ಹೇಳುತ್ತಾರೆ. ಯಥೋದಯಃ = ಎಂಬುದರಿಂದ ಲೋಕತಃ = ಲೋಕದವರ ಸದೋದಿತಸ್ಯ = ಯಾವಾಗಲೂ ಉದಯಿಸಿಕೊಂಡಿರುವ ರವೇಃ = ಸೂರ್ಯನ ವಿಷಯದಲ್ಲಿ ಉದಯಃ= ಸೂರ್ಯನು ಉದಯಿಸಿದನು ಎಂಬ ವ್ಯವಹಾರವು ಯಥಾ= ಹೇಗೋ ತಥಾ = ಹಾಗೆಯೇ ಕೃಷ್ಣನು ಅಧಿಕ ಸಂತೋಷವನ್ನು ಹೊಂದಿದನು. ಎಂದು ಅಜ್ಞಾನಿಗಳ ವ್ಯವಹಾರವೆಂದೂ ಕೃಷ್ಣನು ಸಂತೋಷಗೊಂಡನುಎಂಬ ಪುರಾಣಗಳಲ್ಲಿರುವ ಮಾತು ಅಜ್ಞಾನಿಗಳು ಹೇಳತಕ್ಕದ್ದನ್ನು ಅನುವಾದ ರೂಪವಾದದ್ದೆಂಬುದಾಗಿ ತಿಳಿಯತಕ್ಕದ್ದು

ಅನಂತಚಿತ್ಸುಖಾರ್ಣವಃ ಸದೋದಿತೈಕರೂಪಕಃ ।
ಸಮಸ್ತದೋಷ ವರ್ಜಿತೋ ಹರಿಗಿ ಣಾತ್ಮಕಃ ಸದಾ ॥ ೧೩೮ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮನ್ಮಹಾಭಾರತ
ತಾತ್ಪರ್ಯನಿರ್ಣಯೇ ಕಂಸವಧೋ ನಾಮ
ತ್ರಯೋದಶೋಽಧ್ಯಾಯಃ ॥ ೧೩ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಅವಃ- ಶ್ರೀಕೃಷ್ಣನಿಗೆ ಯಾವಾಗಲೂ ಮೋದರೂಪಿತ್ವವನ್ನು ಸಾಧಿಸಲು ಅವನ ಸ್ವರೂಪವನ್ನು ನಿರೂಪಿಸುತ್ತಾರೆ.

ಹರಿಃ = ಶ್ರೀಕೃಷ್ಣನು ಸದಾ = ಯಾವಾಗಲೂ ಅನಂತಚಿತ್ಸುಖಾರ್ಣವಃ=ಅಸಂಖ್ಯಾತಗಳಾದ ಜ್ಞಾನಾನಂದಾದಿ ಗುಣಗಳಿಂದ ಸಮುದ್ರದಂತಿರುವವನು. ಸದೋದಿತೈಕರೂಪಕಃ = ಯಾವಾಗಲೂ ಅಭಿವ್ಯಕ್ತವಾದ ಸ್ವರೂಪವುಳ್ಳವನು. ಸಮಸ್ತದೋಷ ವರ್ಜಿತಃ = ಅಖಿಲದೋಷರಹಿತನು ಗುಣಾತ್ಮಕಃ=ಆನಂದಾದಿ ಗುಣಗಳು. ದೇಹವಾಗಿ ಉಳ್ಳವನು.

ಹದಿಮೂರನೇ ಅಧ್ಯಾಯದ ಕನ್ನಡ ಅನುವಾದವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥